ಲಂಕೇಶ್

ನವೆಂಬರ್ 5, 2008 ರೂ. 12/-



ಲಿಂಗಾಯತರ ಸೇಡಿಗೆ

ಒಕ್ಕಲಿಗರು ಬಲಿ!

ಂಗಳೂರು ರಿಯಲ್ ಎಸ್ಟೇಟ್ ಖತಂ



ಧ್ವಿ ಪ್ರಜ್ಞಾ

ನಟಿ ಪಿಂಕಿ ಜೈಲುಪಾಲು



ಭಜರಂಗಿ ಬಾಂಬ್!

ಂಡ್ಯ: ಹೋಲ್‌ಸೇಲ್ ಖರೀದಿ!



ದನ್‌ಮಲ್ಲು ಮಂಗಾಟ

ನಗ್ಗಲ ಮುಳ್ಳು

ದೇವರ ಮೇಲೆ ದಾವೆ ಹೂಡುವಂತಿಲ್ಲ!

ಯಾಕೆ ಹೂಡುವಂತಿಲ್ಲ?

ಯಾಕೆಂದರೆ ದೇವರಿಗೆ ವಿಳಾಸ ಇಲ್ಲ!

ಇದು ಯಾರೋ ತಲೆ ಕೆಟ್ಟ ನಾಸ್ತಿಕನ ಹೇಳಿಕೆಯಲ್ಲ, ಅಮೆರಿಕದ ನ್ಯಾಯಾಲಯವೊಂದು ನೀಡಿರುವ ತೀರ್ಪು ಇದು.

ನಡೆದದ್ದು ಇಷ್ಟು:

ಬದುಕು ಅಸಹನೀಯವಾಗಿದೆ. ಭೀಕರ ಬಿರುಗಾಳಿ, ಭಯಾನಕ ಭೂಕಂಪ, ಅನಿರ್ದಿಷ್ಟ ನೆರೆ, ಹೃದಯ ಹಿಂಡುವ ರೋಗರುಜಿನಗಳು ಜನ್ಮಕ್ಕೇ ಅಂಟಿ ಬಂದ ಅಂಗವಿಕಲತೆ ಇಂತಹವುಗಳು ಈ ಭೂಮಿಯ ಮೇಲಿನ ಜನರನ್ನು ಕಾಡುತ್ತಿವೆ. ಆಧುನಿಕ ಮಾನವ ಭಗವಂತನನ್ನು ಮರೆತದ್ದರ ಫಲ ಇದು ಎಂದು ಭಾರತದ ಸನ್ಯಾಸಿಗಳಲ್ಲಿ ಹಲವರ ಅಭಿಪ್ರಾಯ. ಆಸರ್ವಾಂತರ್ಯಾಮಿಯಲ್ಲಿ ನಂಬಿಕೆಯೇ ಇದಕ್ಕೆ ಪರಿಹಾರ ಎಂಬುದು ಅವರ ಅಭಿಮತ. ಅಮೆರಿಕದ ಸೆನೆಟರ್ ಒಬ್ಬರ ಚಿಂತನೆ ಇದಕ್ಕೆ ವಿರುದ್ಧವಾಗಿತ್ತು. ಇಂತಹ ಅವಘಡಗಳನ್ನು ಕೂಡಲೆ ನಿಲ್ಲಿಸುವಂತೆ ಆ ಭಗವಂತನಿಗೆ 'ಶಾಶ್ವತ ಪ್ರತಿಬಂಧಕಾಜ್ಞೆ' ನೀಡಬೇಕೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ. ನ್ಯಾಯಾಧೀಶರಿಗೂ ಇದು ಸರ್ವಸಮ್ಮತ ಎನ್ನಿಸಿರ ಬಹುದಾದರೂ 'ದೇವರ ವಿಳಾಸ ಇಲ್ಲ' ಎಂಬ ಕಾರಣಕ್ಕಾಗಿ ಅರ್ಜಿಯನ್ನು ಪುರಸ್ಕರಿಸಲು ಅಸಾಧ್ಯ ಎಂದು ತಳ್ಳಿ ಹಾಕಿದರಂತೆ! ಜೆರುಸಲಂ, ವಾಟಿಕನ್ ಸಿಟಿ ಅವರ ನೆನಪಿಗೇ ಬರಲಿಲ್ಲವೋ ಅಲ್ಲಿ ಭಗವಂತ ಇರಲು ಸಾಧ್ಯ ಇಲ್ಲ ಎಂದು ಭಾವಿಸಿದರೋ ಅಥವಾ ಅವು ವ್ಯಾಪ್ತಿ ಪ್ರದೇಶದ ಹೊರಗಿನವು ಎಂದು ತೀರ್ಮಾನಿಸಿದರೋ ತಿಳಿದುಬಂದಿಲ್ಲ. ಒಂದು ಸಂಶಯ ಏನು ಅಂದರೆ....


ನಮಗೆ ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ, ಚುಂಚನಗಿರಿ ಭೈರವ, ಶೃಂಗೇರಿ ಶಾರದೆ -ಹೀಗೆ ಇಂತಹ ದೇವಾನುದೇವತೆಗಳ ಅಡ್ರೆಸ್ ಗೊತ್ತಿದೆ. ಇಂತಹ ದುರ್ಘಟನೆಗಳಿಗೆಲ್ಲ ಇವರೇ ಕಾರಣ ಎಂದು ಭಾರತದ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿದರೆ ಇವು ಪುರಸ್ಕೃತವಾಗುತ್ತವಾ ಅನ್ನೋದು....

ಕನಸಿನ ಕನ್ಯೆ ಕಾಟ

ಭಾರತೀಯ ಜನತಾ ಪಕ್ಷದವರಿಗೆ ಈ ಮನ್ಮಥ ಅನ್ನೋನು ಶ್ಯಾನೆ ಕಷ್ಟ ಕೊಡುತ್ತಿರುವಂತಿದೆ. ಕರ್ನಾಟಕದಲ್ಲಿ ಮಾತ್ರ ಅವನ ಕಾಟ ಅಂತಿದ್ದರೆ ದೆಹಲೀಲೂ ಅದೇ ಕಥೆಯಂತೆ. ಚೆಲುವೆಯರಾದ ಮಹಿಳೆಯರು ಆ ಪಕ್ಷದಲ್ಲಿದ್ದಾರೆ ಅನ್ನೋದು ನಿಜ. ಆದರೇನು ಮಾಡ್ತೀರಿ. ಕೈಕುಲುಕುವ ನೆಪದಲ್ಲಾದರೂ ಚಟ ತೀರಿಸಿಕೊಳ್ಳೋಣ ಅಂತ ಕೈ ಮುಂದೆ ನೀಡಿದರೆ ಅವು 'ನಮಸ್ತೆ' ಅಂತ ಎರಡೂ ಕೈಜೋಡಿಸಿ ಭಾರತೀಯ ನಾರಿ ಪೋಸ್ ಕೊಡ್ತಾವಂತೆ. ಅಪ್ಪಿತಪ್ಪಿ ಯಾರಿಗಾದರೂ ಅವರ ಮೈಕೈ ಮುಟ್ಟೋ ಅವಕಾಶ ಸಿಕ್ಕಿದರೆ ಉಳಿದವರು ಹಂಗೇ ಉರಿದುಬೀಳ್ತಾರಂತೆ. ವಿಜಯರಾಜೆ ಸಿಂಧ್ಯ ಅವರನ್ನು ಹೊಗಳಿ ಮೆರೆಸೋಕೆ ಸಿನಿಮಾ ತೆಗೀತಿದಾರಲ್ಲ 'ಏಕ್ ಥಿ ರಾಣಿ ಐಸೀ ಭೀ' ಅಂತಾವ. ಅದರಲ್ಲಿ ಆಕೆಯ ಪಾತ್ರ ಗಿಟ್ಟಿಸಿಕೊಂಡೋರು ಹೇಮಮಾಲಿನಿ ಅಂತೆ. ನಾಯಕನಟನ ಪಾತ್ರಕ್ಕೆ ಹಳ್ಳಿ ಬಯಲುನಾಟಕದ ಪಾತ್ರಕ್ಕೆ ಕಿತ್ತಾಡ್ತಾರಲ್ಲ ಹಂಗೇ ಕಿತ್ತಾಡಿದರಂತೆ. ಅದು ವಿನೋದ ಖನ್ನನ ಬಗಲಿಗೆ ಬತ್ತು ಅಂತ ಗೊತ್ತಾಯ್ತಿದ್ದಂಗೆ ಎಲ್ಲರಿಗೂ ಅವನು ಖಳನಾಯಕನ ತರಹ ಕಾಣಿಸುತ್ತಿದ್ದಾನಂತೆ. ಅವನ ಮುಖ ಕಂಡರೆ ಸಾಕು ಗುರ್ ಅಂತಾರಂತೆ. ಮಾಮೂಲಿನಂತೆ ಅವನ ವಿರುದ್ಧ ಗುಸುಗುಸು, ಪುಸಪುಸಾನೂ ಇರಬಹುದು. ಇದರಿಂದ ಬಹಳ ಕೋಪ ಬಂದಿರೋದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿರುವ ಜಸ್ವಂತ್ ಸಿಂಗ್ ಅವರಿಗಂತೆ. ನಾಯಕನಟನ ಪಾತ್ರ ಹೊಡೆದುಕೊಳ್ಳಬೇಕೂಂತ ಭಾರೀ ಶ್ರಮ ಪಟ್ಟಿದ್ದರಂತೆ, ಕನಸಿನ ಕನ್ಯೆ ಸಮೀಪ ಇರಬಹುದಲ್ಲಾ ಅಂತಾವ. ಪಾಪ ಅವರ ಅದೃಷ್ಟವೇ ಖೋಟಾ ಇರಬೇಕು. ಯದ್ವಾತದ್ವಾ ಬೆಲೆ ಏರುತ್ತಿರುವುದನ್ನು ಖಂಡಿಸಿ ಪಾರ್ಲಿಮೆಂಟಿನಲ್ಲಿ ಮಾನವ ಸರಪಳಿ ನಡೆಸಿದರಲ್ಲ ವಿರೋಧ ಪಕ್ಷದವರು. ಆಗ ಜಸ್ವಂತ್ ಸಿಂಗ್ ಸಾಹೇಬರು ನಾನು ಹೇಮಮಾಲಿನಿ ಕೈ ಹಿಡಿದು ಸರಪಳಿ ಮಾಡ್ತೀನಿ ಅಂತ ಅಡ್ವಾಣಿ ಹತ್ತಿರ ಹಲ್ಲುಗಿಂಜಿದ್ದರೂ ಅವರು ಅವಕಾಶ ನೀಡಲೇ ಇಲ್ಲವಂತೆ. ಅಲ್ಲಿ ಹಂಗಾಯ್ತು, ಇಲ್ಲಿ ಹಿಂಗೆ. ಪಾಪ ಈ ಸಿಂಗು ಕನಸಿನ ಕನ್ಯೇನ ಕನಸಿನಲ್ಲೇ ಅನುಭವಿಸಬೇಕೋ ಏನೋ...



ರಾ(RAW) ನ್ಯಾಯ!




ರಾಮಚಂದ್ರಗೌಡರು ಬರ್‍ತಾರೆ ಅಂದರೆ ಸಭಿಕರು 'ರಾಮ ರಾಮ' ಅಂತಾರಂತೆ. ಹಾಗಿರುತ್ತದಂತೆ ಅವರ ಅಮೋಘ ಭಾಷಣ. ಸಂಸ್ಕೃತ ಶ್ಲೋಕಗಳನ್ನ ಉದುರುಸ್ತಾರಂತೆ. (ಕೀಳರಿಮೆ ಇರಬೇಕು!) ಕೈಗೆ ಒಂದು 'ಚಿಟಕಿ' ಅಥವಾ ಎರಡು ತಾಳ ಕೊಟ್ಟರೆ ಥೇಟ್ ಹರಿಕತೆ ದಾಸನ ಪ್ರವಚನ ಇದ್ದಂಗೆ ಇರುತ್ತಂತೆ. ಇತ್ತೀಚೆಗೆ ಅವರ ಪಾದ ಶಿವಮೊಗ್ಗಕ್ಕೆ ಚಿತ್ತೈಸಿತ್ತಂತೆ. ಅಲ್ಲಿನ ವೈದ್ಯಕೀಯ ಕಾಲೇಜಿನ ತಪಾಸಣೆಗೆ ಅಲ್ಲ. ಶ್ರೀಯುತರು ಅದರ ಮಂತ್ರಿಯಾದರೂ ಈ ಕಾಲೇಜುಗಳ ಕಡೆ ಗಮನ ಹರಿಸಲು ಪುರುಸೊತ್ತೇ ಇಲ್ಲವಂತೆ! ಈಗ ಯಾಕೆ ಹೋಗಿದ್ದರಪ್ಪ ಅಂದರೆ 'ಶಂಕರ ಕಣ್ಣು ಆಸ್ಪತ್ರೆ' ಉದ್ಘಾಟನೆಗಂತೆ. ಯಡ್ಡಿ ಸ್ಪೆಷ್ಲಿ ಆಗಿ ದಯಮಾಡಿಸಿದ್ದರಂತೆ. ಯಾಕೋ ಯಡ್ಡಿಗೆ ಇತ್ತೀಚೆಗೆ ಸ್ಪೆಷ್ಲಿಗಳೇ ಹೆಚ್ಚಿರುವಂತಿದೆ! ಇರಲಿ. ಮಾಡೋ ಕೆಲಸ ಬುಟ್ಟು ಅದ್ಯಾವನೋ ಕುಂಬಾರ ಮಗೀನ ತಿಗತಟ್ಟಿದ ಅಂತಾರಲ್ಲ ಹಂಗೆ ಮಾಡಿದ್ರಂತೆ ಮಾನ್ಯ ಮಂತ್ರಿವರ್ಯರು. ಜನ ಕಂಡ ತಕ್ಷಣ ಅಮಲು ಏರಿದವರಂತೆ ಏನೇನೋ ಬಡಬಡಿಸಿದರಂತೆ. ಆರೆಸ್ಸೆಸ್‌ನವರು ದೇಶದ ಉದ್ಧಾರಕ್ಕೆ ಉತ್ತಮ ಸಲಹೆ ನೀಡ್ತಿದಾರೆ. ಅದನ್ನು ಜಾರಿಗೆ ತರಬೇಕು ಅಂತ ಮುಂದಾದರೆ ಬುದ್ಧಿಜೀವಿಗಳು ಬಾಯಿಗೆ ಬಂದಂಗೆ ಮಾತಾಡ್ತವೆ. ಇಂತಹವರನ್ನೆಲ್ಲ ಫಿನಿಷ್ ಮಾಡಬೇಕು ಅಂತ ಅಬ್ಬರಿಸಿದರಂತೆ. ಬಂದೂಕು ಸಿಕ್ಕಿದ್ದರೆ ಸುಟ್ಟೇ ಬಿಡ್ತಿದ್ದರೇನೋ ಅನ್ನುವ ಹಾಗಿತ್ತಂತೆ ಅವರ ಆಕ್ರೋಶ.

ಈ ಹಿಂದೆ ಗುಂಡೂರಾಯರು ಪತ್ರಿಕೆಯವರನ್ನೆಲ್ಲ ಅರಬ್ಬೀ ಸಮುದ್ರಕ್ಕೆ ತಳ್ಳಬೇಕು ಅಂದಿದ್ದರು. ಸತ್ಯ ಹೇಳುತ್ತಿದ್ದರಲ್ಲ ಅದಕ್ಕೆ! 'ಗುಂ' ದಾರೀಲಿ 'ರಾ' (Raw!) ಹೀಗಂತಿದಾರೆ. ಅವರ ಹಾದೀನೆ ಇವರೂ ಹಿಡೀತಾರೆ ಅನ್ನೋದಕ್ಕೆ ಇನ್ನೂ ಅನುಮಾನ ಇದೆಯಾ ಅಂತ...

■ ಎಚ್.ಎಲ್. ಕೇಶವಮೂರ್ತಿ

ಈ ಠಾಕ್ರೆಗಳು ಕೋಮುವಾದಿಗಳು ಎಂಬುದನ್ನು ಪರಿಗಣಿಸುತ್ತಲೇ ಅವರ ಸುತ್ತಾ ಅಣಿನೆರೆಯುತ್ತಿರುವ ಜನರಲ್ಲಿ ತಮ್ಮ ನಾಡು, ಭಾಷೆ, ಸಂಸ್ಕೃತಿ, ಹಕ್ಕುಗಳ ಬಗ್ಗೆ ಆತಂಕದ ಭಾವನೆ, ಕಳೆದುಕೊಳ್ಳುತ್ತಿದೆವೆಂಬ ಕಳವಳಗಳೂ ಇರುವುದನ್ನು ನಾವು ನಿರ್ಲಕ್ಷಿಸಲಾಗದು.

ರಾಜ್‌ಠಾಕ್ರೆ ಜಗಳದಲ್ಲೂ ಒಂದೆರಡು ಸತ್ಯ ಇದೆ



ರಾಜ್‌ಠಾಕ್ರೆ ಎಂಬ ಪುಂಡನನ್ನು ಹಿಡಿದು ಲಾಕಪ್‌ನಲ್ಲಿಟ್ಟು ಈ ನೆಲದ ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎನ್ನುವುದನ್ನು ಮಹಾರಾಷ್ಟ್ರ ಪೊಲೀಸರು ತೋರಿಸಿಕೊಟ್ಟಿದ್ದಾರೆ.

ಶಿವಸೇನಾ ಮುಖಂಡ ಬಾಳ್‌ಠಾಕ್ರೆ ಮತ್ತವನ ತುಂಡಿನಂತಿರುವ ಉದ್ಧವ್ ಠಾಕ್ರೆ ಹಾಗೂ ರಾಜ್‌ಠಾಕ್ರೆಗಳು ಮೊದಲಿನಿಂದಲೂ ಇಡೀ ವ್ಯವಸ್ಥೆಗೇ ಸವಾಲಾಕುವಂತೆ ಭಾಷಾ ದುರಭಿಮಾನ, ಪ್ರಾಂತೀಯ ಸಂಕುಚಿತವಾದಗಳನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲ, ಈ ಭಾವನೆಗಳೊಂದಿಗೆ ಹಿಂದೂ ಕೋಮುವಾದವನ್ನು ಹದವಾಗಿ ಬೆರೆಸಿ ಮರಾಠ ಯುವಜನರನ್ನು ವ್ಯಗ್ರತೆಯತ್ತ ಮುನ್ನಡೆಸಲಾಗುತ್ತಿದೆ. ದುರದೃಷ್ಟವಶಾತ್ ಇವತ್ತು ಅವರ Maratha Pride ಹಾಗೂ ಅನನ್ಯತೆ, ಅಸ್ತಿತ್ವಕ್ಕಾಗಿನ ಪ್ರತಿಭಟನೆಗಳು ಮತ್ತು ಹಿಂದೂ ಕೋಮುವಾದಿ ನಿಲುವುಗಳು ಬೇರ್ಪಡಿಸಲಾಗದಷ್ಟು ಬೆರೆತು ಹೋಗಿರುವುದರಿಂದ ಪ್ರಗತಿಪರರಿಗೆ ಠಾಕ್ರೆಗಳೆಂದರೆ ಅಸಹನೆಯ ಭಾವನೆ ಬಂದುಬಿಡುತ್ತದೆ.

ಆದರೆ ಈ ಅಹಿತಕರ ಬೆಳವಣಿಗೆಗಳಿಗೆ ಪ್ರಚೋದನೆ ಎಲ್ಲಿಂದ ಸಿಗುತ್ತಿದೆ ಎನ್ನುವುದನ್ನು ನೋಡಬೇಕಿದೆ. ಕರ್ನಾಟಕದಲ್ಲೂ ಕನ್ನಡ ಸಂಘಟನೆಗಳಿಗೆ ಕನ್ನಡಿಗ-ಕರ್ನಾಟಕ ಪರ ಕಾಳಜಿಗಳೊಂದಿಗೆ ಅಲ್ಪಸಂಖ್ಯಾತ ತಮಿಳು, ಮುಸ್ಲಿಂ ಇನ್ನಿತರ ಮೇಲೆ ಅಸಹನೆ ಇದೆ. ಆ ಕಾರಣಕ್ಕೆ ಇದನ್ನು ನಾವೊಂದಿಷ್ಟು ಆಳವಾಗಿ ನೋಡಬೇಕಿದೆ.

ಮೊನ್ನಿನ ರೈಲ್ವೆ ನೇಮಕಾತಿ ವಿವಾದವನ್ನೇ ನೋಡಿ. ಭಾರತದ ಯಾವುದೇ ಭಾಗದಲ್ಲಿ ರೈಲ್ವೆ ನೇಮಕಾತಿ ನಡೆದರೂ ಯಾವುದೇ ರಾಜ್ಯದ ಅಭ್ಯರ್ಥಿಗಳು ಅರ್ಜಿ ಹಾಕಿ ಪರೀಕ್ಷೆ ಬರೆಯಬಹುದು. ಆದರೆ ಅಲ್ಲಿ ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಮಾತ್ರ ಪರೀಕ್ಷೆ ಬರೆಯುವ ಅವಕಾಶವಿದೆ. ನಮ್ಮ ಸಂವಿಧಾನವೇ ಮಾನ್ಯತೆ ನೀಡಿರುವ ಒಂದೂವರೆ ಡಜನ್ ರಾಷ್ಟ್ರಭಾಷೆಗಳಿಗೆ ಅಲ್ಲಿ ಯಾವ ಮಾನ್ಯತೆಯೂ ಇಲ್ಲ. ಇನ್ನೊಂದೆಡೆ IAS ನಂತಹ ದೊಡ್ಡ ಅಧಿಕಾರಿ ಮಟ್ಟದ ಪರೀಕ್ಷೆಗಳನ್ನೇ ಕನ್ನಡ ಸೇರಿದಂತೆ ಸ್ಥಳೀಯ ಭಾಷೆಗಳಲ್ಲಿ ಬರೆಯುವ ಅವಕಾಶವಿದೆ. ಆದರೆ ರೈಲ್ವೆ ಇಲಾಖೆಯ ಸಾಮಾನ್ಯ ಡಿ ದರ್ಜೆ ಹುದ್ದೆಗೆ ಕನ್ನಡ, ತೆಲುಗು, ಬಂಗಾಳಿ, ಬಿಹಾರಿ ಭಾಷೆಗಳಲ್ಲಿ ಪರೀಕ್ಷೆ ಬರೆಯಲಾಗುವುದಿಲ್ಲ.

ಇದೊಂದು ಕೆಟ್ಟ ಪರಿಸ್ಥಿತಿ.

ಹಾಗೆ ನೋಡಿದರೆ IAS ಗಿಂತ ರೈಲ್ವೆ ತರಹದ ಹುದ್ದೆಗಳಿಗೆ ಹಂಬಲಿಸುವ ಜನ ಹೆಚ್ಚಿದ್ದಾರೆ. ಆದರೆ ಅವರಿಗೆ ತಮ್ಮ ಭಾಷೆಯಲ್ಲದ ಹಿಂದಿ, ಇಂಗ್ಲಿಷ್ ಬರುವುದಿಲ್ಲವೆಂಬ ಕಾರಣಕ್ಕೆ ಅವಕಾಶ ವಂಚಿತರನ್ನಾಗಿ ಮಾಡುವುದು ಎಷ್ಟು ಸರಿ?

ರೈಲ್ವೆ ಇಲಾಖೆ ಯಾಕೆ ಸ್ಥಳೀಯ ಭಾಷೆ ಬಳಸಬಾರದು? ನೇಮಕಾತಿಯನ್ನು ವಿಕೇಂದ್ರೀಕರಣಗೊಳಿಸಿ ಆಯಾ ರಾಜ್ಯದ ಜನರಿಗೆ ಹೆಚ್ಚು ಅವಕಾಶ ಕಲ್ಪಿಸಬಾರದು?

ದೇಶದ ನರನಾಡಿಯಂತೆ ಇಡೀ ಭಾರತದಾದ್ಯಂತ ರೈಲ್ವೆ ಸಂಪರ್ಕಗಳಿದ್ದು, ಅವು ದೇಶವನ್ನು ಒಗ್ಗೂಡಿಸುತ್ತಿವೆ, ಐಕ್ಯತೆಯ ಭಾವನೆ ಮೂಡಿಸುತ್ತದೆ ಎಂದೆಲ್ಲಾ ತೆಳುವಾಗಿ ಯೋಚಿಸುತ್ತಿದ್ದರೆ ವಾಸ್ತವ ಪರಿಸ್ಥಿತಿ ಬೇರೆ ಆಗಿರುತ್ತದೆ. ದೇಶವನ್ನು ಒಗ್ಗೂಡಿಸುತ್ತದೆ ಅಂದುಕೊಳ್ಳುತ್ತಿದ್ದ ಇದೇ ರೈಲ್ವೆ ಈಗ ಬಿಹಾರಿ-ಮರಾಠಿ-ಕನ್ನಡಿಗರು ಕಿತ್ತಾಡಿಕೊಳ್ಳುವಂತೆ ಮಾಡುತ್ತಿದೆ. ಮಹಾರಾಷ್ಟ್ರದಲ್ಲಿ ನವ ನಿರ್ಮಾಣ ಸೇನೆ ಮಾಡಿದ ದೌರ್ಜನ್ಯದ ಸೇಡು ತೀರಿಸುವಂತೆ ಬಿಹಾರಿ ಯುವಕರು ದೊಂಬಿ ನಡೆಸುತ್ತಿದ್ದಾರೆ. ಕರ್ನಾಟಕದಲ್ಲೂ ಪರೀಕ್ಷೆ ಬರೆಯಲು ಬಂದಿದ್ದ ಬಿಹಾರಿಗಳ ಮೇಲೆ ಹಲ್ಲೆಯಾಗಿತ್ತು ಎಂಬುದು ನೆನಪಿದೆಯೆ?

ಇದೆಲ್ಲಕ್ಕೂ ಮೂಲ ಕಾರಣವಿರುವುದು ಕೇಂದ್ರ ಸರ್ಕಾರದ ಅವಿವೇಕರ ಆಡಳಿತ ವಿಧಾನದಲ್ಲಿ. ರಾಜ್ಯಗಳ ಭಾಷೆ, ಗಡಿ, ನೀರು, ಉದ್ಯೋಗ, ಸಂಪನ್ಮೂಲಗಳ ವಿಚಾರದಲ್ಲಿ ಆಯಾ ರಾಜ್ಯಗಳ



ಜನರ ಹಕ್ಕುಗಳನ್ನು ದಮನಿಸುವ ಪ್ರವೃತ್ತಿ ಸ್ವಾತಂತ್ರ್ಯ ಬಂದಾಗಿನಿಂದಲೂ ನಡೆದುಕೊಂಡೇ ಬಂದಿದೆ.

ಈ ಠಾಕ್ರೆಗಳು ಕೋಮುವಾದಿಗಳು ಎಂಬುದನ್ನು ಪರಿಗಣಿಸುತ್ತಲೇ ಅವರ ಸುತ್ತಾ ಅಣಿನೆರೆಯುತ್ತಿರುವ ಜನರಲ್ಲಿ ತಮ್ಮ ನಾಡು, ಭಾಷೆ, ಸಂಸ್ಕೃತಿ, ಹಕ್ಕುಗಳ ಬಗ್ಗೆ ಆತಂಕದ ಭಾವನೆ, ಕಳೆದುಕೊಳ್ಳುತ್ತಿದೆವೆಂಬ ಕಳವಳಗಳೂ ಇರುವುದನ್ನು ನಾವು ನಿರ್ಲಕ್ಷಿಸಲಾಗದು.


ಕನ್ನಡಪರ ಚಳವಳಿಗಳಾದರೂ ಅಷ್ಟೆ. ಈ ನಾರಾಯಣ ಗೌಡ ಭ್ರಷ್ಟ, ವಾಟಾಳ್ ಹಾಸ್ಯಾಸ್ಪದ ಎಂಬುದನ್ನು ನಾವು ಮರೆಯಕೂಡದು. ಆದರೆ ರೈಲ್ವೆ ಉದ್ಯೋಗ, ಗಡಿ, ಜಲ, ಭಾಷೆ ವಿಚಾರದಲ್ಲಿ ಕನ್ನಡ ಸಂಘಟನೆಗಳು ಎತ್ತುತ್ತಿರುವ ಪ್ರಶ್ನೆಗಳು ಜನರ ಆತಂಕಗಳು ನಿಜಕ್ಕೂ ಬೆಂಬಲಕ್ಕೆ ಅರ್ಹವಾಗಿವೆ ಅಲ್ಲವೆ. ■

ರಾಕ್ ಒಬಾಮಾ ಎಂಬ ಹೊಸ ಪುಟ

ಹೆಸರು, ಬಣ್ಣ, ವ್ಯಕ್ತಿತ್ವ.... ಈ ಮೂರರಲ್ಲೂ ವಿಚಿತ್ರ, ವಿಭಿನ್ನ. ಆದರೂ ಜನಾಂಗೀಯ ದ್ವೇಷ ತ್ತು ಅಪನಂಬಿಕೆ ಹೆಚ್ಚಿನ ಪ್ರಮಾಣದಲ್ಲಿರುವ, ಭಿನ್ನತೆಯನ್ನು ಅಷ್ಟಾಗಿ ಸಹಿಸದ, ತನ್ನ ಎಲ್ಲಾ ಮಿತಿಗಳ ನಡುವೆಯೂ ಜಗತ್ತಿನ ಬಲಿಷ್ಠ ದೇಶವಾದ ಮೆರಿಕದ ಅಧ್ಯಕ್ಷನಾಗಿ ಇತಿಹಾಸವನ್ನೇ ಸೃಷ್ಟಿಸುವ ಹಂತದಲ್ಲಿದ್ದಾನೆ. ಆತನೇ ಬರಾಕ್ ಒಬಾಮಾ.

ಅಮೆರಿಕಾ ದೇಶವೇ ತತ್ತರಿಸುವಂತೆ ಅದರ ಮೇಲೆ ಳಿ ಮಾಡಿದ ಒಸಾಮಾ ಬಿನ್ ಲಾಡೆನ್ ಅಂದರೆ; ಸಲ್ಮಾನರೆಂದರೆ ಅಮೆರಿಕನ್ನರಿಗೆ ದ್ವೇಷ ಮತ್ತು ಲ್ಲದಂತಹ ಕೋಪ. ಅಂತಹ ಪರಿಸ್ಥಿತಿಯಲ್ಲಿ ಾಮಾನ ಹೆಸರನ್ನೇ ಹೋಲುವ ಒಬಾಮಾ ಹೆಸರು ನದ್ದು. ಅದು ಸಾಲದೆಂಬಂತೆ ಮುಸಲ್ಮಾನರ ಸೇನ್' ಎಂಬ ಮಧ್ಯ ಹೆಸರನ್ನೂ ಹೊಂದಿದ್ದಾನೆ!

ಅಮೆರಿಕಾದಲ್ಲಿ ಬಿಳಿಯರ ಪ್ರಮಾಣ ಶೇ. 80 ಯರ(ಅಂದರೆ ಆಫ್ರಿಕನ್ ಮೂಲದ ಅಮೆರಿಕನ್ನರ) ಣಾ ಶೇ. 12 ಮಾತ್ರ. ಆದರೂ ಕಪ್ಪುಬಣ್ಣದ ಎಲ್ಲಾ ಜನಾಂಗದವರ, ವರ್ಗದವರ ಮೆಚ್ಚುಗೆ ದು ಅಧ್ಯಕ್ಷ ಚುನಾವಣೆಯಲ್ಲಿ ಮುಂದಿದ್ದಾನೆ.



ಬರಾಕ್ ಒಬಾಮಾ ಎಷ್ಟು ಸ್ಪಷ್ಟ ಮನಸ್ಸಿನಾಳದಿಂದ ಮಾತನಾಡು ಂದರೆ ಆತ ಬಹಳಷ್ಟು ಅಮೆರಿಕನ್ನ ಲ್ಲದೆ ಜಗತ್ತಿನ ಇತರೆ ದೇಶಗಳ ಜನ ತನ್ನತ್ತ ಆಕರ್ಷಿಸಿದ್ದಾರೆ. ಭಾರತ ಲ್ಲೂ ಬಹಳಷ್ಟು ಜನರ ಗಮನವನ್ನು ಸಿದ್ದಾನೆ. ಅವರೆಲ್ಲ ಆತ ಗೆಲ್ಲಬೇಕೆಂದು ನೂ ಸೇರಿದಂತೆ) ಆಶಿಸುತ್ತಿದ್ದಾರೆ.

ಅಂದಹಾಗೆ ಹೀಗೆ ಒಬಾಮಾ ಪರ ವು ತೆಗೆದುಕೊಂಡಿರುವ ಭಾರತೀ ರ ಬಗ್ಗೆ ಇತ್ತೀಚೆಗೆ ಒಂದು ಲೇಖನ ದೆ. ಅದರಲ್ಲಿ "ಒಬಾಮಾ ಗೆದ್ದರೆ ಅಮೆರಿಕದ ಶೋಷಿತ ಸಮು ಯದ ಗೆಲುವಾಗುತ್ತದೆ ಎಂದೇ ನನ್ನು ಬೆಂಬಲಿಸುತ್ತಿರುವ ಭಾರತೀಯರು, ಆಕಸ್ಮಾತ್ ರತದಲ್ಲೇ ನಾಳೆ ಶೋಷಿತ ವರ್ಗದ ದಲಿತನೊಬ್ಬ ುಖ್ಯಮಂತ್ರಿ ಅಥವಾ ಪ್ರಧಾನಿ ಆಗುತ್ತಾನೆಂದರೆ ನನ್ನು ವಿರೋಧಿಸುತ್ತಾರೆ, ಲೇವಡಿ ಮಾಡುತ್ತಾರೆ, ಾಪ್ರಭುತ್ವ ವ್ಯವಸ್ಥೆಯನ್ನೇ ಟೀಕಿಸುವ ಮಟ್ಟಕ್ಕೆ ೀಗುತ್ತಾರೆ. ಇವತ್ತು ಕರಿಯ ಒಬಾಮಾನನ್ನು ಬೆಂಬಲಿ ್ತಿರುವ ಭಾರತೀಯರು ಯಾಕೆ ಮಾಯಾವತಿಯನ್ನು ೇ ಉತ್ಸಾಹದಿಂದ ಬೆಂಬಲಿಸುವುದಿಲ್ಲ?" ಎಂದು ಯಲಾಗಿತ್ತು.

ಮೊದಲನೆಯದಾಗಿ, ವೈಯಕ್ತಿಕವಾಗಿ ಹೇಳುವುದಾ ಒಬಾಮಾನಷ್ಟು ಮಾನವೀಯನಲ್ಲದಿದ್ದರೂ ಆತನ ದಷ್ಟು ಕಾಳಜಿ ಮತ್ತು ಸಜ್ಜನಿಕೆ ಹೊಂದಿರುವ ತ ವರ್ಗದ ಯಾರೊಬ್ಬರೂ ನಾಳೆ ನಮ್ಮ ದೇಶದ ಾನಿ ಆಗುವ ಸಾಧ್ಯತೆ ಇದೆ ಎಂದಾದರೆ ನಾನಂತೂ ರನ್ನು ಖಂಡಿತವಾಗಿಯೂ ಬೆಂಬಲಿಸುತ್ತೇನೆ.

ಎರಡನೆಯದಾಗಿ, ಒಬಾಮಾ ಮತ್ತು ಮಾಯಾವತಿ ವೆ ಅಜಗಜಾಂತರ ವ್ಯತ್ಯಾಸವಿದೆ: ಉದಾಹರಣೆಗೆ: ಆತ ಚುನಾವಣಾ ವೆಚ್ಚಕ್ಕೆಂದು ಅಮೆರಿಕದ ಸರ್ಕಾರ ನೀಡುವ ಹಣವನ್ನು ತಿರಸ್ಕರಿಸಿ ತನ್ನ ಬೆಂಬಲಿಗರಿಂದಲೇ ಹಣ ಸಂಗ್ರಹಿಸಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಹೀಗೆ ಸಂಗ್ರಹಿಸಿದ ಹಣಕ್ಕೆ ಸರಿಯಾದ ಲೆಕ್ಕ ಇಟ್ಟು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಮಾಯಾವತಿಯೂ ತನ್ನ ಬೆಂಬಲಿಗರಿಂದ ಹಣ ಸಂಗ್ರಹಿಸಿದ್ದಾರೆ ನಿಜ. ಆದರೆ ಆ ಹಣಕ್ಕೆ ಸಂಬಂಧಿಸಿದ ಲೆಕ್ಕವೇ ಇಲ್ಲ, ಮಾತ್ರವಲ್ಲ ಆಕೆಗೆ ಅದು ಕಪ್ಪು ಹಣವನ್ನು ಬಿಳಿ ಮಾಡುವ ಮಾರ್ಗವಾಗಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ಮಾಯಾವತಿ ಆ ಹಣವನ್ನು ತನ್ನ ಸ್ವಂತಕ್ಕೆ ಅಪಾರ ಭೂಮಿಯನ್ನು ಖರೀದಿಸುವುದಕ್ಕೆ, ಅರಮನೆಯಂತಹ ಬಂಗಲೆಯನ್ನು ನಿರ್ಮಿಸುವುದಕ್ಕೆ ವ್ಯಯ ಮಾಡಿದ್ದಾರೆ. ಅಷ್ಟೇ ಅಲ್ಲ, ಒಬಾಮಾನಲ್ಲಿರುವ ಸಜ್ಜನಿಕೆ, ಪ್ರಾಮಾಣಿಕತೆ ಈಕೆಯಲ್ಲ ಇಲ್ಲ.

ಔಟ್‌ಲುಕ್ ಪತ್ರಿಕೆಯಲ್ಲಿನ ಒಂದು ವರದಿ ಪ್ರಕಾರ ಮತಗಟ್ಟೆ ವಶ, ಮತಗಳ ಖರೀದಿ, ನಕಲಿ ಮತದಾನ ಭಾರತದಲ್ಲಿ ಮಾತ್ರ ನಡೆಯುವುದಿಲ್ಲ, ಅದು ಅಮೆರಿಕದಂತಹ ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಹೈಟೆಕ್ ರೀತಿಯಲ್ಲಿ ನಡೆಯುತ್ತದೆ. ಉದಾಹರಣೆಗೆ ಅಲ್ಲಿನ ಆಡಳಿತ ವ್ಯವಸ್ಥೆಯಲ್ಲೂ ಬಲಪಂಥೀಯರು ಸ್ಥಾಪಿತಗೊಂಡಿದ್ದು ಸ್ವಲ್ಪಮಟ್ಟಿಗೆ ಮಧ್ಯ ಮಾರ್ಗಿ ಎನ್ನಬಹುದಾದ ಡೆಮಾಕ್ರೆಟಿಕ್ ಪಕ್ಷದ ಬೆಂಬಲಿಗರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳದಂತೆ ನೋಡಿಕೊಳ್ಳುತ್ತಿದ್ದಾರೆ. ಅದರಲ್ಲೂ ಒಬಾಮಾರಿಗೆ ತಮ್ಮ ಮತಗಳನ್ನು ಖಂಡಿತವಾಗಿಯೂ ನೀಡುವ ಸಾವಿರಾರು ಕರಿಯರ ಹೆಸರನ್ನು ಮತದಾರರ ಪಟ್ಟಿಗಳಿಂದ ರದ್ದುಗೊಳಿಸಲಾಗಿದೆ. ಈ ಮಧ್ಯೆ ಯುವ ಜನತೆಯು ಅಪಾರ ಸಂಖ್ಯೆಯಲ್ಲಿ ಒಬಾಮಾರನ್ನು ಬೆಂಬಲಿಸುತ್ತಿದ್ದು ಅವರೂ ತಮ್ಮ ಮತದಾನದ ಹಕ್ಕನ್ನು ಚಲಾಯಿಸದಂತೆ ಎಚ್ಚರ ವಹಿಸಲಾಗುತ್ತಿದೆ.

ಇಂತಹ ಎಲ್ಲ ಅಡಚಣೆಗಳನ್ನು ಮೀರಿ ಒಬಾಮಾ ಗೆದ್ದರೆ ಅದು ಪವಾಡವೇ ಆಗಿರುತ್ತದೆ!

****

ಕಳೆದ ತಿಂಗಳವರೆಗೂ ಒಬಾಮಾ ಮತ್ತು ಆತನ ಪ್ರತಿಸ್ಪರ್ಧಿ ರಿಪಬ್ಲಿಕನ್ ಪಕ್ಷದ ಜಾನ್ ಮೆಕೈನ್ ಸಮಸಮನಾಗಿ ಓಡುತ್ತಿದ್ದರೂ, ಇತ್ತೀಚೆಗೆ ಒಬಾಮಾರಿಗೆ ವರವಾಗಿ ಬಂದಿರುವುದು ಕುಸಿದುಬಿದ್ದಿರುವ ಅಮೆರಿಕದ ಆರ್ಥಿಕ ಪರಿಸ್ಥಿತಿ. ಮನೆಗಳನ್ನು ಭೋಗ್ಯಕ್ಕೆ ನೀಡುವಲ್ಲಿ ಅಲ್ಲಿನ ಬ್ಯಾಂಕುಗಳು ಮಾಡಿದ ಅಪರಾತಪರಗಳಿಂದಾಗಿ ಇವತ್ತು ಸಾವಿರಾರು ಅಮೆರಿಕನ್ನರು ತಮ್ಮ ಮನೆಗಳನ್ನೇ ಕಳೆದುಕೊಂಡು ಬೀದಿಪಾಲಾಗಿದ್ದಾರೆ. 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟಗೊಂಡ ಒಂದು ವರದಿಯ ಪ್ರಕಾರ ಹೀಗೆ ಮನೆ ಕಳೆದುಕೊಂಡವರಿಗೆಂದೇ ಇವತ್ತು ಅಮೆರಿಕದಲ್ಲಿ ವಾಹನ ನಿಲುಗಡೆ ಸ್ಥಳಗಳನ್ನೇ ತೆರವು ಮಾಡಲಾಗಿದೆ. ಪ್ರತಿದಿನ ತಮ್ಮ ಕೆಲಸಗಳನ್ನು ಮುಗಿಸಿ ಈ ವಾಹನ ನಿಲುಗಡೆ ಸ್ಥಳಗಳಿಗೆ ತಮ್ಮ ಕಾರ್‌ಗಳಲ್ಲಿ ಬರುವ ಜನ ತಮ್ಮ ಕಾರಿನಲ್ಲೇ ನಿದ್ದೆ ಮಾಡುತ್ತಿದ್ದಾರಂತೆ. ಭಾರತದ ಬಡವರಿಗೆ ಹೋಲಿಸಿದರೆ ಅವರ ಪಾಡು ಭೀಕರವಾಗಿಲ್ಲ ಬಿಡಿ. ಆದರೆ ತಮ್ಮ ಪ್ರಸ್ತುತ ಕಷ್ಟಗಳಿಗೆ ರಿಪಬ್ಲಿಕನ್ ಪಕ್ಷದ ಜಾರ್ಜ್ ಬುಷ್ ಪಾಲಿಸಿದ ಆರ್ಥಿಕ ನೀತಿಯೇ ಕಾರಣವೆಂದು ಅವರೆಲ್ಲ ಒಬಾಮಾನನ್ನು ಬೆಂಬಲಿಸುವುದರ ಬಗ್ಗೆ ಯಾವ ಅನುಮಾನವೂ ಉಳಿದಿಲ್ಲ.

ಮೊದಲಿನಿಂದಲೂ ಒಬಾಮಾ 'ಬದಲಾವಣೆ' (change) ಎಂಬ ಘೋಷಣೆಯೊಂದಿಗೆ ಚುನಾವಣಾ ಅಖಾಡಕ್ಕೆ ಇಳಿದವರು. ಅಮೆರಿಕಾದಲ್ಲಿ ನಿಜವಾದ ಬದಲಾವಣೆ ಬರಬೇಕಾದರೆ ಕಳೆದ ಎಂಟು ವರ್ಷಗಳಿಂದ ಅಮೆರಿಕಾವನ್ನು ಆಳಿರುವ ರಿಪಬ್ಲಿಕನ್ ಪಕ್ಷದ ಬದಲಾಗಿ ಡೆಮಾಕ್ರೆಟ್ ಪಕ್ಷವನ್ನು ಗೆಲ್ಲಿಸಬೇಕೆಂಬ ಮನವಿ ಅವರದ್ದು. ಈ ಘೋಷಣೆ ಜನರನ್ನು ಆಕರ್ಷಿಸಿದೆಯಲ್ಲದೆ, ಪ್ರಸ್ತುತ ಆರ್ಥಿಕ ಅವ್ಯವಸ್ಥೆ ಒಬಾಮಾರನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸುವಂತೆ ಮಾಡಿದೆ. ಇದರಿಂದ ಮೆಕೈನ್ ಎಷ್ಟು ಕಂಗಾಲಾದರೆಂದರೆ ಅವರಿಬ್ಬರ ನಡುವೆ ನಡೆದ ಮೂರನೆ ಚರ್ಚಾಸ್ಪರ್ಧೆಯಲ್ಲಿ "ನಾನು ಜಾರ್ಜ್ ಬುಷ್ ಅಲ್ಲ, ನೀವು ಆತನ ವಿರುದ್ಧ ಸ್ಪರ್ಧಿಸಬೇಕಿದ್ದರೆ ನಾಲ್ಕು ವರ್ಷಗಳ ಹಿಂದೆಯೇ ಆತನ ವಿರುದ್ಧ ಚುನಾವಣೆಗೆ ನಿಲ್ಲಬೇಕಿತ್ತು" ಎಂದು ಕಿಡಿಕಾರಿದ. ಆದರೆ ಮೆಕೈನ್‌ಗೆ ಪ್ರಶಾಂತವಾಗಿಯೇ ಉತ್ತರಿಸಿದ ಒಬಾಮಾ "ನೀವು ಜಾರ್ಜ್ ಬುಷ್ ಅಲ್ಲ ನಿಜ. ಆದರೆ ಶೇ. 99 ಬಾರಿ ಆತನ ಆರ್ಥಿಕ ನೀತಿಗಳನ್ನು ಬೆಂಬಲಿಸಿದವರು ನೀವು. ಆದ್ದರಿಂದ ನಿಮಗೂ, ಆತನಿಗೂ ವ್ಯತ್ಯಾಸವಿಲ್ಲ, ನಿಮ್ಮಿಂದ ಬದಲಾವಣೆ ಸಾಧ್ಯವಿಲ್ಲ" ಎಂದು ಹೇಳಿ ಆತನ ಆರ್ಭಟಕ್ಕೆ ತಡೆಹಾಕಿದರು.

****

ಒಬಾಮಾ ಪರ ಬೀಸುತ್ತಿರುವ ಗಾಳಿಯಿಂದ ಮೆಕೈನ್ ಎಷ್ಟು ತತ್ತರಿಸಿದ್ದಾರೆಂದರೆ ಈಗ ಆತ ತನ್ನ ಉಳಿವಿಗಾಗಿ ಹುಲ್ಲುಕಡ್ಡಿಗಳನ್ನೂ ಹಿಡಿಯುತ್ತಿದ್ದಾರೆ. ಉದಾಹರಣೆಗೆ, ಒಬಾಮಾ ಮತ್ತು ವಿಲಿಯಮ್ ಐಯರ್ಸ್ ಎಂಬಾತ ಒಮ್ಮೆ ಶಿಕ್ಷಣಕ್ಕೆ ಸಂಬಂಧಿಸಿದ ಸಮಿತಿಯಲ್ಲಿದ್ದರೆಂದೂ, ಹಿಂದೊಮ್ಮೆ ಐಯರ್ಸ್ ಅಮೆರಿಕಾ ದ್ವೇಷಿ ಆಗಿದ್ದನೆಂದೂ, ಆ ಕಾರಣಕ್ಕಾಗಿಯೇ ಒಬಾಮಾ ಕೂಡ ಅಮೆರಿಕಾ ದ್ರೋಹಿ ಎಂದೂ ಆರೋಪಿಸುತ್ತಿದ್ದಾರೆ.

ವಾಸ್ತವವಾಗಿ 60 ಮತ್ತು 70 ರ ದಶಕದಲ್ಲಿ ಎಡಪಂಥೀಯನಾಗಿದ್ದ ಐಯರ್ಸ್ ಅಂದು ವಿಯಟ್ನಾಮ್ ವಿರುದ್ಧ ಅಮೆರಿಕಾ ನಡೆಸುತ್ತಿದ್ದ ಯುದ್ಧವನ್ನು ವಿರೋಧಿಸಿದ್ದನಲ್ಲದೆ ಒಂದು ಪೊಲೀಸ್ ಪ್ರತಿಮೆಯನ್ನು ಬಾಂಬ್ ಇಟ್ಟು ನಾಶಗೊಳಿಸಿದ್ದ, ನ್ಯೂಯಾರ್ಕ್ ಪೊಲೀಸ್ ಕಟ್ಟಡ, ಮತ್ತು ರಾಜಧಾನಿ ವಾಷಿಂಗ್‌ಟನ್‌ನಲ್ಲಿರುವ ಕ್ಯಾಪಿಟಲ್ ಕಟ್ಟಡನ ಪೆಂಟಗಾನ್ ಬಾಂಬ್‌ಗಳನ್ನು ಸ್ಫೋಟಿಸಿದ್ದ. ಇವೆಲ್ಲ ಚಿಕ್ಕಪುಟ್ಟ ಬಾಂಬ್‌ಗಳಾಗಿದ್ದು ಯಾರಿಗೂ ಯಾವುದೇ ರೀತಿಯ ಹಾನಿಯಾಗಿರಲಿಲ್ಲ. ಬದಲಾಗಿ 500 ಡಾಲರ್‌ಗಿಂತಲೂ ಕಡಿಮೆ ವೆಚ್ಚದಲ್ಲಿ ಈ ಕಾರ್ಯಾಚರಣೆಯನ್ನು ನಡೆಸಿದ್ದರೂ, ಬಾಂಬ್ ಸ್ಫೋಟದಿಂದ ಪೆಂಟಗಾನ್ ಕಟ್ಟಡದಲ್ಲಿ ನೀರು ಸೋರುವಿಕೆ ಉಂಟಾಗಿ ಅಪಾರ ಪ್ರಮಾಣದ ನಷ್ಟವಾಗಿತ್ತಲ್ಲದೆ, ವಿಯಟ್ನಾಮ್ ಮೇಲಿನ



ಕಂಡಹಾಗೆ

■ ಗೌರಿ ಲಂಕೇಶ್

ದಾಳಿಯನ್ನು ಕೆಲ ವಾರಗಳ ಮಟ್ಟಿಗೆ ಸ್ಥಗಿತಗೊಳಿಲಾಗಿತ್ತು. ಈಗ ಇದೇ ಐಯರ್ಸ್ ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಖ್ಯಾತ ಉಪನ್ಯಾಸಕನಾಗಿದ್ದಾನೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಯುವಕನಾಗಿದ್ದಾಗ ಐಯರ್ಸ್ ಮಾಡಿದ್ದ ತಪ್ಪುಗಳನ್ನು ಒಬಾಮಾ ಖಂಡಿಸಿದ್ದಾರಲ್ಲದೆ, ತನಗೂ ಅದಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಪ್ರಕರಣಗಳು ನಡೆದಾಗ ಒಬಾಮಾ ಎಂಟು ವರ್ಷದ ಬಾಲಕನಾಗಿದ್ದು ಸಂಬಂಧ ಹೇಗೆ ಇದ್ದಿರಲು ಸಾಧ್ಯ?

****

ಒಬಾಮಾ ಗೆದ್ದರೆ ಆತ ತೆರಿಗೆಗಳನ್ನು ಹೆಚ್ಚಿಸಿ ಮಧ್ಯಮವರ್ಗದ ಜನರಿಗೆ ತೊಂದರೆ ನೀಡುತ್ತಾರೆ ಎಂಬುದು ಮೆಕೈನ್‌ನ ಇನ್ನೊಂದು ವಾದ.

ಆದರೆ ತಮಾಷೆಯ ಸಂಗತಿ ಯಾವುದೆಂದರೆ ಒಬಾಮಾರನ್ನು ಸಾಮಾನ್ಯ ಜನರ ವಿರೋಧಿ ಎಂದು ಬಿಂಬಿಸಲು ಪ್ರಯತ್ನಿಸುತ್ತಿರುವ ಮೆಕೈನ್ ಜೊತೆಗೆ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಸಾರಾ ಪ್ಯಾಲಿನ್ ಎಂಬಾಕೆಗೆ ಮೊನ್ನೆ ರಿಪಬ್ಲಿಕನ್ ಪಕ್ಷ 1,50,000 ಡಾಲರ್ (ಸುಮಾರು ಅರವತ್ತು ಲಕ್ಷ ರೂಪಾಯಿಗಳು) ವೆಚ್ಚ ಮಾಡಿ ಚೆಂದದ ಉಡುಪುಗಳನ್ನು ಖರೀದಿಸಿದೆ. ಇಂತಹ ಪಕ್ಷ ಹೇಗೆ ಜನಸಾಮಾನ್ಯರ ಪಕ್ಷವಾಗುತ್ತದೆ ಎಂಬ ಟೀಕೆ ಈಗ ವ್ಯಾಪಕವಾಗಿ ಕೇಳಿಬರುತ್ತಿದೆ.

****

ಅಧ್ಯಕ್ಷ ಸ್ಥಾನದಂತಹ ಪ್ರಮುಖ ಹುದ್ದೆಗೆ ಪೈಪೋಟಿ ನಡೆಯುತ್ತಿರುವಾಗ, ಚುನಾವಣೆ, ಹತ್ತು ದಿನಗಳು ಮಾತ್ರ ಇದೆ ಎನ್ನುವಾಗ, ಪ್ರತಿಕ್ಷಣವೂ ಅತಿಮುಖ್ಯವಾಗಿರುವಾಗ ಒಬಾಮಾ ಮೊನ್ನೆ ಒಂದು ಬ್ರೆಕ್ ತೆಗೆದುಕೊಂಡಿದ್ದರು. ಆದರೆ ಅದಕ್ಕೆ ಕಾರಣ, ಸಾವಿನ ಅಂಚಿನಲ್ಲಿರುವ ತನ್ನ ಪ್ರೀತಿಯ ಅಜ್ಜಿಯನ್ನು ಕೊನೆ ಬಾರಿ ನೋಡಲು. ಆ ಅಜ್ಜಿಗೆ ಮೊಮ್ಮಗ ಒಬಾಮಾ ಬಗ್ಗೆ ಎಷ್ಟು ಪ್ರೀತಿ ಎಂದರೆ ಆತನ ಚುನಾವಣೆ ಪ್ರಚಾರ ಹೇಗೆ ನಡೆಯುತ್ತಿದೆ ಎಂದು ಟಿವಿಯಲ್ಲಿ ನೋಡಲೆಂದೇ ಕಣ್ಣಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದರು. ಒಬಾಮಾನನ್ನು ಚಿಕ್ಕಂದಿನಿಂದಲೂ ಬೆಳೆಸಿದ್ದು, ಆತನ ವ್ಯಕ್ತಿತ್ವವನ್ನು ರೂಪಿಸಿದ್ದು ಈ ಅಜ್ಜಿ. ಮತದಾನದ ದಿನದವರೆಗೂ ಆಕೆ ಬದುಕಿರಲಾರರು ಎಂದು ವೈದ್ಯರು ಹೇಳಿದ್ದರಿಂದ ಒಬಾಮಾ ತನ್ನ ಚುನಾವಣಾ ಪ್ರಚಾರವನ್ನೇ ತೊರೆದು ಅಜ್ಜಿಯನ್ನು ಕಾಣಲು ಹೋಗಿದ್ದರು. ಆದರೆ ಇದರ ದುರುಪಯೋಗ ಪಡೆಯಲು ಯತ್ನಿಸಿದ ರಿಪಬ್ಲಿಕನ್ನರು "ನೋಡಿ, ಈತ ಅಧ್ಯಕ್ಷನಾದರೆ ಬೇಜವಾಬ್ದಾರಿತನ ತೋರಿಸುತ್ತಾನೆ" ಎಂದರು. "ತಾನು ಕರಿಯವನಾಗಿದ್ದರೂ ತನ್ನ ಅಜ್ಜಿ ಬಿಳಿಯವಳು ಎಂದು ತೋರಿಸುವ ಉದ್ದೇಶ ಇದರ ಹಿಂದಿದೆ" ಎಂದು ದೂರಿದರು. ಆ ಮೂಲಕ ಮಾನವೀಯತೆ ಅರ್ಥವಾಗದ ಗುಣ ತಮ್ಮದು ಎಂದೂ ಬಹಿರಂಗಪಡಿಸಿಕೊಂಡರು.

****

ಬರಾಕ್ ಒಬಾಮಾ ಅಮೆರಿಕದ ಅಧ್ಯಕ್ಷರಾದರೆ ಅವರು ದೊಡ್ಡ ಬದಲಾವಣೆ ತರುತ್ತಾರೆ, ಜಗತ್ತಿನ 'ಗೂಂಡಾ' ಆಗಿರುವ ಅಮೆರಿಕಾವನ್ನು ಸುಧಾರಿಸುತ್ತಾರೆ, ಬೇರೆ ದೇಶಗಳೊಂದಿಗೆ ಮಾನವೀಯ ನೆಲೆಗಟ್ಟಿನಲ್ಲಿ ವ್ಯವಹರಿಸುತ್ತಾರೆ ಎಂಬ ಭ್ರಮೆ ನನಗಿಲ್ಲ. ಆದರೆ ಆತ ಗೆದ್ದರೆ ಅಮೆರಿಕದ ಮತ್ತು ಜಗತ್ತಿನ ಇತಿಹಾಸದಲ್ಲಿ ಹೊಸ ಪುಟವೊಂದಂತೂ ಖಂಡಿತ ಆಗುತ್ತಾರೆ ಎಂಬ ಆಶೆಯಂತೂ ಇದೆ.

ಹೊಸ ಪುಟಗಳಿಂದಲೇ ಹೊಸ ಅಧ್ಯಾಯಗಳು ಪ್ರಾರಂಭವಾಗುತ್ತವಲ್ಲವೆ?....

■

ಕಣ್ಮರೆಯಾದ ಇಬ್ಬರು ಹೋರಾಟಗಾರರು

ಕೋಮುವಾದಿ ಶಕ್ತಿಗಳು ನಾಡಿನ ಜಾತ್ಯತೀತ- ಹಾರ್ದ ಪರಂಪರೆಯನ್ನು ಛಿದ್ರಗೊಳಿಸುತ್ತಿರುವ ಈ ಾಯದ ದಿನಗಳಲ್ಲಿ ಆ ಶಕ್ತಿಗಳಿಗೆ ಎದೆಯೊಡ್ಡಿ ತ್ಯತೀತ-ಸೌಹಾರ್ದ ಪರಂಪರೆಯನ್ನು ಕಾಪಾಡುವ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಎರಡು ಜೀವಗಳು ಕಣ್ಮರೆಯಾಗಿವೆ. ಒಬ್ಬರು ಹಿರಿಯ ಬಂಡಾಯ ಸಾಹಿತಿ ಆರ್.ವಿ.ಭಂಡಾರಿಯವರಾದರೆ ಮತ್ತೊಬ್ಬರು ಹೋರಾಟಗಾರ ಎಲ್.ಎಸ್.ಗೋಪಾಲಕೃಷ್ಣ.

ಮೂಲತಃ ಲೋಹಿಯಾವಾದಿಯಾಗಿದ್ದ ಗೋಪಾಲ ಕೃಷ್ಣ ಅವರಿಗೆ ಈ ಸಮಾಜವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವಲ್ಲಿ, ಸಮಾಜ ಬದಲಾವಣೆಗಾಗಿ ನಡೆಯುತ್ತಿರುವ ಸಾಮಾಜಿಕ ಚಳವಳಿಯೊಂದರ ವಿಶ್ಲೇಷಣೆ ಮಾಡುವಲ್ಲಿ ಅನೇಕ ಮಿತಿಗಳಿದ್ದುದು . ಅವರು ಈ ಶೋಷಕ ವ್ಯವಸ್ಥೆಯ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಅನೇಕ ಪ್ರಾಮಾಣಿಕ ಹೋರಾಟಗಾರರನ್ನು ಭ್ರಮೋತ್ಪಾದಕರೆಂಬಂತೆ ಕಂಡಿದ್ದೂ ಂಟು. ಚುನಾವಣೆಯಿಂದಲೇ ಬದಲಾವಣೆ, ಪರಿವರ್ತನೆ ಸಾಧ್ಯ ಎಂದು ಅಚಲವಾಗಿ ನಂಬಿದ್ದ ಅವರು ಚುನಾವಣೆಗಳು ಶೋಷಕರು ತಮ್ಮ ಶೋಷಣೆಯನ್ನು ಮುಂದುವರೆಸುವುದಕ್ಕಾಗಿ ಕಂಡುಕೊಂಡ ಆಧುನಿಕ ವಿಧಾನ ಎಂದು ವಿಮರ್ಶಿಸುವವರನ್ನೆಲ್ಲಾ ದೇಶದ್ರೋಹಿಗಳಂತೆ ಕಂಡದ್ದೂ ಇದೆ. ಅದೇನೇ ಇದ್ದರೂ ಸಮಾಜ ಪರಿವರ್ತನೆಯ ಅವರ ಆಶಯ ಮತ್ತು ಅದಕ್ಕಾಗಿನ ಅವರ ಬದ್ಧತೆ ಮಾತ್ರ ಪ್ರಶ್ನಾತೀತವಾದದ್ದು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಗೋಪಾಲಕೃಷ್ಣ ಕೊನೆ ಉಸಿರಿರುವ ತನಕ ಸಮಾಜವಾದಿ ಆಶಯಗಳಿಗಾಗಿ ದುಡಿದರು. ಮೂಳೆಯ ಕ್ಯಾನ್ಸರ್‌ಗೆ ತುತ್ತಾಗಿದ್ದ ಅವರು ತಮ್ಮ ಒಂದು ಕಾಲನ್ನೇ ಕಳೆದುಕೊಂಡು ಅಂಗವಿಕಲರಾದರು. ಕೃತಕ ಕಾಲನ್ನು ಹಾಕಿಸಿಕೊಂಡು ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ಕ್ರಿಯಾಶೀಲವಾಗಿ ಓಡಾಡುತ್ತಿದ್ದರು.


ಇನ್ನು ಆರ್.ವಿ.ಭಂಡಾರಿಯವರೂ ಕೂಡ ಈ ಶೋಷಕ ವ್ಯವಸ್ಥೆಗೆ ಪರ್ಯಾಯವಾಗಿ ವಾಸ್ತವ ಸಮಾಜವಾದವನ್ನು ಪ್ರತಿಪಾದಿಸುವ ಹೋರಾಟಗಾರರಾಗಿದ್ದರು. ಈ ಬಂಡವಾಳಶಾಹಿ ವ್ಯವಸ್ಥೆಯೇ ಅಂತಿಮ, ಇದು ಬದಲಾಗುವುದಿಲ್ಲ ಎಂದೆಲ್ಲಾ ವಾದಿಸುತ್ತಿದ್ದವರಿಗೆ ವಿರುದ್ಧವಾಗಿ ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವಾದಿ ಸಮಾಜವನ್ನು ಕಟ್ಟಬಹುದೆಂಬ ಭರವಸೆಯನ್ನು ಕೊಟ್ಟವರು.

ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಭಂಡಾರಿಯವರು ಒಬ್ಬ ಉತ್ತಮ ಸಾಹಿತಿಯೂ ಕೂಡ ಆಗಿ ಕೊಡುಗೆ ಕೊಟ್ಟಿದ್ದಾರೆ. ಸಾಹಿತ್ಯ ಅರಸೊತ್ತಿಗೆಯನ್ನು ಹೊಗಳುವ ಗುಲಾಮತನದಿಂದ ಹೊರಬಂದು ಜನರ ಬದುಕನ್ನು ಬದಲಾಯಿಸುವ ಸಾಧನವಾಗಬೇಕು ಎಂದು ಪ್ರತಿಪಾದಿಸುತ್ತಿದ್ದ ಅವರು ಆ ದಿಶೆಯಲ್ಲಿಯೇ ತಮ್ಮೆಲ್ಲಾ ಸಾಹಿತ್ಯಿಕ ಕೃತಿಗಳನ್ನು ರಚಿಸಿದ್ದರು. ಬಂಡಾಯ ಸಾಹಿತ್ಯ ಚಳವಳಿಯ ಆರಂಭಿಕ ದಿನಗಳಲ್ಲಿ ಅದರ ಮುಂಚೂಣಿ ನಾಯಕರಲ್ಲಿ ಒಬ್ಬರಾಗಿದ್ದ ಭಂಡಾರಿಯವರು 12ನೇ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಭಂಡಾರಿಯವರು ಈಗ ತಮ್ಮ 72ನೇ ವಯಸ್ಸಿನಲ್ಲಿ ಅಸುನೀಗಿದ್ದಾರೆ.

ಕೋಮುವಾದದ ವಿಷಜ್ವಾಲೆಗಳು ಎಲ್ಲೆಡೆ ವ್ಯಾಪಿಸುತ್ತಿರುವ ಈ ದಿನಗಳಲ್ಲಿ, ಬಂಡವಾಳವಾದ ನಗ್ನವಾಗಿ ಫ್ಯಾಸಿಸಂ ರೂಪದಲ್ಲಿ ಅನಾವರಣಗೊಳ್ಳುತ್ತಿರುವ ಈ ದಿನಗಳಲ್ಲಿ ಈ ಇಬ್ಬರು ಸಮಾಜವಾದಿ ಹೋರಾಟಗಾರರ ಸಾವು ಸಮಾಜವಾದಿ ಆಶಯಗಳಿಗಾಗಿ ಮುನ್ನಡೆಯುತ್ತಿರುವ ಹೋರಾಟಗಾರರಿಗೆ ಅಪಾರ ನಷ್ಟವೇ ಹೌದು.

ಈ ಇಬ್ಬರೂ ಹೋರಾಟಗಾರರಿಗೆ 'ಲಂಕೇಶ್' ಬಳಗವು ಈ ಸಂದರ್ಭದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

■



ಯಡ್ಡಿ ಚೀರಾಟಕ್ಕೆ ಕನ್ನಡ ಬಲಿ

ಪಾರ್ವತೀಶ

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಮಾನ್ಯತೆ ನೀಡಲು ಕೇಂದ್ರದ ಯುಪಿಯ ಸರ್ಕಾರದಿಂದ ಇನ್ನೇನು ಇದೇ ಆಕ್ಟೋಬರ್ ಕೊನೆಯೊಳಗಾಗಿ ಪ್ರಕಟಣೆಯೂ ಬರುವುದಿತ್ತು. ಆದರೆ ಈಗ ಅದಕ್ಕೊಂದು ಅನಿರೀಕ್ಷಿತ ತಡೆ ಬಂದಿದೆ.

ಅದು ಬೇರೇನೂ ಅಲ್ಲ ಮುಖ್ಯಮಂತ್ರಿ ಯಡ್ಡಿಯ ಹರಕು ಬಾಯಿ!

ಯಾವಾಗ ಯಡಿಯೂರಪ್ಪ "ಇನ್ನು ಮೂರು ದಿನದೊಳಗೆ ಕನ್ನಡಕ್ಕೆ ಮಾನ್ಯತೆ ಕೊಡದಿದ್ದರೆ ನಾನು ರಾಜ್‌ಘಾಟ್‌ನಲ್ಲಿ ಧರಣಿ ಮಾಡ್ತೀನಿ" ಎಂದು ಬೆಂಗಳೂರಲ್ಲಿ ಕಿರುಚಿಕೊಂಡರೋ ಅದು ದೆಹಲಿಯಲ್ಲಿ ಬೇರೆಯದೇ ಮೆಸೇಜ್ ಆಗಿ ಪ್ರತಿಧ್ವನಿಸಿತ್ತು. ಕಾಂಗ್ರೆಸ್ ಸರ್ಕಾರ ಇದೇ ನವೆಂಬರ್‌ನ ರಾಜ್ಯೋತ್ಸವ ಆಚರಣೆಗೆ ಉಡುಗೊರೆಯಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡಿರುವುದಾಗಿ ಆದೇಶ ಹೊರಡಿಸಲು ಎಲ್ಲಾ ತಯಾರಿ ಮಾಡಿಕೊಳ್ಳುತ್ತಿತ್ತು. ಈ ಸಂಬಂಧ ಪ್ರಧಾನಿ ಮನಮೋಹನ್ ಸಿಂಗ್ ನೇಮಿಸಿದ್ದ ತಜ್ಞರ ಸಮಿತಿಯೂ ಸಕಾರಾತ್ಮಕ ವರದಿಯನ್ನೇ ನೀಡಿತ್ತು. ಕಳೆದ ತಿಂಗಳು ದೆಹಲಿಯಲ್ಲಿ ನಡೆದ ಕನ್ನಡ-ತೆಲುಗು ಭಾಷೆಯ ಸೆಮಿನಾರ್ ಒಂದರಲ್ಲಿ ಕಾಂಗ್ರೆಸ್ ನಾಯಕ ವೀರಪ್ಪ ಮೊಯ್ಲಿಯವರೇ ಈ ವಿಚಾರ ಬಹಿರಂಗಪಡಿಸಿದ್ದರು.

ಹೀಗೆ ಎಲ್ಲಾ ಸರಿಯಾಗಿ ಸಾಗುತ್ತಿರುವಾಗ, ಇನ್ನೇನು ಆದೇಶ ಹೊರಬರಲಿದೆ ಎನ್ನುವ ಹಂತದಲ್ಲಿದ್ದಾಗ ಈ ಆಕ್ಸಿಡೆಂಟ್ ಆಗಿದೆ. ಹರಕು ಬಾಯಿಯ ಯಡ್ಡಿ ಕಿವಿಗೆ ಈ ವಿಚಾರ ಗೊತ್ತಾಗಿದ್ದೇ ಆ ಆಕ್ಸಿಡೆಂಟ್‌ಗೆ ಕಾರಣ. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ಹೋರಾಡಿ ಗಳಿಸಿಕೊಟ್ಟ ಗಂಡುಗಲಿ ಎಂಬ ಕೀರ್ತಿ ತನಗೇ ಸಿಗಲೆಂದು ದುರಾಸೆಪಟ್ಟ ಯಡ್ಡಿ ಹಿಂದೆಮುಂದೆ ಯೋಚಿಸದೆ ಕೇಂದ್ರ ಸರ್ಕಾರಕ್ಕೆ ಮೂರು ದಿನಗಳ ಗಡುವು ನೀಡಿಬಿಟ್ಟರು. 300 ಜನ ಶಾಸಕರ ಸೇನೆ ಕರೆದುಕೊಂಡು ದೆಹಲಿಗೇ ದಂಡೆತ್ತಿ ಬರುವುದಾಗಿಯೂ ಗೊಡ್ಡು ಬೆದರಿಕೆ ಹಾಕಿಬಿಟ್ಟರು.

ಇಂಥ ಟೈಂನಲ್ಲಿ ರಾಜಕಾರಣಿಗಳು ಹೇಗೆ ಯೋಚಿಸಲು ಸಾಧ್ಯವೋ ಈ ಕಾಂಗ್ರೆಗಳೂ ಅದೇ ರೀತಿ ಲೆಕ್ಕಾಚಾರ ಮಾಡುತ್ತಿದ್ದಾರೆ.

ಈಗ ಕನ್ನಡಕ್ಕೆ ಮಾನ್ಯತೆ ಕೊಡಿಸಿದರೂ ಈ ಬಾಯಿಬಡುಕ ಯಡ್ಡಿ 'ನೋಡಿದ್ರಾ ನಾನೇ ಹೋರಾಟಕ್ಕಿಳಿದಿದ್ದರಿಂದ ಇದು ಸಿಕ್ಕಿದೆ' ಅಂತ ಊರು ತುಂಬಾ ಹೇಳಿಕೊಂಡು ತಿರುಗುತ್ತಾರೆ. ಇದರಿಂದ ಕಾಂಗ್ರೆಸ್‌ಗೇನು ಲಾಭ ಎಂದು ಯೋಚಿಸಿ ಈ ಇಡೀ issue ಅನ್ನೇ ಮತ್ತೆ ಕೆಲಕಾಲ ಮುಂದಕ್ಕೆ ಹಾಕಿದ್ದಾರೆ.

ಇದರ ಸಾರಾಂಶವಿಷ್ಟೇ. ಯಡ್ಡಿ ಕೆಲದಿನ ತನ್ನ ಬೊಂಬಾಯಿಯಂಥ ಹರಕುಬಾಯಿ ಮುಚ್ಚಿಕೊಂಡಿದ್ದರೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಗ್ಯಾರಂಟಿಯಾಗಿ ಸಿಗುತ್ತದೆ. ಇಲ್ಲದಿದ್ದರೆ ಲೋಕಸಭಾ ಚುನಾವಣೆವರೆಗಾದರೂ ಕಾಯಲೇಬೇಕಾಗುತ್ತದೆ. ತೆಲುಗರೂ ಅಷ್ಟೆ!

ಆದರೆ ತಾಯಿ ಭುವನೇಶ್ವರಿಯೇ ಬಂದು ಬೇಡಿಕೊಂಡರೂ ಈ ಯಡ್ಡಿ ಸುಮ್ಮನಿರುತ್ತಾರಾ ಹೇಳಿ?

ಒಬ್ಬ ಮುಖ್ಯಮಂತ್ರಿಗಿರಬೇಕಾದ ಗಾಂಭೀರ್ಯ, ತೂಕದ, ವಿವೇಕದ ಮಾತು. ವಿವೇಚನಾಯುಕ್ತ ನಡವಳಿಕೆಗಳೂ ಯಡ್ಡಿಯಲ್ಲಿ ಕಾಣುತ್ತಿಲ್ಲ. ನೀವೇ ಯೋಚಿಸಿ ನೋಡಿ. ರಸಗೊಬ್ಬರ ಕೊರತೆ ಬಂದಾಗ ಯಡ್ಡಿ ಧರಣಿ ಮಾಡ್ತೀನಿ ಅನ್ನಲಿಲ್ಲ, ವಿದ್ಯುತ್ ಕ್ಷಾಮ ಬಂದಾಗ ಧರಣಿ ಕೂರಲಿಲ್ಲ, ಬರಗಾಲ-ಪ್ರವಾಹ ಎರಡೂ ಏಕಕಾಲದಲ್ಲಿ ಕಾಡುತ್ತಿದ್ದರೂ ಕೇಂದ್ರದ ಪರಿಹಾರ ಕೇಳಲು ಧರಣಿ ಮಾಡ್ತೀನಿ ಅಂತ ಒಂದು ದಿನವೂ ಹೇಳಲಿಲ್ಲ....

ಆದರೆ ಈಗ

ಶಾಸ್ತ್ರೀಯ ಭಾಷೆಗೆ ಧರಣಿ ಮಾಡ್ತೀನಿ ಎನ್ನುತ್ತಿದ್ದಾರೆ. ಹಾಗಂತ ಹೇಳಿ ಈಗಾಗಲೇ ಒಂದು ವಾರವಾದರೂ ಯಡ್ಡಿಯೇನು ದೆಹಲಿಗೆ ಹೋಗಿಲ್ಲ, ಧರಣಿ ಕುಳಿತಿಲ್ಲ. ಆದರೂ ಇವರ ಕ್ಷುಲ್ಲಕ ರಾಜಕೀಯಕ್ಕೆ ಈಗ ಕನ್ನಡವೂ ಬಲಿಯಾಗುತ್ತಿರುವುದೇ ನಿಜವಾದ ದುರಂತ.

ಕನ್ನಡ ಚಳವಳಿಗಾರರು ಶಾಸ್ತ್ರೀಯ ಭಾಷೆ ಮಾನ್ಯತೆಗಾಗಿ ರಸ್ತೆತಡೆ ರೈಲು ತಡೆ ಮಾಡುವ ಬದಲಾಗಿ ಯಡ್ಡಿಯ ತಿಕ್ಕಲು ಮಾತಿಗೆ ಕೆಲದಿನ ತಡೆ ಹಾಕಿದರೂ ಸಾಕು.

ಕನ್ನಡಕ್ಕೆ ಮಾನ್ಯತೆ ಖಂಡಿತ ಸಿಗುತ್ತದೆ.


ಆದರೆ ಅದು ಸಾಧ್ಯವೆ?

ಮುಖ್ಯಮಂತ್ರಿಯಾದ ಮೇಲೂ ವಿರೋಧ ಪಕ್ಷದ ನಾಯಕನಂತೆ ವರ್ತಿಸುತ್ತಿರುವ ಯಡಿಯೂರಪ್ಪ ಈ ವಿಚಾರದಲ್ಲಿ ಸ್ವಲ್ಪವಾದರೂ ಮುತ್ಸದ್ದಿತನ ತೋರಬೇಕಿದೆ. ಇನ್ನೇನು ನೂರೈವತ್ತು ದಿನಗಳ ಅಮೋಘ ಪ್ರದರ್ಶನ ಕಾಣಲಿರುವ ಯಡ್ಡಿ ಸರ್ಕಾರವೆಂಬ ಕಾಮಿಡಿ ಸಿನಿಮಾಗೆ ಹೇಳಿಕೊಳ್ಳುವ ಒಂದೂ ಸಾಧನೆಗಳಿಲ್ಲ. ಆ ಕೊರತೆ ತುಂಬಿಕೊಳ್ಳಲೋ ಏನೋ ಯಡ್ಡಿ ಈಗ ಶಾಸ್ತ್ರೀಯ ಭಾಷೆಯ ಬೆನ್ನು ಹತ್ತಿದ್ದಾರೆ.

ಮುಖ್ಯಮಂತ್ರಿಯಾದ ಹೊಸದರಲ್ಲಿ ತಾನೇ ಏನಾಯಿತು?

ಮೊದಲು ನನ್ನದು ಮೋದಿ ಮಾದರಿ ಸರ... ಅಂದಿದ್ದರು ಯಡಿಯೂರಪ್ಪ. ಆಮೇಲೆ ಮೋ... ನರರಾಕ್ಷಸನ ಇಮೇಜ್ ಇದೆಯೆಂದು ಹಿಂಜರಿ... ಗುಜರಾತ್ ಮಾದರಿ ಅಂದರು. ಕೆಲದಿನ ಬಸವ... ಮಾದರಿ ಅಂತ ಹೇಳಿಕೊಂಡು ಓಡಾಡಿದರು. ಬ... ಜ್ಞಾನತಪ್ಪಿ ಗಾಂಧಿ ಮಾದರಿ ಅಂತಲೂ ಯಾ... ನಂಬದಂತ ಹೇಳಿಕೆ ಕೊಟ್ಟರು. ಹೀಗೆ ತಲೆಕೆಟ್ಟವ... ದಿನಕ್ಕೊಂದು ಮಾದರಿ ಹುಡುಕುತ್ತಾ ವಿರೋಧ ಪಕ್ಷ... ರನ್ನು ಮೃಗಗಳು ಅಂದರು. ಕುಮಾರಸ್ವಾಮಿ ಮ... ಬೀದಿ ಜಗಳಕ್ಕೆ ಬಿದ್ದು ಮಾನಹಾನಿ ಕೇಸ್ ಹಾಕಿದ... ಪಕ್ಷಾಂತರಿ ಶಾಸಕ ಆನಂದ್ ಆಸ್ನೋಟಿಕರ್ ಮ... ಕೊಲೆ ಆರೋಪವಿದ್ದರೂ ಅದಕ್ಕೆ ಆರ್.ವಿ. ದೇಶಪಾ... ಕಾರಣ ಎಂದು ಅಸಂಬದ್ಧ ಹೇಳಿಕೆ ಕೊಟ್ಟರು. ... ಕಾರ್ಯದರ್ಶಿ ಬಳಿಗಾರ್ ಕೆನ್ನೆಗೆ ಹೊಡೆದರು... ... ತನಗೆ ಅತೀ ಸಮೀಪವಿರಬಲ್ಲವರನ್ನು ಕಚ್ಚಿ ಗಾಯಗೊ... ಲಿಕ್ಕೂ ಸಾಕು ಬಿಡಿ. ಇನ್ನೊಂದು ಸಾರಿ ಪೊಲೀ... ನಮ್ಮ ಮಾತು ಕೇಳುತ್ತಿಲ್ಲ ಎಂದು ಹೊಣೆಗೇಡಿಯ... ಬಹಿರಂಗ ಹೇಳಿಕೆ ಕೊಟ್ಟರು. ಯುಡವನಹಳ್ಳಿ ಚ... ಮೇಲಿನ ದಾಳಿಗೆ ಕಾರಣ ಗೊತ್ತಾಗುವ ಮೊದಲೇ ಶಾ... ಸರ್ಕ್ಯೂಟ್ ಎಂದು ತಿಪ್ಪೆ ಸಾರಿಸಲು ನೋಡಿದರು.

ಈಗ ಹುಚ್ಚನಂತೆ ಕನ್ನಡಕ್ಕಾಗಿ ಧರಣಿ ಮಾಡು... ಅಂತ ಕುಣಿಯುತ್ತಿದ್ದಾರೆ.



ಆಂಧ್ರ ಗಡಿ ವಿವಾದ-ಉಸಿರೆತ್ತದ ಕನ್ನಡ ನಾಯ...

ಕಳೆದ ವಾರದಿಂದ ಶಾಸ್ತ್ರೀಯ ಭಾಷೆ ವಿಚಾರಕ್ಕೆ ಮತ್ತೆ ಗಂಟುಬಿದ್ದಿರುವ ... ಹೋರಾಟದ ನಾಯಕರು ಪ್ರತಿಭಟನೆ ಆರಂಭಿಸಿದ್ದಾರೆ. ಕರ್ನಾಟಕ ರಕ್ಷಣಾ ವೇ... ನಾರಾಯಣಗೌಡ ಹಾಗೂ ಪ್ರವೀಣ್ ಶೆಟ್ಟಿ ಬಣಗಳೆರಡೂ ಹೇಳಿಕೆ ನೀಡುತ್ತಿ... ಒಬ್ಬಂಟಿ ನಾಯಕ ವಾಟಾಳ್ ನಾಗರಾಜ್ ಹಾಸ್ಯಾಸ್ಪದವಾಗಿ ಕರ್ನಾಟಕ್ ಬಂದ್ ... ವುದಾಗಿ ಹೇಳಿದ್ದಾರೆ. ಚಿ.ನಾ. ರಾಮು ಎಂಬ ಅವಿವೇಕಿ ಯಡ್ಡಿಯ ಧರಣಿಗೆ ಬೆ... ಘೋಷಿಸಿದ್ದಾನೆ. ಸಾಹಿತ್ಯ ಪರಿಷತ್‌ನ ಅಧ್ಯಕ್ಷ ನಲ್ಲೂರು ಪ್ರಸಾದ್ ಸಹ ದನಿ ಎ...

ಆದರೆ

ಈ ಕನ್ನಡ ಸುಪುತ್ರರಲ್ಲಿ ಒಬ್ಬರೂ ಕರ್ನಾಟಕ-ಆಂಧ್ರ ಗಡಿ ವಿವಾದದ ಬಗ್ಗೆ ಉಸಿರೆತ್ತುತ್ತಿಲ್ಲ ಯಾಕೆ?

ಹೊಗೇನಕಲ್ ಗಡಿ ವಿಚಾರದಲ್ಲಿ ವಿಪರೀತ ಗಲಭೆ ಎಬ್ಬಿಸಿದ ಇದೇ ಕನ್ನಡ ನಾಯಕರುಗಳಿಗೆ ಬಿಜೆಪಿ ... ಜನಾರ್ದನ ರೆಡ್ಡಿ ಕರ್ನಾಟಕದ ಗಡಿ ದಾಖಲೆ ತಿರುಚಿ ರಾಜ್ಯಕ್ಕೆ ಅನ್ಯಾಯ ಮಾಡಿದ್ದು ಯಾಕೆ ಮುಖ್ಯ ಅನಿಸು...

ಏನಾದರೂ ಡೀಲು ಕುದುರಿದೆ ಅಂತ ಇದರರ್ಥನಾ?

ಇವರೆಲ್ಲಾ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನಕ್ಕಾಗಿ ಆಗ್ರಹಿಸಲಿ, ಅದು ತಪ್ಪಲ್ಲ. ಆದರೆ ಕರ್ನಾಟಕದ... ಬದಲಿಸಿ ಆಂಧ್ರಕ್ಕೆ ಅನುಕೂಲ ಮಾಡಿಕೊಟ್ಟಿರುವ ಸಚಿವ ಜನಾರ್ದನ ರೆಡ್ಡಿ ತಪ್ಪು ಮಾಡಿದ್ದು ಇವರಿಗೆ ಕಾಣುತ್ತಿಲ್ಲ ... ಅಂತ?

ಪತ್ರಕರ್ತರ ಪೆನ್ನು V/s ಮದನ್‌ಮಲ್ಲು ಗನ್ನು

'ಕೇಡುಗಾಲ ಬಂದರೆ ನಾಯಿ ಕೂಡ ವೊಟ್ಟೆಯಿಡುತ್ತದೆ' ಎನ್ನುತ್ತಾರಲ್ಲ, ಹಾಗಾಗಿದೆ ಈ ಮದನ್‌ಮಲ್ಲು ಎಂಬ ಸಿನಿಮಾ ಕಂಟಕನ ಮಂಗಾಟ.


ಈವರೆಗೆ ಈತ ಮಾಡಿದ ಯಾವ ಸಿನಿಮಾಗಳೂ ಬರಕತ್ತಾಗದಿದ್ದರೂ ಈತನಲ್ಲಿರುವ ದುರಹಂಕಾರ, ದಾರ್ಷ್ಟ್ಯತನಕ್ಕಂತೂ ಕೊರತೆಯಿಲ್ಲ.

ಬೆಂಗಳೂರಿನಲ್ಲಿ ನಡೆಯುವ ಅಣ್ಣಮ್ಮ, ಗಣೇಶೋತ್ಸವಗಳಲ್ಲಿ ಆರ್ಕೆಸ್ಟ್ರಾಗಳನ್ನು ನಡೆಸಿಕೊಡುತ್ತಿದ್ದ ಈ ಮಲ್ಲು ಅದ್ಯಾವ ಘಳಿಗೆಯಲ್ಲಿ ಗಾಂಧಿನಗರಕ್ಕೆ ವಕ್ಕರಿಸಿದನೋ? ಇವತ್ತಿನ ತನಕ ಈತನ ದಗಲ್ಬಾಜಿ ಕೆಲಸಗಳು, ಪುಂಡಾಟಿಕೆಗಳು ಮುಂದುವರೆಯುತ್ತಲೇ ಇವೆ.

ಮೊದಲಿನಿಂದಲೂ ಮಲ್ಲು ಹುಸಿ ಬೆದರಿಕೆಗಳೊಡ್ಡುವಲ್ಲಿ, ಕಾಂಜಿಪಿಂಜಿ ಆಟಗಳನ್ನಾಡುವುದರಲ್ಲಿ ನಿಸ್ಸೀಮ. 'ಓಕೆ ಸಾರ್ ಓಕೆ' ಚಿತ್ರದ ಸಂದರ್ಭದಲ್ಲಿ ನಟಿ ದಾಮಿನಿಗೆ 'ಆಸಿಡ್ ಹಾಕುತ್ತೇನೆ' ಎಂದು ಹೇಳಿ ಎಲ್ಲರಿಂದಲೂ ಮುಕಾಮುಕಾ ಉಗಿಸಿಕೊಂಡ ನಂತರ ಪ್ಲೇಟು ಬದಲಿಸಿದ್ದ.


ಜನ ನೋಡುವಂಥ ಒಂದೇ ಒಂದು ಸಿನಿಮಾ ನೀಡುವ ಯೋಗ್ಯತೆಯಿಲ್ಲದಿದ್ದರೂ ಯಾವ ದೊಡ್ಡ ದೊಡ್ಡ ನಿರ್ದೇಶಕರಿಗೂ ಕಮ್ಮಿಯಿಲ್ಲದ ಧಿಮಾಕು ಈತನದ್ದು. ಥರ್ಡ್‌ಕ್ಲಾಸ್ ಸಿನಿಮಾಗಳನ್ನು ಮಾಡಿಕೊಂಡು ತನ್ನ 'ಚಪಲ' ತೀರಿಸಿಕೊಳ್ಳುತ್ತಿದ್ದ ಮಲ್ಲುನನ್ನು ಯಾವಾಗ ಯಡಿಯೂರಪ್ಪ ಸ್ಟೇಜ್ ಮೇಲೆ ತಮ್ಮ ಪಕ್ಕದಲ್ಲೇ ನಿಲ್ಲಿಸಿಕೊಂಡರೋ ಅಲ್ಲಿಂದ ಈತನ ಕೀಚಕ ಬುದ್ಧಿಯೂ ಹೆಚ್ಚಾಯಿತು.

ಕಳೆದ ವಾರ ಈತ ನಿರ್ದೇಶಿಸಿ, ನಿರ್ಮಿಸಿ, ನಟಿಸಿರುವ 'ಹೀಗೂ ಉಂಟೇ' ಎಂಬ ಡಬ್ಬಾ ಸಿನಿಮಾ ಬಿಡುಗಡೆಗೊಂಡಿತು. ಈ ಚಿತ್ರ ಓಡುತ್ತಿರುವ ಥಿಯೇಟರಿನ ತುಂಬ ಸೊಳ್ಳೆ ಹೊಡೆಯುತ್ತಿದ್ದು ಚಿತ್ರವನ್ನು ವಿಮರ್ಶಕರು ಟೀಕಿಸಿದರು ಎಂಬ ಕಾರಣಕ್ಕೆ ಕಳೆದ ಭಾನುವಾರ ಈ ಮಲ್ಲು ಮಹಾಶಯ ಪತ್ರಿಕಾ ಸಂಪರ್ಕಾಧಿಕಾರಿ ದಿ|| ಡಿ.ವಿ. ಸುಧೀಂದ್ರರ ಮಗ ಸುನಿಲ್‌ನನ್ನು ಕರೆದೊಯ್ದು ಬಾಯಿಗೆ ಬಂದಹಾಗೆ ಧಮಕಿ ಹಾಕಿದ್ದಾನೆ.



ಮಲ್ಲುನ ಗೂಂಡಾಗಿರಿ ಇಷ್ಟಕ್ಕೇ ನಿಂತಿಲ್ಲ.


ಮೂವತ್ತು ವರ್ಷಗಳಿಂದ ಸಿನಿಮಾ ಛಾಯಾಗ್ರಾಹಕನಾಗಿ ಹಲವಾರು ಪತ್ರಿಕೆಗಳಿಗೆ ದುಡಿಯುತ್ತಿರುವ ಸೀನಿಯರ್ ಫೋಟೋ ಜರ್ನಲಿಸ್ಟ್ ಕೆ.ಎಸ್. ನಾಗೇಶ್ ಕುಮಾರ್ ಮೇಲೂ ಈತನ ಕೀಚಕ ಕಣ್ಣು ಬಿದ್ದಿದೆ. ನಾಗೇಶ್ ಕುಮಾರ್ ಇತ್ತೀಚೆಗಷ್ಟೇ ಆರಂಭಿಸಿರುವ 'ಸಿನಿಸರ್ಕಲ್' ಎಂಬ ವೆಬ್ ಮ್ಯಾಗಜೀನ್‌ಗೆ ಜಾಹೀರಾತು ಕೊಡುತ್ತೇನೆ ಎಂದು ಹೇಳಿ ಅಶೋಕ ಹೋಟೆಲ್ ಬಳಿ ಕರೆಸಿಕೊಂಡಿದ್ದಾನೆ ಮಲ್ಲು. ಸ್ವಲ್ಪ ಅನುಮಾನದಿಂದಲೇ ಅಲ್ಲಿಗೆ ತೆರಳಿದ ನಾಗೇಶ್‌ರ ಹೊಟ್ಟೆಗೆ ಏಕಾಏಕಿ ಗನ್ ಇಟ್ಟು, ಕೆಟ್ಟಾನುಕೆಟ್ಟ ಭಾಷೆಯಲ್ಲಿ ಬೈಯ್ದಿದ್ದಾನೆ. ಅಷ್ಟೇ ಅಲ್ಲ, 'ಗೋವರ್ಧನ ಮೂರ್ತಿ ಮಾಡಿದ ಹಾಗೆ ಒಂದೇ ಒಂದು ನಿಮಿಷದಲ್ಲಿ ನಿನ್ನನ್ನ ಉಡೀಸ್ ಮಾಡಿಬಿಡ್ತೀನಿ. ನನ್ನ ವಿರುದ್ಧ ಮಾತಾಡೋರ್‍ನ, ಬರೆಯೋರ್‍ನ ಒಬ್ಬೊಬ್ಬರನ್ನಾಗಿ ಎತ್ತಿಬಿಡ್ತೀನಿ. ನನ್ನ ಮತ್ತು ನನ್ನ ಮಗನ ಬಗ್ಗೆ ಬರೆಯುವ ಯಾರನ್ನೂ ನಾನು ಉಳಿಸುವುದಿಲ್ಲ. ಯಾರು ಏನ್ ಕಿತ್ಕೋತಾರೋ ನೋಡ್ತೀನಿ. ಮುಖ್ಯಮಂತ್ರಿ ಯಡಿಯೂರಪ್ಪ ನಮ್ಮೋರು. ನನ್ನ ಹೇಗೆ ಹೊರಗೆ ತರ್ಬೇಕು ಅಂತ ಅವರಿಗೆ ಚೆನ್ನಾಗಿ ಗೊತ್ತು.... ಸರ್ಕಾರ ನಮ್ದು ಕಣೋ....' ಎಂದು ಥೇಟು ಸಿನಿಮಾ ಶೈಲಿಯಲ್ಲಿ ಬೆದರಿಸಿದ್ದಾನೆ. ಅಲ್ಲದೆ ಇನ್ನೂ ಕೆಲವು 'ಹಿರಿಯ' ಪತ್ರಕರ್ತರ ಲಿಸ್ಟನ್ನೂ ನೀಡಿದ್ದಾನೆ.



ನಾಗೇಶ್‌ಕುಮಾರ್ ಚಿತ್ರರಂಗದ ಒಳ-ಹೊ... ಗಳನ್ನು ತಿಳಿದಿರುವ ಅನುಭವಿ ಮನುಷ್ಯ. ಮಾತಿ... ಸ್ವಲ್ಪ ಒರಟುತನ ಮತ್ತು ನೇರವಂತಿಕೆಗಳಿದ್ದರೂ ಎಂ... ಯಾರಿಗೂ ಕೇಡುಮಾಡುವ ವ್ಯಕ್ತಿಯಲ್ಲ. ಇಂಥವ... ಒಬ್ಬ ಪತ್ರಕರ್ತ ಎಂದೂ ಪರಿಗಣಿಸದೆ ಅಂಡರ್‌ವ... ಶೈಲಿಯಲ್ಲಿ ಮಲ್ಲು ಬೆದರಿಸುತ್ತಾನೆಂದರೆ ಅವನ ಧಿಮ... ಇನ್ನೆಷ್ಟಿರಬಹುದು?

ಯಡಿಯೂರಪ್ಪ ಮದನ್ ಮ... ಎಂಬ ಕ್ರಿಮಿಯನ್ನು ತಮ್ಮ ಶ... ಜೇಬಿನಲ್ಲಾದರೂ ಇಟ್ಟುಕೊಳ್ಳಲಿ, ಚೆಡ್ಡಿ... ಜೇಬಿನಲ್ಲಾದರೂ ಬಿಟ್ಟುಕೊಂಡಿರಲಿ. ಆ... ಕಂಡಕಂಡವರ ಮೇಲೆ ತನ್ನ ಕಂತ್ರಿ ಬುದ್ಧಿಯ... ಪ್ರದರ್ಶಿಸುವ ಮಲ್ಲುಗೆ ಪೊಲೀಸರಾದ... ಪಾಠ ಕಲಿಸಬೇಕಲ್ಲಾ?

ದುರಹಂಕಾರದಿಂದ ಮೆರೆದ ಯಾ... ಬ್ಬನೂ ಚಿತ್ರರಂಗದಲ್ಲಿ ಉದ್ಧಾರವ... ಉದಾಹರಣೆಯೇ ಇಲ್ಲ. ಇದಕ್ಕೆ ಇತ್ತೀಚೆ... ಗೋವರ್ಧನ ಮೂರ್ತಿಯೇ ಸಾಕ್ಷಿ. ಮ... ಆತನ ಮುಂದುವರಿದ ಭಾಗವಷ್ಟೇ.



ಮದನ್‌ಮಲ್ಲು ಮಂಗಾಟ


...ಮುಖ್ಯಮಂತ್ರಿಯೊಬ್ಬ ನಡೆದುಕೊಳ್ಳುವ ರೀತೀನಾ ?

...ತುಹ ಸಾಕ್ಷಾತ್ ಭಗವಂತನೇ ಬಂದು 'ಎಲವೊ ...ಮಾನವ. ನೀನೀಗ ಕರ್ನಾಟಕ ರಾಜ್ಯದ ...ಮಂತ್ರಿ ಕಣಯ್ಯ, ಇನ್ನು ಮೇಲಾದರೂ ಸ್ವಲ್ಪ ...ರ್ಯ ಕಲಿ" ಅಂದರೂನೂ ಅದು ಯಡ್ಡಿಗೆ ...ವಾಗಲಿಕ್ಕಿಲ್ಲ...

...ಜಕಾರಣದ ಈ ಸೂಕ್ಷ್ಮ ಅರಿಯದ ಕನ್ನಡದ ...ಗಳು ಮಾತ್ರ ಶಾಸ್ತ್ರೀಯ ಭಾಷೆ ಎಂದು ಮತ್ತೆ ...ಗಿಳಿಯುವ ಮಾತಾಡುತ್ತಿದ್ದಾರೆ. ಯಡ್ಡಿ ಈ ...ತ್ಮಕ ಕುದುರೆಯ ಬೆನ್ನೂ ಹತ್ತಿ ಕೀರ್ತಿ ಪಡೆಯಲು ಹಾಕುತ್ತಿದ್ದಾರೆ.

...ಮ ಈ ಕಾಲಕ್ಕೆ ಬಗೆಹರಿಯುತ್ತದಾ? ■

...ಟಾಳ್ ಪ್ರತಿಭಟನೇಲಿ ಎಮ್ಮೆ ಹಸು ಯಾಕೆ ಗೊತ್ತಾ?



...ಲವು ಕನ್ನಡ ಚಳವಳಿ ...ಗೆ ಧೈರ್ಯ ಜಾಸ್ತಿ ...ತೀಕರಿಗೆ ಮಾತೇ ಬಂಡ... ನಮ್ಮ ವಾಟಾಳ್ ...ಜ್ ಕೂಡಾ ಅಂತವರಲ್ಲಿ ...

...ನ್ನಡಕ್ಕೆ ಶಾಸ್ತ್ರೀಯ ಭಾಷೆ ...ತೆಗಾಗಿ ನವೆಂಬರ್ 22ಕ್ಕೆ ...ಟಕ ಬಂದ್ ನಡೆಸುವ ...ವಾಟಾಳ್ ಎಚ್ಚರಿಕೆ ಕೊಟ್ಟಿದ್ದಾರೆ. ತಮಾಷೆ ಏನೆಂದರೆ ...ದೊಂದು ಬಂದ್ ಕರೆ ನೀಡಲು ಕಾಂಗ್ರೆಸ್ ಬಿಜೆಪಿ ...ತಹ ದೊಡ್ಡ ಪಕ್ಷಗಳೇ ಕೆಲವೊಮ್ಮೆ ಹಿಂಜರಿ...ವೆ. ಆದರೆ ತನ್ನ ಮನೆ ಬಿಟ್ಟು ಇನ್ನೊಂದೆಡೆ ... ಒಂದು ಘಟಕವೂ ಇರದ ವಾಟಾಳ್ 'ಕರ್ನಾಟಕ ...' ಅಂದುಬಿಡುತ್ತಾರೆ.

...ಟಾಳ್ ತಮಾಷೆಗಳು ಇಷ್ಟೆ ಅಲ್ಲ. ಮೊನ್ನೆ ಅವರು ...ಹಸುಗಳನ್ನು ಹಿಡಿದು ತರಿಸಿ ಪ್ರತಿಭಟನೆ ಮಾಡಿದ್ದಾರೆ. ...ವು ಪದೇಪದೇ ನಡೆಯುತ್ತಲೂ ಇರುತ್ತವೆ. ಯಾಕೆ ...?

...ಟಾಳ್ ಪ್ರತಿಭಟನೆಗೆ ನಿಜಕ್ಕೂ ಒಬ್ಬಾನೊಬ್ಬ ...ನೂ ಹೋಗಿ ಭಾಗವಹಿಸುತ್ತಿಲ್ಲ ಪಾಪ. ಹೀಗಾಗಿ ...ಳು ತಾನೇ ಏನು ಮಾಡಿಯಾರು? ದನ ಕುರಿ ...ದು ತಮ್ಮ ಕೆಚ್ಚೆದೆಯ ಹೋರಾಟ ಮುಂದುವರೆಸು... ■



ಮಲ್ಲು ಶೋಧಿಸಿರುವ ಪ್ರತಿಭೆಗಳು

ಇವೆಲ್ಲಾ ಮಲ್ಲುನ ಒಂದು ವರಸೆಯಾದರೆ, ಇನ್ನು ಸಿನಿಮಾದಲ್ಲಿ ನಟಿಸಬೇಕು ಎಂಬ ಮಹದಾಸೆಯಿಂದ ಬರುವ ಯುವಕ ಯುವತಿಯರ ಪಾಲಿಗಂತೂ ಈತ ಶನಿಯೇ ಸರಿ.

ಮೊದಲಿಗೆ ಅವಕಾಶ ಕೊಡುತ್ತೇನೆಂದು ಕರೆದು ಆಮೇಲೆ ಒಂದೊಂದು ಪಾತ್ರಕ್ಕೆ ಇಷ್ಟಿಷ್ಟು ಎಂದು ರೇಟು ಫಿಕ್ಸ್ ಮಾಡಿ ಪ್ರತಿಯೊಬ್ಬರಿಂದಲೂ ದುಡ್ಡು ಪೀಕುತ್ತಾನೆ. ಇನ್ನು ಹುಡುಗಿಯರ ವಿಚಾರದಲ್ಲೂ ಈತ 'ಮದನ'ನೇ! ಅವಕಾಶವನ್ನರಿಸಿ ಬಂದ ಹೆಣ್ಣುಮಕ್ಕಳಿಗೆ ಸಿನಿಮಾದಲ್ಲಲ್ಲದೇ ಬೇರೆ ಬೇರೆ ಜಾಗಗಳಲ್ಲೂ ಒಂದಷ್ಟು ಅವಕಾಶ ಕೊಡಿಸೋದು ಈತನ ಬ್ಯುಸಿನೆಸ್ಸು.

ಆಫ್‌ಕೋರ್ಸ್; ಈತನ ಸಿನಿಮಾಗಳಲ್ಲಿ ನಟಿಸುವ ಕೆಲ ನಟಿಯರೂ ಅಂಥವರೇ. ಈತನ 'ಓಗೂ ಉಂಟೇ' ಚಿತ್ರವನ್ನೊಮ್ಮೆ ನೋಡಿದರೆ ನಿಮಗೇ ಎಲ್ಲ 'ವಿಚಾರ'ಗಳೂ ಅರ್ಥವಾಗಿಬಿಡುತ್ತದೆ.



ತನಗೆ ತಾನೇ 'ಕಲಾಚತುರ' ಎಂಬ ಬಿರುದನ್ನೂ ಕೊಟ್ಟುಕೊಂಡಿರುವ ಮಲ್ಲು ಎಂಥ ಚತುರ ಎಂಬುದು ಇವತ್ತು ಗಾಂಧಿನಗರದ ಗಲ್ಲಿಗಲ್ಲಿಗೂ ಗೊತ್ತಿರುವ ವಿಚಾರವಾಗಿದೆ. ■

ಹಡಗಲಿ ಎಂಜಿನಿಯರಿಂಗ್ ಕಾಲೇಜು ಸ್ಥಳಾಂತರ

ರೆಡ್ಡಿಯ ನಂಜಿನ ರಾಜಕಾರಣ


ರಾಜ್ಯದಲ್ಲಿ ಬಿಜೆಪಿ ಅಧಿಕಾರ ಮುಗಿಯುವುದರೊಳಗೆ ಶಿಕಾರಿಪುರ ಮತ್ತು ಬಳ್ಳಾರಿ ಒಂದಿಷ್ಟು ಅಭಿವೃದ್ಧಿಯನ್ನು ಕಾಣಬಹುದೇನೋ: ಆದರೆ, ಉಳಿದಂತೆ ಇಡೀ ಕರ್ನಾಟಕ ಮಸಣಭೂಮಿಯಾಗುವುದು ಮಾತ್ರ ಸತ್ಯ. ಇಡೀ ನಾಡಿನ ಜನರು ತಮ್ಮ ಬೆವರು-ರಕ್ತ ಹರಿಸಿ ಕಟ್ಟಿದ ತೆರಿಗೆ ಹಣವನ್ನು ಯಡ್ಡಿ ತನ್ನ ಸ್ವಕ್ಷೇತ್ರ ಶಿಕಾರಿಪುರ-ಶಿವಮೊಗ್ಗಗಳಿಗೂ, ರೆಡ್ಡಿ ಬಳ್ಳಾರಿಗೂ ಸುರಿಯುತ್ತಿರುವುದನ್ನು ನೋಡಿದರೆ ಹೀಗೆನ್ನದೇ ಬೇರೆ ದಾರಿಯಿಲ್ಲ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಹೂವಿನ ಹಡಗಲಿಯಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಬಳ್ಳಾರಿ ನಗರಕ್ಕೆ ಸ್ಥಳಾಂತರಿಸಲು ಯಡ್ಡಿ-ರೆಡ್ಡಿ ನೇತೃತ್ವದ ಬಿಜೆಪಿ ಸರ್ಕಾರ ತೀರ್ಮಾನ ಮಾಡಿರುವುದು.



ಕಾಲೇಜ್ ಸ್ಥಳಾಂತರ ವಿರುದ್ಧ ಪ್ರತಿಭಟನೆ

ಇಂತಹದ್ದೊಂದು ತೀರ್ಮಾನ ಇತ್ತ ಬೆಂಗಳೂರಿನ ಪತ್ರಿಕಾಗೋಷ್ಠಿಯಲ್ಲಿ ಶೋಭಾ ಕರಂದ್ಲಾಜೆಯ ಬಾಯಿಂದ ಹೊರಬೀಳುತ್ತಿದ್ದಂತೆಯೇ ಅತ್ತ ಹೂವಿನ ಹಡಗಲಿ ಬೆಂಕಿಯಾಗಿಹೋಗಿದೆ. ಹೂವಿನ ಹಡಗಲಿಯ ಜನರಿಂದ ಎಂಜಿನಿಯರಿಂಗ್ ಕಾಲೇಜನ್ನು ಕಿತ್ತು ಬಳ್ಳಾರಿಯ ಗಣಿಧಣಿಗಳ ಪಾದಕ್ಕಿಡುತ್ತಿರುವ ಯಡ್ಡಿ ಸರ್ಕಾರದ ವಿರುದ್ಧ ಜನ ಬೀದಿಗಿಳಿದಿದ್ದಾರೆ. ಇದೇ ಊರಿನಲ್ಲಿ ರಾಜಕೀಯ ಉತ್ತುಂಗಕ್ಕೇರಿದ ಎಂ.ಪಿ.ಪ್ರಕಾಶ್ ಸರ್ಕಾರದ ತೀರ್ಮಾನದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಆದರೆ, ಅದ್ಯಾವುದನ್ನೂ ಕಿವಿಗೆ ಹಾಕಿಕೊಳ್ಳದ ಕಿವುಡು ಸರ್ಕಾರ ತನ್ನ ಮೂಗಿನ ನೇರಕ್ಕೆ ನಡೆಯಲು ತೀರ್ಮಾನಿಸಿದಂತಿದೆ.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಹೂವಿನ ಹಡಗಲಿಯಿಂದ ಬಳ್ಳಾರಿಗೆ ಸ್ಥಳಾಂತರಿಸುವುದಕ್ಕೆ ಸರ್ಕಾರ ಕೊಟ್ಟ ಕಾರಣ ಹಡಗಲಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ ಎಂಬುದು. ಇದೊಂದು ನೆಪ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ. ನಿಜ, ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ. ಈ ಹಿಂದಿನ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಈ ಕಾಲೇಜು ಪ್ರಾರಂಭಗೊಂಡಿತು. ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡ ಈ ಕಾಲೇಜಿನಲ್ಲಿ 240 ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳುವುದಕ್ಕೆ ಸರ್ಕಾರ ಅನುಮತಿ ನೀಡಿತ್ತು. ಕಾಲೇಜು ಪ್ರಾರಂಭಗೊಂಡ ಮೊದಲನೇ ವರ್ಷದಲ್ಲಿ ಕೇವಲ 45 ವಿದ್ಯಾರ್ಥಿಗಳು ಮಾತ್ರವೇ ಪ್ರವೇಶ ಪಡೆದಿದ್ದರು. ಈ ವರ್ಷ 40 ವಿದ್ಯಾರ್ಥಿಗಳು ಪ್ರವೇಶ ಪಡೆದು ಓದುತ್ತಿದ್ದಾರೆ. ವಿದ್ಯಾರ್ಥಿಗಳು ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ಪ್ರವೇಶ ಪಡೆದಿದ್ದಕ್ಕೆ ಒಂದು ಕಾರಣವೂ ಇದೆ. ಮೊದಲನೆಯದಾಗಿ, ಈ ಕಾಲೇಜಿನಲ್ಲಿ ನುರಿತ ಅಧ್ಯಾಪಕರು ಇದ್ದರೂ ಮೂಲಸೌಕರ್ಯಗಳು ಸರಿಯಾಗಿಲ್ಲ; ಅಧ್ಯಯನಕ್ಕೆ ಬೇಕಾದ ಎಲ್ಲ ಪರಿಕರಗಳು ಲಭ್ಯವಿಲ್ಲ, ಅದನ್ನು ಸರಿಪಡಿಸಬೇಕಾದ ಸರ್ಕಾರ ಮಧ್ಯದಲ್ಲಿಯೇ ಕೈಎತ್ತಿ ನಿಂತಿದೆ. ಕಾಲೇಜು ಪ್ರಾರಂಭವಾಗುವಾಗ ಮೂಲಭೂತ ಸೌಲಭ್ಯಗಳಿಗಾಗಿ 30 ಕೋಟಿ ರೂಪಾಯಿ ಕೊಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿತ್ತು.




ಕಾಲೇಜು ಪ್ರಾರಂಭವಾಗಿ ಎರಡು ವರ್ಷ ಕಳೆದಿದೆ. ಕೊಟ್ಟಿದ್ದು ಕೇವಲ 10 ಕೋಟಿ ಮಾತ್ರ. ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿಲ್ಲ, ಸಂಖ್ಯೆ ಕಡಿಮೆ ಇದೆ ಎಂದು ಬೊಬ್ಬೆಯಿಡುವ ಮೊದಲು ವಿದ್ಯಾರ್ಥಿಗಳು ಯಾಕೆ ಬರುತ್ತಿಲ್ಲ ಎಂಬುದನ್ನು ಸರ್ಕಾರ ನೋಡಬೇಕು. ಅದಕ್ಕೆ ಯಾರು ಹೊಣೆಗಾರರು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಎರಡನೆಯದಾಗಿ ಹೂವಿನ ಹಡಗಲಿ ಒಂದು ತಾಲ್ಲೂಕು ಪ್ರದೇಶ. ಎಂ.ಪಿ. ಪ್ರಕಾಶರ ಪ್ರಾಮಾಣಿಕ ಪ್ರಯತ್ನದಿಂದ ಒಂದಿಷ್ಟು ಅಭಿವೃದ್ಧಿಯನ್ನೂ ಕಂಡಿದೆ. ಈ ಎಂಜಿನಿಯರಿಂಗ್ ಕಾಲೇಜು ಕೂಡ ಬಂದಿದ್ದು ಅವರ ಪ್ರಯತ್ನದಿಂದಲೇ. ಆದರೂ ಅದಿನ್ನೂ ಅಭಿವೃದ್ಧಿಯನ್ನು ಸಾಧಿಸಬೇಕಿದೆ. ಉತ್ತಮ ಫಲಿತಾಂಶ ಹೊರಬಿದ್ದರೆ ನಿಧಾನಕ್ಕೆ ಈ ಕಾಲೇಜಿನಲ್ಲಿ ಪ್ರವೇಶ ಪಡೆಯುವವರ ಸಂಖ್ಯೆಯೂ ಜಾಸ್ತಿಯಾಗುತ್ತದೆ. ಒಂದೇ ಬಾರಿಗೆ ಆಗಬೇಕೆಂದರೆ ಹೇಗೆ? ಹೂವಿನ ಹಡಗಲಿಗೆ ಹೋಲಿಸಿದರೆ ಬಳ್ಳಾರಿಯಲ್ಲಿ ಮೂಲಭೂತ ಸೌಕರ್ಯಗಳು ಚೆನ್ನಾಗಿವೆ. ಬಳ್ಳಾರಿ ಒಂದು ಜಿಲ್ಲಾ ಕೇಂದ್ರ. ರೈಲು ಸಂಪರ್ಕ, ಉತ್ತಮ ರಸ್ತೆ ಸಂಪರ್ಕಗಳನ್ನೂ ಒಳಗೊಂಡಂತೆ ಎಲ್ಲಾ ರೀತಿಯಿಂದಲೂ ಬಳ್ಳಾರಿ ಅಭಿವೃದ್ಧಿ ಕಂಡಿದೆ. ಹಾಗಿದ್ದರೂ ಬಳ್ಳಾರಿಯಲ್ಲಿರುವ ಎರಡು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟಿಲ್ಲ. ಬಳ್ಳಾರಿಯ ಕತೆಯೇ ಹೀಗಿದ್ದ ಮೇಲೆ ಇನ್ನು ಹೂವಿನ ಹಡಗಲಿಯಲ್ಲಿ 45 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆಂದರೆ ಅದೊಂದು ಸಾಧನೆಯೇ ಸರಿ.

ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂಬ ನೆಪವಿಟ್ಟುಕೊಂಡು ಕಾಲೇಜನ್ನು ಸ್ಥಳಾಂತರಿಸಲು ಹೊರಟಿರುವ ಸರ್ಕಾರ ಇನ್ನೊಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬಳ್ಳಾರಿಯಲ್ಲೇ ಸರ್ಕಾರಿ ಡೆಂಟಲ್ ಕಾಲೇಜೊಂದಿದೆ. ಅಲ್ಲಿ ಈ ಹಿಂದೆ ಒಬ್ಬನೇ ಒಬ್ಬ ವಿದ್ಯಾರ್ಥಿಯೂ ಪ್ರವೇಶ ಪಡೆದಿರಲಿಲ್ಲ. ಹಾಗಂತ ಸರ್ಕಾರ ಅದನ್ನು ಬೇರೆ ಕಡೆ ಸ್ಥಳಾಂತರಿಸಿತೆ? ಇಲ್ಲ, ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ 'ವಾಕ್-ಇನ್-ಇಂಟರ್‌ವ್ಯೂ' ಪದ್ಧತಿಯನ್ನು ಅಳವಡಿಸಿದ ಮೇಲೆ ವಿದ್ಯಾರ್ಥಿಗಳು ತಮ್ಮಿಂದ ತಾವೇ ಬಂದು ಸೇರಿದರು. ಈ ಹೊತ್ತು ಅದು ಚೆನ್ನಾಗಿಯೇ ನಡೆಯುತ್ತಿದೆ. ಅದೇ ರೀತಿಯಲ್ಲಿ ಹೂವಿನ ಹಡಗಲಿ ಎಂಜಿನಿಯರಿಂಗ್ ಕಾಲೇಜಿನ ಪರಿಸ್ಥಿತಿಯನ್ನೂ ಸುಧಾರಿಸುವುದಕ್ಕೆ ಅಂಥ ಒಂದಿಷ್ಟು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಯಾಕೆ ಹಿಂದೇಟು ಹಾಕುತ್ತಿದೆ?

ಅಸಲೀಯತ್ತೇ ಬೇರೆಯಿದೆ

ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆಂಬುದು ಕೇವಲ ನೆಪವಷ್ಟೆ. ಸರ್ಕಾರ ಮನಸ್ಸು ಮಾಡಿದರೆ ಇಡೀ ಕಾಲೇಜಿನ ಪರಿಸ್ಥಿತಿಯನ್ನು ಅರ್ಧ ರಾತ್ರಿಯಲ್ಲಿ ಸುಧಾರಿಸಿಬಿಡಬಹುದು. ಹಕೀಕತ್ತೆಂದರೆ ಹೂವಿನ ಹಡಗಲಿ ಉದ್ಧಾರವಾಗುವುದು ಬಿಜೆಪಿ ಸರ್ಕಾರಕ್ಕೆ ಬೇಕಿಲ್ಲ. ಅದರಲ್ಲೂ ವಿಶೇಷವಾಗಿ ಜನಾರ್ಧನ ರೆಡ್ಡಿಗಂತೂ ಸುತಾರಾಂ ಇಷ್ಟವಿಲ್ಲ. ಹಾಗಾಗಿಯೇ ಅದನ್ನು ಹಾಳು ಕೊಂಪೆಯನ್ನಾಗಿಸುವುದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ಚಾಚುತಪ್ಪದೇ ಮಾಡುತ್ತಿದ್ದಾರೆ.



ಹಾಗೆ ನೋಡಿದರೆ ಬಳ್ಳಾರಿಗೆ ಸದ್ಯಕ್ಕೆ ಎಂಜಿನಿಯರಿಂಗ್ ಕಾಲೇಜಿನ ಅವಶ್ಯಕತೆಯಿಲ್ಲ. ಏಕೆಂದರೆ, ಈಗಾಗಲೇ ಅಲ್ಲಿ ಎರಡು ಎಂಜಿನಿಯರಿಂಗ್ ಕಾಲೇಜುಗಳಿವೆ. ಒಂದು ವೀರಶೈವ ವಿದ್ಯಾವರ್ಧಕ ಸಂಘದ ಪ್ರೈಮಹಾಬಳೇಶ್ವರ ಎಂಜಿನಿಯರಿಂಗ್ ಕಾಲೇಜು ಹಾಗೂ ದಿವಂಗತ ಬಸವರಾಜೇಶ್ವರಿಯವರ ಟಿಇಎಚ್‌ಆರ್‌ಡಿ ಟ್ರಸ್ಟ್‌ನ ಬಳ್ಳಾರಿ ಎಂಜಿನಿಯರಿಂಗ್ ಕಾಲೇಜು. ಈಗಾಗಲೇ ಪಕ್ಕದ ಆಂಧ್ರದಲ್ಲಿ ನಾಯಿಕೊಡೆಗಳಂತೆ ಎಂಜಿನಿಯರಿಂಗ್ ಕಾಲೇಜುಗಳು ತಲೆಯೆತ್ತಿರುವುದರಿಂದ ಬಳ್ಳಾರಿ ಕಾಲೇಜುಗಳಲ್ಲೂ ಸಿವಿಲ್ ಎಂಜಿನಿಯರಿಂಗ್‌ಗಳಂಥ ಕೋರ್ಸ್‌ಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭರ್ತಿಯಾಗುವುದಿಲ್ಲ. ಅಂತಹದ್ದರಲ್ಲಿ ಈಗ ಮತ್ತೊಂದು ಎಂಜಿನಿಯರಿಂಗ್ ಕಾಲೇಜನ್ನು ತರಲು ಹೊರಟಿದ್ದಾರೆಂದರೆ ಇವರಿಗೆ ಏನೆನ್ನಬೇಕು?

ಇದು ಜನಾರ್ಧನ ರೆಡ್ಡಿಯ ಸೇಡಿನ ರಾಜಕಾರಣ. ಎಂ.ಪಿ.ಪ್ರಕಾಶ್ ಮತ್ತು ಜಂಗಮರನ್ನು ಜಿಲ್ಲೆಯಲ್ಲಿ ಶಾಶ್ವತವಾಗಿ ಅದುಮಿಡುವ ಕುತಂತ್ರ. ಅದರಲ್ಲೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ರೆಡ್ಡಿ ಗ್ಯಾಂಗ್ ನೆಲಕಚ್ಚಿದ ಮೇಲಂತೂ ಎದುರಾಳಿ ಎಂ.ಪಿ.ಪ್ರಕಾಶ್‌ರನ್ನು ರಾಜಕೀಯವಾಗಿ ನಿರ್ನಾಮ ಮಾಡುವುದಕ್ಕೆ ರೆಡ್ಡಿ ಗ್ಯಾಂಗ್ ಹುಡುಕಿಕೊಂಡಿರುವ ಕಳ್ಳದಾರಿ. ಬಳ್ಳಾರಿಯಲ್ಲಿ ಎಂಜಿನಿಯರಿಂಗ್ ಕಾಲೇಜು ಖಾಲಿ ಹೊಡೆದರೂ ಪರವಾಗಿಲ್ಲ, ಆ ಕಾಲೇಜು ಹೂವಿನ ಹಡಗಲಿಯಲ್ಲಿ ಮಾತ್ರ ಇರಬಾರದು ಎಂಬ ರೆಡ್ಡಿಯ ನಂಜಿನ ರಾಜಕಾರಣಕ್ಕೆ ಇಡೀ ಹೂವಿನ ಹಡಗಲಿ ಬಲಿಯಾಗುತ್ತಿರುವುದು ವಿಪರ್ಯಾಸ. ಅದಕ್ಕೆ ಹಲ್ಲಿಲ್ಲದ ಬಿಜೆಪಿ ಸರ್ಕಾರ ತಲೆಬಾಗುತ್ತಿರುವುದು ಕನ್ನಡಿಗರ ದೌರ್ಭಾಗ್ಯ.

■ ಕುಮಾರ್ ಬುರಡಿಕಟ್ಟಿ

ರೆಡ್ಡಿಯ ಜಂಗಮ ವಿರೋಧಿತನ

ಕರ್ನಾಟಕದೊಳಗೇ ಮಿನಿ ಆಂಧ್ರಪ್ರದೇಶ ಕಟ್ಟಲು ಹೊರಟಿರುವ ರೆಡ್ಡಿ ಬ್ರದರ್ಸ್ ಜಂಗಮರ ಬಗ್ಗೆ ಎದೆಯಾಳದಲ್ಲಿ ಅದೆಷ್ಟು ದ್ವೇಷ ತುಂಬಿಕೊಂಡಿದ್ದಾರೆ ಎಂಬುದು ಅವರು ಸಣ್ಣಪುಟ್ಟ ಜಂಗಮ ಅಧಿಕಾರಿಗಳ ಮೇಲೆ, ಗುಮಾಸ್ತರ ಮೇಲೆ ರೇಗಾಡುವುದನ್ನು ನೋಡಿದರೇನೇ ಅರ್ಥವಾಗುತ್ತದೆ. ಇತ್ತೀಚಿಗೆ ಕರುಣಾಕರ ರೆಡ್ಡಿ ಆರೋಗ್ಯ ಇಲಾಖೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ಷಡಕ್ಷರಯ್ಯ ಎಂಬುವವನನ್ನು ಸಸ್ಪೆಂಡ್ ಮಾಡಿದ. ಷಡಕ್ಷರಯ್ಯ ಜಂಗಮನಾಗಿರುವುದನ್ನು ಬಿಟ್ಟರೆ ಇದಕ್ಕೆ ಬೇರೆ ಕಾರಣ ಸಿಗುವುದಿಲ್ಲ. ಇದೊಂದು ಉದಾಹರಣೆ ಮಾತ್ರ. ರೆಡ್ಡಿ ಬ್ರದರ್ಸ್ ಮಾಡಿರುವ ಸಸ್ಪೆಂಡುಗಳನ್ನು, ಪನಿಷ್‌ಮೆಂಟ್ ವರ್ಗಾವಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರ ಜಂಗಮ ವಿರೋಧಿತನ ಕಣ್ಣಿಗೆ ರಾಚುತ್ತದೆ.

ಅಸಲಿಗೆ ಬಳ್ಳಾರಿಯಲ್ಲಿ ರೆಡ್ಡಿ ಬ್ರದರ್ಸ್ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುವುದಕ್ಕೆ ಒಂದು ರೀತಿಯಲ್ಲಿ ಎಂ.ಪಿ.ಪ್ರಕಾಶ್ ಅವರೇ ಕಾರಣ ಎಂದರೆ ತಪ್ಪಲ್ಲವೇನೋ. 150 ಕೋಟಿ ಗಣಿ ಹಗರಣಕ್ಕಿಂತ ಮೊದಲು ರೆಡ್ಡಿಯನ್ನು ಕರ್ನಾಟಕದಲ್ಲಿ ಕೇಳುವವರಿರಲಿಲ್ಲ. 2000ನೇ ಇಸ್ವಿಯಲ್ಲಿ ಬಳ್ಳಾರಿ ನಗರಸಭೆಯ ಗದ್ದುಗೆ ಏರುವ ತಾಕತ್ತೂ ಕೂಡ ಅವರಿಗಿರಲಿಲ್ಲ. ನಗರಸಭೆ ಅಧಿಕಾರಕ್ಕೇರುವುದಕ್ಕೆ ಎರಡು ಸೀಟುಗಳು ಕಡಿಮೆಯಿದ್ದವು. ಆಗ ಇದೇ ರೆಡ್ಡಿ ಬ್ರದರ್ಸ್ ಎಂ.ಪಿ.ಪ್ರಕಾಶ್ ಕಾಲಿಗೆ ಬಿದ್ದು ಪ್ರಕಾಶ್ ನೇತೃತ್ವದಲ್ಲಿ ಗೆದ್ದಿದ್ದ ತಿಮ್ಮಪ್ಪ ಯಾದವ್ ಮತ್ತು ರೇಣುಕಮ್ಮ ಎಂಬ ಎರಡು ಜೆಡಿಎಸ್ ಕ್ಯಾಂಡಿಡೇಟುಗಳ ಬೆಂಬಲ ಗಳಿಸುವಲ್ಲಿ ಯಶಸ್ವಿಯಾದರು.

ರೆಡ್ಡಿಗಳಿಗೆ ಬೆಂಬಲ ಕೊಡುವ ಮೂಲಕ ಆವತ್ತೇ ಎಂ.ಪಿ.ಪ್ರಕಾಶ್ ಎಡವಿಬಿಟ್ಟಿದ್ದರು. ಈಗ ರೆಡ್ಡಿಗಳು ಯಾವ ಮಟ್ಟಕ್ಕೆ ಬೆಳೆದಿದ್ದಾರೆಂದರೆ ಅವರನ್ನು ಕೇಳುವವರೇ ಇಲ್ಲದಂತಾಗಿ ಹೋಗಿದೆ. ಅದರಲ್ಲೂ ವಿಶೇಷವಾಗಿ ಎಂ.ಪಿ.ಪ್ರಕಾಶರ ರಾಜಕೀಯ ಭವಿಷ್ಯವನ್ನೇ ಕಮರಿಸುವಷ್ಟು ಬೆಳೆದುಬಿಟ್ಟಿದ್ದಾರೆ. ■

ಭಾರತದ ಅಮೋಘ ಸಂಸ್ಕೃತಿ, ಪರಂಪರೆಯನ್ನು ರಕ್ಷಿಸುವುದಕ್ಕೆ ಆರ್‌ಎಸ್‌ಎಸ್ ನೇತೃತ್ವದಲ್ಲಿ ಸಂಘಪರಿವಾರಿಗಳು ಗುತ್ತಿಗೆ ಹಿಡಿದುಕೊಂಡವರಂತೆ ಆಡುತ್ತಾರೆ. ಬಾಯಿ ತೆರೆದರೆ ಮಹಾನ್ ದೇಶಭಕ್ತರಂತೆ ಪುಂಖಾನುಪುಂಖವಾಗಿ ಭಾಷಣ ಬಿಗಿಯುತ್ತಾರೆ. ದೇಶಕ್ಕಾಗಿ, ಧರ್ಮಕ್ಕಾಗಿ ಪ್ರಾಣ ಕೊಡಲೂ ಸಿದ್ಧರೆಂಬಂತೆ ಪೋಜು ಕೊಡುತ್ತಾರೆ. ಪ್ರತೀ ಮೂರು ದಿನಕ್ಕೊಂದು 'ದೇಶ ಉಳಿಸಿ ಅಭಿಯಾನ', 'ಧರ್ಮ ರಕ್ಷಿಸಿ ಅಭಿಯಾನ'ಗಳನ್ನು ಹಮ್ಮಿಕೊಳ್ಳುತ್ತಾರೆ. ಆದರೆ, ಹೊರಗಡೆ ಅಪ್ರತಿಮ ದೇಶಭಕ್ತರಂತೆ ಎಷ್ಟೆಲ್ಲಾ ಪೋಜು ಕೊಟ್ಟರೂ ಒಳಗಡೆ ಅವರೆಷ್ಟು ದೇಶ ದ್ರೋಹಿಗಳಾಗಿದ್ದಾರೆ, ಮಾನವ ವಿರೋಧಿಗಳಾಗಿದ್ದಾರೆ ಎಂಬುದನ್ನು ಮುಂಬಯಿಯ ಭಯೋತ್ಪಾದಕ ನಿಗ್ರಹ ದಳದ ಪೊಲೀಸರು ಹೊರಗೆಡವಿದ್ದಾರೆ. ಆರ್‌ಡಿಎಕ್ಸ್‌ನಂತಹ ಶಕ್ತಿಶಾಲಿ ಸ್ಫೋಟಕಗಳನ್ನು ಬಳಸಿ ಬಾಂಬ್ ತಯಾರಿಸುವುದು, ಕಂಡ ಕಂಡ ಜನನಿಬಿಡ ಪ್ರದೇಶಗಳಲ್ಲಿ ಅವುಗಳನ್ನು ಸ್ಫೋಟಿಸಿ ಅಮಾಯಕ ಜನರನ್ನು ಕೊಂದುಹಾಕುವುದು, ಆಮೇಲೆ ಅದನ್ನೆಲ್ಲಾ ಮುಸ್ಲಿಮ್ ಭಯೋತ್ಪಾದಕರ ತಲೆಗೆ ಕಟ್ಟಿ ಮುಸ್ಲಿಮ್ ಸಮುದಾಯದ ಮೇಲೆ ಅಮಾನವೀಯವಾಗಿ ದಾಳಿ ಮಾಡುವುದು ಹೇಗೆ ಅವರ ದಿನಚರಿಯಾಗಿಬಿಟ್ಟಿದೆ ಎಂಬುದನ್ನು ಮಾಲೆಗಾಂವ್ ಸ್ಫೋಟ ಪ್ರಕರಣವನ್ನು ಭೇದಿಸಿರುವ ಮುಂಬೈ ಪೊಲೀಸರು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಬೀಳಲಿವೆ ಭಜರಂಗೀ ಬಾಂಬ್!

■ ಕುಮಾರ್ ಬುರಡಿಕಟ್ಟಿ

ಕಳೆದ ಮೂರ್ನಾಲ್ಕು ತಿಂಗಳುಗಳಲ್ಲಿ ದೇಶದಾದ್ಯಂತ ನಡೆದಿರುವ ಘಟನಾವಳಿಗಳು ಕೋಮು ಸೌಹಾರ್ದ, ಶಾಂತಿ ಮತ್ತು ಸಹಬಾಳ್ವೆಯನ್ನು ಬಯಸುವ ಜಾತ್ಯತೀತ ಮನಸ್ಸುಗಳನ್ನು ಅತೀವವಾಗಿ ಕಲಕಿಬಿಟ್ಟಿವೆ. ಬೆಂಗಳೂರು, ಅಹಮದಾಬಾದ್, ದೆಹಲಿ ಮತ್ತು ಮಹಾರಾಷ್ಟ್ರದ ಮಾಲೆಗಾಂವ್‌ಗಳಲ್ಲಿ ನಡೆದ ಸರಣಿ ಸ್ಫೋಟಗಳು ಹಾಗೂ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆದ ದಾಳಿಗಳು ಶಾಂತಿ-ಸಹಬಾಳ್ವೆಯ ಭಾರತೀಯ ಸಂಸ್ಕೃತಿಗೆ ಕೊಡಲಿಪೆಟ್ಟು ನೀಡುವಲ್ಲಿ ಯಶಸ್ವಿಯಾಗಿವೆ. ಈ ಘಟನಾವಳಿಗಳಲ್ಲಿ ನೂರಾರು ಜನ ಅಮಾಯಕರು ಪ್ರಾಣ ಕಳೆದುಕೊಂಡಿದ್ದರೆ ಸಾವಿರಾರು ಜನ ಗಾಯಗೊಂಡು, ತಮ್ಮ ಮನೆ ಮತ್ತು ಆಸ್ತಿಪಾಸ್ತಿ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಎಲ್ಲೇ ಬಾಂಬ್ ಸ್ಫೋಟವಾಗಲೀ ಒಂಚೂರೂ ತನಿಖೆ ನಡೆಸದೆ ಅದನ್ನು ಮುಸ್ಲಿಮರ ತಲೆಗೆ ಕಟ್ಟುವುದು ಒಂದು ಪರಿಪಾಠವಾಗಿಬಿಟ್ಟಿದೆ. ಪೊಲೀಸರು ಹೇಳಿದ್ದಕ್ಕೆ ಉಪ್ಪು-ಖಾರ ಹಚ್ಚಿ ಕೆಲವು ಮುಸ್ಲಿಮ್ ಹೆಸರುಗಳನ್ನು ಪ್ರಸ್ತಾಪಿಸಿ ಅದನ್ನೊಂದು ರೋಚಕ ಸುದ್ದಿ ಮಾಡುವಲ್ಲಿ ಮಾಧ್ಯಮಗಳೂ ಹಿಂದೆ ಬಿದ್ದಿಲ್ಲ. ಇತ್ತೀಚೆಗೆ ಬೆಂಗಳೂರು, ಅಹಮದಾಬಾದ್, ದೆಹಲಿ ಮತ್ತು ಮಾಲೆಗಾಂವ್‌ಗಳಲ್ಲಿ ನಡೆದ ಬಾಂಬ್ ಸ್ಫೋಟಗಳೂ ಇದಕ್ಕೆ ಹೊರತಲ್ಲ. ಸ್ಫೋಟಗಳು ನಡೆದಾಕ್ಷಣ ನರೇಂದ್ರ ಮೋದಿ, ಎಲ್.ಕೆ.ಅಡ್ವಾಣಿ, ರಾಜನಾಥ್ ಸಿಂಗ್ ಮುಂತಾದ ಬಿಜೆಪಿ ಶಿಖಾಮಣಿಗಳಂತೂ ದೆಹಲಿಯಲ್ಲಿ ಬಾಂಬ್ ಸ್ಫೋಟವಾಗುವುದು ತಮಗೆ ತಿಳಿದಿತ್ತೆಂದೂ, ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿತ್ತೆಂದೂ, ಆದರೆ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಅದನ್ನು ನಿರ್ಲಕ್ಷಿಸಿತ್ತೆಂದೂ ಬೆಂಗಳೂರಿನಲ್ಲಿ ಭಾಷಣ ಬಿಗಿಯುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿದರು.


ಸಾಧ್ವಿ ಪ್ರಜ್ಞಾಸಿಂಗ್

ಆದರೆ, ಈ ಬಾಂಬ್ ಸ್ಫೋಟಗಳ ಹಿಂದಿನ ಕೈಗಳು ಯಾರದ್ದೆಂದು ಮಹಾರಾಷ್ಟ್ರದ ಮಾಲೆಗಾಂವ್ ಸ್ಫೋಟದ ತನಿಖೆ ನಡೆಸಿರುವ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಹೊರಗೆಡವಿದೆ. ಭಜರಂಗ ದಳ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು, ಜನಜಾಗರಣ ಮಂಚ್ ಮತ್ತು ವಂದೇಮಾತರಂಗಳಂತಹ ಹಿಂದೂತ್ವ ಭಯೋತ್ಪಾದಕ ಸಂಘಟನೆಗಳೇ ಈ ಸ್ಫೋಟದ ಹಿಂದಿನ ರೂವಾರಿಗಳು ಎಂಬುದನ್ನು ಎಟಿಎಸ್ ಸ್ಪಷ್ಟಪಡಿಸಿದೆಯಲ್ಲದೆ ಈ ಸಂಬಂಧ ಪ್ರಜ್ಞಾ ಸಿಂಗ್ ಠಾಕೂರ್ ಎಂಬ ಸಾಧ್ವಿ, ಶ್ಯಾಮ್‌ಲಾಲ್ ಭಾವರ್‌ಲಾಲ್ ಮತ್ತು ಶಿವನಾರಾಯಣ್ ಸಿಂಗ್ ಎಂಬ ಮೂವರು ಚೆಡ್ಡಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದೆ. ಈ ಮೂವರೂ ಸಂಘಪರಿವಾರದ ಶಿಖಾಮಣಿಗಳೇ ಎಂಬುದಿಲ್ಲಿ ವಿಶೇಷ.

ಸೆಪ್ಟೆಂಬರ್ 29ರಂದು ನಡೆದ ಮಾಲೆಗಾಂವ್ ಸ್ಫೋಟದಲ್ಲಿ 12 ವರ್ಷದ ಒಬ್ಬ ಅಮಾಯಕ ಹುಡುಗಿ, ಇಬ್ಬರು ಹದಿಹರೆಯದ ಮುಸ್ಲಿಮ್ ಹುಡುಗರನ್ನೂ ಒಳಗೊಂಡಂತೆ ಏಳು ಜನರು ಕೊಲ್ಲಲ್ಪಟ್ಟು ಎಪ್ಪತ್ತಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದರು. ಮೋಟಾರ್ ಸೈಕಲ್ ಒಂದರಲ್ಲಿ ಬಾಂಬ್ ಇಟ್ಟು ಅದನ್ನು ಮಾಲೆಗಾಂವ್‌ನ ಜನನಿಬಿಡ ಪ್ರದೇಶವಾದ ಭಿಕ್ಕು ಚೌಕ್‌ನಲ್ಲಿ ಸ್ಫೋಟಿಸಲಾಗಿತ್ತು. ಅದೇ ಸಮಯದಲ್ಲಿ ಗುಜರಾತ್ ಮೊಡಸಾ ಪ್ರದೇಶದಲ್ಲೂ ಇದೇ ರೀತಿಯಲ್ಲಿ ಬಾಂಬ್ ಸ್ಫೋಟಗೊಂಡು ಒಬ್ಬರು ಕೊಲ್ಲಲ್ಪಟ್ಟು ಹತ್ತಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಬಾಂಬ್ ಇಡಲಾಗಿದ್ದ ಮೋಟಾರ್ ಸೈಕಲ್ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನಾಯಕಿ ಠಾಕೂರ್‌ಳದ್ದು ಎಂದು ಎಟಿಎಸ್ ತನಿಖೆಯಿಂದ ಸ್ಪಷ್ಟವಾಗಿದೆ.


DNA
Blasts in Malegaon kill 40
It may not be the usual suspects

ಬಾಂಬ್ ಸ್ಫೋಟಕ್ಕೆ ಮುಸ್ಲಿಮರಿಗೆ ಪವಿತ್ರ ದಿನವಾದ ರಂಜಾನ್ ದಿನವನ್ನೇ ಆಯ್ಕೆ ಮಾಡಿಕೊಂಡಿರುವುದು, ಸ್ಫೋಟದಲ್ಲಿ ಮುಸ್ಲಿಮರೇ ಹೆಚ್ಚು ಸಂಖ್ಯೆಯಲ್ಲಿ ಸತ್ತಿರುವುದು ಮುಂತಾದವುಗಳ ಆಧಾರದಲ್ಲಿ ಇದನ್ನು ಹಿಂದೂತ್ವ ಭಯೋತ್ಪಾದಕ ಸಂಘಟನೆಗಳೇ ನಡೆಸಿವೆ ಎಂದು ಹಲವಾರು ಸಂಘಟನೆಗಳು ಮೊದಲಿನಿಂದಲೂ ಆರೋಪಿಸುತ್ತಲೇ ಬಂದಿದ್ದವು. ಕೇವಲ ಮಾಲೆಗಾಂವ್‌ನಲ್ಲಿ ಮಾತ್ರವಲ್ಲ, ಮೆಕ್ಕಾ ಮಸೀದಿ, ಅಜ್ಮೀರ್ ದರ್ಗಾಗಳನ್ನೂ ಒಳಗೊಂಡಂತೆ ಮುಸ್ಲಿಮ್ ಧಾರ್ಮಿಕ ಸ್ಥಳಗಳಲ್ಲಿ ನಡೆದ ಎಲ್ಲಾ ಬಾಂಬ್ ಸ್ಫೋಟಗಳನ್ನು ಸಂಘಪರಿವಾರದ ಸಂಘಟನೆಗಳೇ ನಡೆಸಿವೆ ಎಂದು ಆರೋಪಿಸುತ್ತಲೇ ಬಂದಿದ್ದವು. ಕೆಲವು ದಿನಗಳ ಹಿಂದಷ್ಟೇ ಕಾಂಗ್ರೆಸ್‌ನ ನಾಯಕ ಮತ್ತು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಇತ್ತೀಚಿನ ಸರಣಿ ಸ್ಫೋಟಗಳನ್ನು ಆರ್‌ಎಸ್‌ಎಸ್ ಮತ್ತು ಅದರ ಸಹಭಾಗಿಸಂಘಟನೆಗಳೇ ನಡೆಸಿವೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ ಎಂದಿದ್ದರು.

ಇದೇ ಮೊದಲಲ್ಲ!

ಸಂಘಪರಿವಾರದ ಚೆಡ್ಡಿಗಳೇ ಖುದ್ದಾಗಿ ಬಾಂಬುಗಳನ್ನು ತಯಾರಿಸಿ ಅವುಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಸ್ಫೋಟಿಸಿ, ಅದನ್ನು ಇಸ್ಲಾಮಿಕ್ ಭಯೋತ್ಪಾದಕರ ತಲೆಗೆ ಕಟ್ಟಿ ಇಡೀ ಮುಸ್ಲಿಮ್ ಸಮುದಾಯವನ್ನೇ ಭಯೋತ್ಪಾದಕರೆಂದು ಚಿತ್ರಿಸಿ ಅವರ ಮೇಲೆ ದಾಳಿ ಮಾಡುವ ಸಂಘಪರಿವಾರದ ಕುತಂತ್ರ ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣದಿಂದ ಪ್ರಾರಂಭವಾದದ್ದೇನಲ್ಲ. ಕಾನ್ಪುರದ ಹಾಸ್ಟೆಲ್ ಒಂದರಲ್ಲಿ ಬಾಂಬ್ ತಯಾರಿಸುತ್ತಿದ್ದಾಗಲೇ ಅಕಸ್ಮಾತ್ತಾಗಿ ಅದು ಸ್ಫೋಟಗೊಂಡು ರಾಜೀವ್ ಅಲಿಯಾಸ್ ಪಿಯೂಶ್ ಮತ್ತು ಭುಪಿಂದರ್ ಸಿಂಗ್ ಅರೋರ ಎಂಬಿಬ್ಬರು ಯುವಕರು ಸತ್ತುಹೋದದ್ದು ಇದಕ್ಕೊಂದು ಸ್ಪಷ್ಟ ಉದಾಹರಣೆ.

ಘಟನೆಯಲ್ಲಿ ಸತ್ತ ಪಿಯೂಶ್ ಎಂಬುವವನು ಎಸ್.ಎಸ್. ಮಿಶ್ರ ಎಂಬ ಭಜರಂಗದಳದ ನಾಯಕನ ಮಗನಾಗಿದ್ದನಲ್ಲದೇ ಖುದ್ದು ಭಜರಂಗದಳದ ಕಾರ್ಯಕರ್ತನಾಗಿದ್ದ. ಇನ್ನು ಭುಪಿಂದರ್ ಸಿಂಗ್ ಎಂಬುವವನು ಭಜರಂಗದಳದ ಕಾನ್ಪುರ ನಗರ ಘಟಕದ ಸಂಚಾಲಕನಾಗಿದ್ದ. ಅವರು ತಯಾರಿಸುತ್ತಿದ್ದ ಬಾಂಬ್ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಅಕಸ್ಮಾತ್ತಾಗಿ ಅದು ಸ್ಫೋಟಗೊಂಡಾಗ ಇಡೀ ಹಾಸ್ಟೆಲ್‌ನ ಗೋಡೆಗಳೆಲ್ಲಾ ಬಿರುಕುಬಿಟ್ಟಿದ್ದವು. ಸ್ಫೋಟದ ತುಣುಕುಗಳು 50 ಮೀಟರ್ ಆಚೆಗೆ ಹೋಗಿ ಬಿದ್ದಿದ್ದವು. ಅಲ್ಲದೇ ಪೊಲೀಸರು ಇಡೀ ಪ್ರದೇಶವನ್ನು ಶೋಧಿಸಿದಾಗ ಇನ್ನೂ ಅಚ್ಚರಿ ಕಾದಿತ್ತು, ಅರ್ಧ ಕಾನ್ಪುರವನ್ನು ಸರ್ವನಾಶ ಮಾಡುವುದಕ್ಕೆ ಬೇಕಾದಷ್ಟು ಸ್ಫೋಟಕ ವಸ್ತುಗಳು ಅಲ್ಲಿ ದೊರೆತವು. ಆದರೆ, ಇದೊಂದು ದೊಡ್ಡ ಮಟ್ಟದ ಸುದ್ದಿಯಾಗಲೇ ಇಲ್ಲ. ಇದೇ ಕೆಲಸವನ್ನು ಯಾರಾದರೂ ಮುಸ್ಲಿಮರು ಮಾಡಿದ್ದಿದ್ದರೆ ಇವರೇ ದೇಶದಾದ್ಯಂತ ದೊಡ್ಡ ಮಟ್ಟದ ಹುಯಿಲೆಬ್ಬಿಸುತ್ತಿದ್ದರು; ಹಿಂದು-ಮುಂದು ನೋಡದೇ ಮುಸ್ಲಿಮ್ ಸಮುದಾಯದ ಮೇಲೆ ದಾಳಿ ಪ್ರಾರಂಭಿಸುತ್ತಿದ್ದರು.

ಕಾನ್ಪುರದ ರೀತಿಯಲ್ಲಿಯೇ 2006ರಲ್ಲಿ ನಾಂದೇಡ್‌ನಲ್ಲೂ ಕೂಡ ಬಾಂಬ್ ತಯಾರಿಸುತ್ತಿದ್ದಾಗ ಇಬ್ಬರು ಭಜರಂಗದಳದ ಕಾರ್ಯಕರ್ತರು ಸತ್ತು ಹೋದರು. ಆಗಲೂ ಸಿಬಿಐ ಭಜರಂಗದಳವನ್ನು ರಕ್ಷಿಸುವುದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ಚಾಚೂತಪ್ಪದೇ ಮಾಡಿತು. ಮಹಾರಾಷ್ಟ್ರದ ನಾಸಿಕ್‌ನ ಭೋನ್ಸ್ಲಾ ಶಾಲೆಯಲ್ಲಿ, ನಾಗಪುರದಲ್ಲಿ ನಡೆದ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದಂತೆ ಭಯೋತ್ಪಾದಕ ನಿಗ್ರಹ ದಳವು (ಎಟಿಎಸ್) ತನಿಖೆ ನಡೆಸಿ ಹನ್ನೊಂದು ಸಂಘಪರಿವಾರದ ಶಿಖಾಮಣಿಗಳೇ ಅದರ ರೂವಾರಿಗಳು ಎಂದು ಅವರ ಮೇಲೆ ಕೇಸು ದಾಖಲಿಸಿತ್ತು, ಆದರೆ,

ಸಂಘಪರಿವಾರಿಗ[…] ಸೋಗಲಾಡಿತನ[…]

ಮೊದಲು ಸಮಾಜದಲ್ಲಿ ಶಾಂತಿ ಕದಡುವ ವಿಚ್ಛಿದ್ರ […] ಮತ್ತು ಭಯೋತ್ಪಾದಕ ಕೃತ್ಯಗಳನ್ನು ನಡೆಸುವುದು ಆವ[…] ಅವು ತಮ್ಮ ಕುತ್ತಿಗೆಯನ್ನೇ ಬಿಗಿಯಲಾರಂಭಿಸಿದರೆ 'ಅ[…] ಮಾಡಿದ್ದು ನಾವಲ್ಲ' ಎಂದು ಜಾರಿಕೊಳ್ಳಲು ಪ್ರಯತ್ನಿಸು[…] ಸಂಘಪರಿವಾರಿಗಳಿಗೆ ಅಭ್ಯಾಸವಾಗಿಹೋಗಿದೆ. ಅವರ [...] ಸೋಗಲಾಡಿತನವನ್ನು ಪ್ರತಿ ಪ್ರಕರಣದ[…] ನೋಡಬಹುದಾಗಿದೆ.

ಕಾನ್ಪುರದಲ್ಲಿ ಬಾಂಬ್ ತಯಾರಿಸುತ್ತಿದ್ದಾಗ [...] ಭಜರಂಗದಳದ ಇಬ್ಬರು ಯುವಕರು ಸತ್ತು ಹೋದ[…] ಯಾವಾಗ ಭಜರಂಗಿಗಳ ನಿಜ ಬಣ್ಣ ಬಯಲಾಯಿತ[…] "ಬಾಂಬ್ ತಯಾರಿಸುತ್ತಿದ್ದವರು ಭಜರಂಗದಳದವರಲ್ಲ, ಅ[…] ಎಂದೋ ಭಜರಂಗದಳವನ್ನು ತೊರೆದಿದ್ದರು" ಎಂದು [...] ಜಾರಿಕೊಳ್ಳುವ ಪ್ರಯತ್ನ ಮಾಡಿದರು.

ಕರ್ನಾಟಕದಲ್ಲಿ ಚರ್ಚುಗಳ ಮೇಲೆ, ಕ್ರಿಶ್ಚಿಯ[…] ಸಮುದಾಯದ ಮೇಲೆ ಇದೇ ಭಜರಂಗದಳ ದ[…] ಮಟ್ಟದಲ್ಲಿ ದಾಳಿ ನಡೆಸಿತು. ಅದನ್ನು ತಾನೇ ಸಂಘಟಿಸಿ[…] ಭಜರಂಗದಳದ ನಾಯಕ ಮಹೇಂದ್ರ ಕುಮಾ[…] ಬಹಿರಂಗವಾಗಿ ಕೊಚ್ಚಿಕೊಂಡಿದ್ದ. ಯಾವಾಗ ದೇಶದಾ[…] ಭಜರಂಗದಳದ ವಿರುದ್ಧ ಪ್ರತಿಭಟನೆಗಳಾದವ[…] ಭಜರಂಗದಳವನ್ನು ನಿಷೇಧಿಸಬೇಕೆಂಬ ಒತ್ತಾಯ[…] ಕೇಳಿಬಂದವೋ, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ [...] ಯೋಚಿಸಲಾರಂಭಿಸಿತೋ ತಕ್ಷಣವೇ ಅದರಿಂದ ತಪ್ಪಿಸಿಕೊ[…] ಪ್ರಯತ್ನ ಮಾಡಿದರು. ಮಹೇಂದ್ರ ಕುಮಾರ್‌ನ[…] ಭಜರಂಗದಳದಿಂದ ಹೊರಹಾಕುವ ಮೂಲಕ "ಅ[…] ಮಾಡಿದ್ದು ಮಹೇಂದ್ರ ಕುಮಾರ್‌ನೇ ಹೊರ[…] ಭಜರಂಗದಳವಲ್ಲ" ಎಂದು ಜನರ ಕಿವಿಗೆ ಹೂವು ಇಡ[…] ಪ್ರಯತ್ನ ಮಾಡಿದರು. ಇದಕ್ಕೆ ರಾಜ್ಯದ ಗೃಹ ಮ[…] ವಿ.ಎಸ್.ಆಚಾರ್ಯ ಕೂಡ ದನಿಗೂಡಿಸಿ "ಎಂದ[…] ಭಜರಂಗದಳದಲ್ಲಿದ್ದು ಈಗ ಸಂಘಟನೆಯನ್ನು ತೊರೆದಾ[…] ಈ ಕೃತ್ಯ ನಡೆಸಿದ್ದಾರೆ" ಎಂದರು. ಆದರೆ, ಚರ್ಚು[…] ಮೇಲೆ ದಾಳಿ ನಡೆದಾಗ, ಅದನ್ನು ತಾನೇ ಸಂಘಟಿಸಿದ್ದೆ[…] ಮಹೇಂದ್ರ ಕುಮಾರ್ ಹೇಳಿದಾಗ ಆತ ಭಜರಂಗದ[…] ನಾಯಕನೇ ಆಗಿದ್ದ ಎಂಬುದನ್ನು ಎಲ್ಲರೂ ಮರೆಮಾಚು[…] ಪ್ರಯತ್ನಿಸುತ್ತಿದ್ದಾರೆ.

ಈಗ ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣದ[…] ಸಂಘಪರಿವಾರದ ಚೆಡ್ಡಿಗಳು ಸಿಕ್ಕಿಹಾಕಿಕೊಂಡಿದ್ದಾರೆ. ಅ[…] ಕೂಡ "ಮಾಡಿದ್ದು ತಾವಲ್ಲ" ಎಂದು ರ[…] ಎಳೆಯಲಾರಂಭಿಸಿದ್ದಾರೆ. ಬಾಂಬ್ ಸ್ಫೋಟದ[…] ಭಾಗಿಯಾಗಿರುವ ಭಜರಂಗದಳ ಮತ್ತು ಎಬಿವಿಪಿಗಳ ರಕ್ಷ[…] ಈ ಬಾರಿ ಖುದ್ದು ರಾಷ್ಟ್ರೀಯ ಸ್ವಯಂ ಸೇವಕ ಸಂಘ[…] (ಆರ್‌ಎಸ್‌ಎಸ್) ಬಂದಿದೆ. ರಾಜಕೀಯ ಉದ್ದೇಶಗಳಿ[…] ಎಬಿವಿಪಿಯನ್ನು ಅನವಶ್ಯಕವಾಗಿ ಪ್ರಕರಣದಲ್ಲಿ ಸಿಲುಕಿಸಲಾ[…] ಎಂದು ಆರ್‌ಎಸ್‌ಎಸ್ ನಾಯಕ ಭಜರಂಗ ಲಾಲ್ ಗ[…] ಕಂಡಕಂಡಲ್ಲಿ ಬೊಗಳುತ್ತಿದ್ದಾನೆ; ಪೊಲೀಸ್ ತನಿಖೆಯ[…] ಕೆಲವು ವ್ಯಕ್ತಿಗಳು ಮಾತ್ರವೇ ಆರೋಪಿಗಳೆಂ[…] ಹೇಳಲಾಗಿದೆಯೇ ಹೊರತು ಇಡೀ ಸಂಘಟನೆಯಲ್ಲ ಎಂ[…] ಸಂಘಟನೆಯನ್ನು ರಕ್ಷಿಸಲು ಹೆಣಗಾಡುತ್ತಿದ್ದಾನೆ.



ಮಲೆಗಾಂವ್ ಸ್ಫೋಟದಲ್ಲಿ ಮಡಿದವ[…]

ಯಡ್ಡಿ-ಚೆಡ್ಡಿಗಳ ಒತ್ತಡಕ್ಕೆ ಮಣಿದು ಆದೇಶ ವಾಪಾಸ್

ಕರ್ನಾಟಕದಾದ್ಯಂತ ಚರ್ಚುಗಳ ಮೇಲೆ, ಕ್ರಿಶ್ಚಿಯನ್ ಸಮುದಾಯಗಳ ಮೇಲೆ ವ್ಯವಸ್ಥಿತವಾಗಿ ಭಜರಂಗಿಗಳು ದಾಳಿ ನಡೆಸಿದ್ದು, ದಾಳಿಯನ್ನು ತಾನೇ ಸಂಘಟಿಸಿದ್ದೆಂದು ಭಜರಂಗದಳದ ಮಂಗ ಮಹೇಂದ್ರ ಕುಮಾರ್ ಮಾಧ್ಯಮಗಳೆದುರು ತನ್ನ ಬೆನ್ನು ತಾನೇ ತಟ್ಟಿಕೊಂಡು ಪೋಜು ಕೊಟ್ಟದ್ದು, ಈ ಹಿನ್ನೆಲೆಯಲ್ಲಿ ಭಜರಂಗದಳದಂತಹ ಹಿಂದೂತ್ವ ಭಯೋತ್ಪಾದಕ ಸಂಘಟನೆಯನ್ನು ನಿಷೇಧಿಸಬೇಕೆಂಬ ಒತ್ತಡ ಸಮಾಜದ ಎಲ್ಲಾ ಕಡೆಯಿಂದ ಕೇಳಿಬಂದಿದ್ದು, ಕೇಂದ್ರ ಸರ್ಕಾರವೂ ಆ ನಿಟ್ಟಿನಲ್ಲಿ ಯೋಚಿಸಲಾರಂಭಿಸಿದ್ದು, ತಕ್ಷಣವೇ ಭಜರಂಗಿಗಳು ಬೆದರಿ ಮಹೇಂದ್ರ ಕುಮಾರ್‌ನನ್ನು ಸಂಘಟನೆಯಿಂದ ಕಿತ್ತೆಸೆದು ಕೈತೊಳೆದುಕೊಂಡಿದ್ದು, ಚರ್ಚುಗಳ ಮೇಲೆ ದಾಳಿ ಮಾಡಿದ್ದಕ್ಕಾಗಿ ಮಹೇಂದ್ರ ಕುಮಾರ್‌ನನ್ನು ಬಂಧಿಸಿ ಜೈಲಿಗೆ ತಳ್ಳಿದ್ದು, ಆತ ಅದ್ಹೇಗೋ ಹೈಕೋರ್ಟಿನಿಂದ ಜಾಮೀನು ಪಡೆದು ಇದೀಗ ಹೊರಬಂದಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ.

ಆದರೆ, ಎಲ್ಲರಿಗೂ ಗೊತ್ತಿರದ ವಿಚಾರವೊಂದು ಒಳಗೊಳಗೇ ನಡೆದು ಹೋಗಿದೆ. ಚಿಕ್ಕಮಗಳೂರು ಪೊಲೀಸ್ ಅಧೀಕ್ಷಕರು ಭಜರಂಗದಳದ ರಾಜ್ಯ ಸಂಚಾಲಕ ಮಹೇಂದ್ರ ಕುಮಾರ್ ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತಹ ಚಟುವಟಿಕೆಯಲ್ಲಿ ತೊಡಗಿದ್ದಾರೆಂದೂ, ಅವರನ್ನು ಬಂಧಿಸದಿದ್ದರೆ ಸಾರ್ವಜನಿಕ ನೆಮ್ಮದಿಗೆ ಭಂಗವುಂಟಾಗುತ್ತದೆಂದೂ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಯವರಿಗೆ 15.10.2008ರಂದು ವರದಿ ಸಲ್ಲಿಸಿದ್ದರು (ವರದಿ ಸಂಖ್ಯೆ: ಡಿಸಿಆರ್‌ಬಿ/ಜಿಎನ್ ಆಕ್ಟ್/02/2008).

ಇದಾದ ಐದೇ ದಿನದಲ್ಲಿ ಈ ವರದಿಯನ್ನಾಧರಿಸಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಯಾಗಿರುವ ಆರ್.ನಾರಾಯಣಸ್ವಾಮಿ ಮಹೇಂದ್ರ ಕುಮಾರ್‌ನನ್ನು ಗೂಂಡಾ ಕಾಯ್ದೆಯಾದ ಕರ್ನಾಟಕ ಪ್ರಿವೆನ್ಷನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್ ಲೆಗ್ಗರ್ಸ್, ಡ್ರಗ್ ಅಫೆಂಡರ್, ಗ್ಯಾಂಬ್ಲರ್ಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಅಂಡ್ ಸ್ಲಂ ಗ್ರ್ಯಾಬ್ಲರ್ಸ್ ಆಕ್ಟ್ 1985 ಅಡಿಯಲ್ಲಿ ಬಂಧಿಸುವಂತೆ 20.10. 2008ರಲ್ಲಿ ಆದೇಶ ಹೊರಡಿಸಿದ್ದರು. ಈ ಆದೇಶದಂತೆ ಮಹೇಂದ್ರ ಕುಮಾರ್ ಬಂಧನವಾಗಿದ್ದರೆ ಆತನಿಗೆ ಆರು ತಿಂಗಳು ಜಾಮೀನು ಸಿಗದೇ ಜೈಲಿನಲ್ಲಿ ಕೊಳೆಯಬೇಕಿತ್ತು, ಆ ಮೂಲಕವಾದರೂ ಆತ ಮಾಡಿದ ಪಾಪಕ್ಕೆ ಒಂದಿಷ್ಟು ಶಿಕ್ಷೆಯಾದರೂ ಆಗುತ್ತಿತ[…]



ಆದರೆ, ಯಡ್ಡಿ ಮತ್ತು ಚೆಡ್ಡಿಗಳೆಲ್ಲಾ ಸೇ[…] ಜಿಲ್ಲಾಧಿಕಾರಿಯ ಮೇಲೆ ಒತ್ತಡ ತಂದು ಈ ಆದೇಶವನ್ನ[…] ವಾಪಾಸ್ಸು ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಒಂದೆ[…] ಚರ್ಚುಗಳ ಮೇಲೆ ದಾಳಿ ಮಾಡಿದವರನ್ನು ಬಂಧಿಸುತ್ತೇ[…] ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಕಂಡಕಂಡ[…] ಬಡಬಡಿಸುತ್ತಾ ಇನ್ನೊಂದೆಡೆ ಒಳಗೊಳಗ[…] ದಾಳಿಕೋರರನ್ನು ರಕ್ಷಿಸುತ್ತಿರುವ ಯಡ್ಡಿ[…] ತಂತ್ರ ಮತ್ತೆ ಬೆತ್ತಲಾಗಿ ನಿಂತಿದೆ.

ಹೀಗಾಗಿ, ಮಹೇಂದ್ರ ಕುಮಾ[…] ಎಂಬ ಕಪಿ ಸದ್ಯಕ್ಕೆ ಚಿಕ್ಕಮಗಳೂ[…] ಜೈಲಿನಿಂದ ತನ್ನ ಮನೆಸೇರಿಕೊಂ[…] ಮುಂದೆ ಯಾವ ಮಂಗಾಟ ಶು[…] ಹಚ್ಚಿಕೊಳ್ಳಬೇಕೆಂದು ಸ್ಕೆಚ್ ಹಾಕು[…] ಕುಳಿತಿದೆ.



...ವು ಸಿಬಿಐಗೆ ಬಂದಾಕ್ಷಣ ಇದೀ ಕೇಸನ್ನೇ ತಿರುಗು
...ಮುರು ಮಾಡಲಾಯಿತು.

...ೀಗೆ, ಸಂಘಪರಿವಾರವೇ ಖುದ್ದಾಗಿ ಭಯೋತ್ಪಾದಕ
...ಳಲ್ಲಿ ತೊಡಗಿರುವುದಕ್ಕೆ ದೊಡ್ಡ ಚರಿತ್ರೆಯೇ ಇದೆ.
...ಬುಗಳನ್ನು ಕೇವಲ ಇಸ್ಲಾಮಿಕ್ ಭಯೋತ್ಪಾದಕರು
...ವೇ ಸ್ಫೋಟಿಸುತ್ತಾರೆಂಬ ಮನಸ್ಥಿತಿಯಿಂದ ಇನ್ನಾದರೂ
...ಧ್ಯಮಗಳು, ಪೊಲೀಸರು ಹೊರಬರಬೇಕಿದೆ.
...ತ್ರದೇ ಸ್ಫೋಟ ಸಂಭವಿಸಿದಾಗಲೂ ನಿಷ್ಪಕ್ಷಪಾತವಾಗಿ
... ನಡೆಸಿದರೆ ಅವುಗಳಲ್ಲಿ ಹಿಂದೂ ಭಯೋತ್ಪಾದಕರ
... ಎಷ್ಟಿದೆ, ಮುಸ್ಲಿಮ್ ಭಯೋತ್ಪಾದಕರ ಪಾತ್ರ
... ಎಂಬ ಅಸಲೀಯತ್ತು ಹೊರಬರುತ್ತದೆ. ಬೆಂಗಳೂರು
...ಟ್ ಸ್ಫೋಟದ ತನಿಖೆ ನಡೆಸುತ್ತಿರುವ ಬೆಂಗಳೂರು
...ೀಸರೂ ಕೂಡ ಈ ನಿಟ್ಟಿನಲ್ಲಿ ತನಿಖೆ ಮಾಡಬೇಕಿದೆ.
...ಆದರೆ, ಮಾಧ್ಯಮಗಳಲ್ಲಿ, ಪೊಲೀಸ್ ವ್ಯವಸ್ಥೆಯಲ್ಲಿ,
...ಅರಶಾಹಿ ಸ್ತರಗಳಲ್ಲಿ, ರಾಜಕಾರಣದಲ್ಲಿ ಎಲ್ಲೆಲ್ಲೂ
...ಪರಿವಾರದ ಚೆಡ್ಡಿಗಳು ನುಸುಳಿಕೊಂಡು
...ರುವುದರಿಂದ ಅಂತಹ ನಿಷ್ಪಕ್ಷಪಾತಿ ತನಿಖೆಯನ್ನು
...ಸುವುದು ತುಸು ಕಷ್ಟವೆ. ■

...ಪ ಸೃಷ್ಟಿಸುವಲ್ಲಿ ನಿಸ್ಸೀಮರು!


...ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರಂಥ ಧಾರ್ಮಿಕ
...ಸಂಖ್ಯಾತರ ಮೇಲೆ ದಾಳಿ ಮಾಡುವುದಕ್ಕೆ,
...ಪರಿವಾರಿಗಳು ಯಾವಾಗಲೂ ಒಂದು ನೆಪಕ್ಕಾಗಿ
...ಯುತ್ತಿರುತ್ತಾರೆ. ಒಂದು ವೇಳೆ ನೆಪ ಸಿಗದಿದ್ದರೆ ಅದನ್ನು
...ವಾಗಿ ಸೃಷ್ಟಿಸುತ್ತಾರೆ. ಇಲ್ಲಿಯವರೆಗೆ ಮುಸ್ಲಿಮರ
...ಲೆ, ಕ್ರಿಶ್ಚಿಯನ್ನರ ಮೇಲೆ ನಡೆದಿರುವ ಎಲ್ಲಾ
...ಗಳನ್ನು ಸ್ವಲ್ಪ ಆಳವಾಗಿ ನೋಡಿದರೆ ಅರ್ಥವಾಗುವ
...ಬನ್ನ ವಿಚಾರವಿದು.

...ಸಂಘಪರಿವಾರಿಗಳು 2002ರಲ್ಲಿ ಗುಜರಾತ್
...ಂಧ ನಡೆಸುವುದಕ್ಕೆ ಕನಿಷ್ಠವೆಂದರೂ ಆರು ತಿಂಗಳ
... ಮಾಡಿಕೊಂಡಿದ್ದರು. ತಮಗೆ ಬೇಕಾದ ಪೊಲೀಸ್
...ಕಾರಿಗಳನ್ನು ಬೇಕಾದ ಜಾಗಕ್ಕೆ ವರ್ಗಾವಣೆ
...ಕೊಂಡಿದ್ದು, ಖಡ್ಗ-ತ್ರಿಶೂಲಗಳಂತ ಮಾರಕಾಸ್ತ್ರಗಳನ್ನು
...ಜಾಹಿಕವಾಗಿ ಹಂಚಿದ್ದು, ಮನೆಗಳನ್ನು ಸ್ಫೋಟಿಸುವುದಕ್ಕೆ
...ಡುಗಟ್ಟಲೇ ಎಲ್‌ಪಿಜಿ ಸಿಲೆಂಡರುಗಳನ್ನು
...ರಿಸಿಟ್ಟುಕೊಂಡಿದ್ದು, ನಗರಗಳಲ್ಲಿ ದಂಗೆಯೆಬ್ಬಿಸುವುದಕ್ಕೆ
... ಮತ್ತು ಆದಿವಾಸಿ ಪ್ರದೇಶಗಳಿಂದ ಸಂಘಪರಿವಾರದ
...ಕರನ್ನು ಸಾಗಿಸುವುದಕ್ಕೆ ನೂರಾರು ಸಂಖ್ಯೆಯಲ್ಲಿ
...ಗಳನ್ನು ಬುಕ್ ಮಾಡಿದ್ದು, ಮುಸ್ಲಿಮರು ವಾಸಿಸುವ
...ಶಗಳನ್ನು ಸರ್ವೇ ಮಾಡಿದ್ದು - ಹೀಗೆ ಸಾಗುತ್ತದೆ
... ತಯಾರಿ. ಎಲ್ಲಾ ತಯಾರಿ ಮುಗಿದ ಮೇಲೆ
... ನೆಪಕ್ಕಾಗಿ ಕಾಯುವುದು ಮೂರ್ಖತನ ಹಾಗೂ
...ನ್ನು ಸೃಷ್ಟಿಸುವುದು ಜಾಣತನ ಎಂದುಕೊಂಡು
...ಧ್ರಾ ರೈಲಿಗೆ ತಾವೇ ಬೆಂಕಿಯಿಟ್ಟು ಅದನ್ನು ಮುಸ್ಲಿಮರ
... ಕಟ್ಟಿದರು. ಅದಕ್ಕೆ ಪ್ರತೀಕಾರದ ನೆಪವೊಡ್ಡಿ ಇಡೀ
...ರಾತಿನಾದ್ಯಂತ ದಂಗೆಯೆಬ್ಬಿಸಿ ಮಹಿಳೆ, ಮಕ್ಕಳು,
...ನ್ನದೇ ಮೂರು ಸಾವಿರಕ್ಕೂ ಹೆಚ್ಚು ಮುಸ್ಲಿಮರನ್ನು
...ದು ಹಾಕಿದರು.

...ತ್ತೀಚೆಗೆ ಒರಿಸ್ಸಾದ ಕಂಧಮಾಲ್‌ನಲ್ಲಿ ಹಿಂದೂ
...ಯೊಬ್ಬನನ್ನು ಕೊಂದರು ಎಂದು ಆರೋಪಿಸಿ
...ಯನ್ನರ ಮೇಲೆ ಆಲ್ ಔಟ್ ದಾಳಿ ಮಾಡಿದರು.
...ಂದುತ್ವ ಭಯೋತ್ಪಾದಕರ ಈ ಅಮಾನವೀಯ ದಾಳಿಗೆ
...ರು ಅಮಾಯಕರು ಬಲಿಯಾದರು. ಕೊನೆಗೆ, ತಾವೇ
...ಂದನ್ನು ಕೊಂದಿದ್ದೇವೆ ಎಂದು ಸ್ವತಃ
...ಮಾವಾದಿಗಳೇ ಬಹಿರಂಗವಾಗಿ ಹೇಳಿದಾಗ ಅದನ್ನು
... ನಂಬುವುದಿಲ್ಲ ಎಂದು ಆರ್‌ಎಸ್‌ಎಸ್‌ನ
...ಮುಖಗಳು ಮುಖ ತಿರುಗಿಸಿಕೊಂಡು ತಮ್ಮ
...ಗಳನ್ನು ಸಮರ್ಥಿಸಿಕೊಂಡರು.

...ಮುಸ್ಲಿಮರಿಗೆ ಪವಿತ್ರ ದಿನವಾದ ಶುಕ್ರವಾರದಂದೇ
...ಊರಿನ ಮಸೀದಿಗಳಲ್ಲಿ ಹಂದಿ ತಲೆಯನ್ನು ಇರಿಸಿ
... ಸೃಷ್ಟಿಸಲು ಪ್ರಯತ್ನಿಸಿದ್ದರು. ಅದನ್ನು ಮಾಡಿದ್ದು
... ಕಿಡಿಗೇಡಿಗಳಲ್ಲ, ಪ್ರಮೋದ್ ಮುತಾಲಿಕ್
... ಹಿಂದುತ್ವ ಭಯೋತ್ಪಾದಕನ ಶಿಷ್ಯರು ಎಂಬುದು
... ತನಿಖೆಯಲ್ಲೇ ಗೊತ್ತಾಗಿಹೋಯಿತು. ಇತ್ತೀಚೆಗೆ
...ಟಕದಾದ್ಯಂತ ನಡೆದ ಚರ್ಚುಗಳ ಮೇಲಿನ ದಾಳಿಗೂ
... ಬಲವಂತದ ಮತಾಂತರದ ಕಾರಣವನ್ನು
...ದರು. ಹೀಗೆ ಕೆದಕುತ್ತಾ ಹೋದರೆ ರಕ್ತ ಕಾರುವುದಕ್ಕೆ
... ಸೃಷ್ಟಿಸುವಲ್ಲಿ ಸಂಘಪರಿವಾರಿಗಳು ಅದೆಷ್ಟು
...ಸರಾಗಿದ್ದಾರೆ ಎಂಬುದು ಗೊತ್ತಾಗುತ್ತದೆ. ■

ನಟಿ ಪ್ರಿಯಾ ಜೈನ್ ಜೈಲು ಪಾಲಾದ ಕತೆ



ಸ್ವಂತಕ್ಕೆ ಮನೆ, ವೆಚ್ಚಕ್ಕೆ ದುಡ್ಡು, ಪ್ರೀತಿಸುವ ಗಂಡ, ಮುದ್ದಿನ ಮಗು; ಎಲ್ಲವೂ ಇದ್ದೂ ಹೀಗೆ ಜೈಲುಪಾಲಾಗ ಬೇಕಾದ ಯಾವ ದಾರಿದ್ರ್ಯ ತಾನೇ ಆಕೆಗಿತ್ತು?

ಚಿಕ್ಕಪೇಟೆಯ ಮಾರ್ವಾಡಿ ಹೆಣ್ಣುಮಗಳು ಪ್ರಿಯಾ ಜೈನ್ ಅಲಿಯಾಸ್ ಪಿಂಕಿ ಜೈನ್‌ಗೂ, ಪ್ರಿಯಕರನ ಜೊತೆ ಸೇರಿ ಗೆಳೆಯನನ್ನು ಕೊಂದು ಜೈಲುಪಾಲಾದ ನಟಿ ಮೋನಿಕಾಗೂ ಮತ್ತು ಮಾಡೆಲಿಂಗ್ ಮೋಹಕ್ಕೆ ಬಿದ್ದು ಹುಚ್ಚಿಯಾಗಿ ಬೀದಿಗೆ ಬಿದ್ದ ದೆಹಲಿಯ ಮಾಡೆಲ್ ಗೀತಾಂಜಲಿ ಗುಪ್ತಾಳಿಗೂ ಹೆಚ್ಚು ವ್ಯತ್ಯಾಸಗಳಿಲ್ಲ.

ಅದು ಗ್ಲಾಮರ್ ಹುಚ್ಚು. ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿರುವ ಪಿಂಕಿ ಜೈನ್ ಯಾರೋ ರೌಡಿಯೊಬ್ಬನ ಕಪಿಮುಷ್ಟಿಗೆ ಸಿಲುಕಿ ಆತನಿಗೆ ಸಾಲ ಕೊಟ್ಟಾತನ ಜೊತೆ ಕಾಮಕೇಳಿಯ ಫೋಟೋ ತೆಗೆಸಿಕೊಳ್ಳುವ ಮಟ್ಟಕ್ಕೆ ಇಳಿಯುತ್ತಾಳೆಂದರೆ ಆಕೆಯ ಬದುಕು ಇನ್ನೆಷ್ಟು ಎಕ್ಕುಟ್ಟಿರಬೇಡ?

ಬಯಸಿದ್ದು ಗ್ಲಾಮರ್ ಬಂದದ್ದು ಪೊಲೀಸರು!

ಅಷ್ಟಕ್ಕೂ ಪಿಂಕಿ ಜೈನ್‌ಗೆ ಹತ್ತು ವರ್ಷದ ಮಗನಿದ್ದಾನೆ! ಆಕೆಯದು ಕೂಡ ಅನುಕೂಲಸ್ಥರ ಮನೆತನವೆ. ಹೇಳಿ ಕೇಳಿ ಅದು ಮುಂಬಯಿ. ಸಂಪ್ರದಾಯಸ್ಥ ಮಾರ್ವಾಡಿ ತಂದೆತಾಯಿಗಳ ಒಬ್ಬಳೇ ಮಗಳಾದ ಪ್ರಿಯಾ ಜೈನ್ ಮುಂಬಯಿಯ ಪ್ರತಿಷ್ಠಿತ ಕಾಲೇಜಿನಲ್ಲೇ ಓದಿದಾಕೆ. ಅದ್ಯಾವ ಗಳಿಗೆಯಲ್ಲಿ ಫ್ಯಾಷನ್ ಹುಚ್ಚು ಹಿಡಿಯಿತೋ? ಕಾಲೇಜಿನ ಫ್ಯಾಷನ್ ಷೋಗಳಲ್ಲಿ ಕ್ಯಾಟ್‌ವಾಕ್ ಮಾಡಲಾರಂಭಿಸಿದ ಪ್ರಿಯಾ ಜೈನ್ ಮುಂಬಯಿಯ ಅಂತರಕಾಲೇಜು ಫ್ಯಾಷನ್ ಷೋಗಳಲ್ಲೂ ಹೆಸರು ಗಳಿಸಿದಾಕೆ. 1997ರಲ್ಲಿ ಅಂದರೆ ತೀರಾ ಸಣ್ಣ ವಯಸ್ಸಿಗೇ ಆಕೆಯನ್ನು ಬೆಂಗಳೂರಿನ ಚಿಕ್ಕಪೇಟೆಯ ಮಾರ್ವಾಡಿ ಯುವಕ ಪ್ರವೀಣ್ ಜೈನ್‌ಗೆ ಕೊಟ್ಟು ಕೈತೊಳೆದುಕೊಂಡ ಆಕೆಯ ತಂದೆ ತಾಯಿ; ಆಕೆ ಓರ್ವ ಮಾಡೆಲ್ ಎಂಬುದನ್ನಾಗಲಿ, ಆಕೆಗೆ ಸೂರತ್‌ನಲ್ಲಿ ಓರ್ವ 'ಮುಸ್ಲಿಂ' ಬಾಯ್‌ಫ್ರೆಂಡ್ ಇದ್ದಾನೆಂಬುದಾಗಲಿ ಹೇಗೆ ತಾನೇ ಹೇಳಲು ಸಾಧ್ಯ?

ಹೀಗೆ ಮುಂಬಯಿಯ ಗ್ಲಾಮರ್ ಜಗತ್ತಿನಿಂದ ಬೆಂಗಳೂರಿನ ಚಿಕ್ಕಪೇಟೆಯ ಜಿ.ಕೆ. ಟೆಂಪಲ್ ಸ್ಟ್ರೀಟ್ ಅಂದರೆ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದ ಬೀದಿಯ ಸಂಪ್ರದಾಯಸ್ಥ ಮಾರ್ವಾಡಿ ಪ್ರವೀಣ್ ಜೈನ್‌ನ ಮನೆ ಸೇರಿದ ಪ್ರಿಯಾ ಜೈನ್ ಒಂದೇ ವರ್ಷಕ್ಕೆ ತಾಯಿಯಾದಳು. ಯಾವುದಕ್ಕೂ ಕೊರತೆಯಿರಲಿಲ್ಲ. ಗಂಡ ಪ್ರವೀಣ್‌ಜೈನ್ ಜಯನಗರದಲ್ಲಿ ಐಷಾರಾಮಿಯ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದ. ಆದರೆ ಪ್ರಿಯಾ ಮುಂಬಯಿಯ ಫ್ಯಾಷನ್ ಲೋಕ ಕಂಡವಳು. ಬರುಬರುತ್ತ ಜೀನ್ಸ್-ಟೀ ಶರ್ಟ್ ತೊಟ್ಟು ಶಾಪಿಂಗ್‌ಗೆಂದು ಹೋಗಲಾರಂಭಿಸಿದಳು.

ಜೀನ್ಸ್-ಟೀಶರ್ಟ್ ತೊಟ್ಟು ಬ್ಯೂಟಿ ಪಾರ್ಲರ್‌ಗಳಲ್ಲಿ ಕಾಲ ಕಳೆಯುತ್ತಿದ್ದ ಪ್ರಿಯಾಳ ಬಗ್ಗೆ ಮೊದಮೊದಲು ನಂಬಿಕೆಯಿಂದಲೇ ಇದ್ದ ಗಂಡನಿಗೆ ಆಕೆಯ ಮೊಬೈಲಿಗೆ ಬರುತ್ತಿದ್ದ ಹುಡುಗರ ಕರೆಗಳು ಮತ್ತು ಅವರೊಂದಿಗೆ ಆಕೆ ಮಾತಾಡುತ್ತಿದ್ದ ರೀತಿ ಅಸಹನೆ ಹುಟ್ಟಿಸುತ್ತಿತ್ತು. ತೀರಾ ಕೆದಕಿ ಕೇಳಹೊರಟರೆ ಪ್ರಿಯಾ ಜಗಳಕ್ಕೆ ಬೀಳುತ್ತಿದ್ದಳು. 'ಹೌದು, ನಾನು ಸಿನಿಮಾದಲ್ಲಿ ಆಕ್ಟಿಂಗ್ ಮಾಡ್ತಾ ಇದ್ದೀನಿ' ಎಂದೇ ದಬಾಯಿಸುತ್ತಿದ್ದಳು. ಚಿತ್ರವಿಚಿತ್ರ ಬಟ್ಟೆ ಧರಿಸಿ ವಿವಿಧ ಭಂಗಿಯ ಆಲ್ಬಂ ಕೂಡ ಮಾಡಿಸಿದ್ದಳು.

ಕಾಲ ಮಿಂಚಿಹೋಗಿತ್ತು, ಪದೇಪದೇ ಮುಂಬಯಿಗೆ ಹೋಗಿ ಬಂದು ಮಾಡುತ್ತಿದ್ದ ಪ್ರಿಯಾಳಿಗೆ ಜೈಲಲ್ಲೇ 'ಜಾಟ್' ಯುವಕನೊಬ್ಬನ ಪರಿಚಯವಾಗಿತ್ತು, ಗಂಡ ಇಲ್ಲದ ಹೊತ್ತಲ್ಲಿ ಮನೆಗೆ ಬಂದು ಹೋಗಿ ಮಾಡುತ್ತಿದ್ದ ಆತನನ್ನು ಹೊಂಚು ಹಾಕಿ ಹಿಡಿದ ಗಂಡ ಪ್ರವೀಣ್ ಜೈನ್‌ನ ವಿರುದ್ಧವೇ ತಿರುಗಿಬಿದ್ದ ಪ್ರಿಯಾ ಮುಖಕ್ಕೆ ಹೊಡೆದಂತೆ 'ಹೌದು ನಾನು ಆತನನ್ನೇ ಮದುವೆಯಾಗ್ತೀನಿ' ಎಂದುಬಿಟ್ಟಳು. ಇದು ಚಿಕ್ಕಪೇಟೆ ಪೊಲೀಸ್ ಠಾಣೆ ತಲುಪಿ ಇನ್ಸ್‌ಪೆಕ್ಟರ್ ರೇವಣ್ಣ ಮತ್ತು ಸಬ್‌ಇನ್ಸ್‌ಪೆಕ್ಟರ್ ಮಹಾಜನ್ ಸೇರಿ ಗಂಡಹೆಂಡಿರ ಮಧ್ಯೆ ಎಷ್ಟೇ ತೇಪೆಹಾಕಲು ಯತ್ನಿಸಿದರೂ ಪ್ರಿಯಾ ಸರಿದಾರಿಗೆ ಬರಲಿಲ್ಲ.

ತಾನೀಗ ಫಿಲ್ಮ್ ಆಕ್ಟರ್ ಗೊತ್ತಾ? ಶೂಟಿಂಗಿಗೆ ಲೇಟ್ ಆಗ್ತಿದೆ. ಮೈ ಗಣೇಶ್‌ಕಾ ಫಿಲ್ಮ್‌ಮೇ ಆಕ್ಟ್ ಕರ್‌ರಹಾ ಹೂಂ ಇತ್ಯಾದಿ ಅಸಂಬದ್ಧವಾಗಿ ಪೊಲೀಸರೆದುರು ಸಿನಿಮಾ ಹೀರೋಯಿನ್‌ನಂತೆ ಪೋಜು ಕೊಡುತ್ತಿದ್ದಳು. ಪೊಲೀಸ್ ಠಾಣೆಗೂ ಜೀನ್ಸು ಟೀಶರ್ಟು, ಕೂಲಿಂಗ್ ಗ್ಲಾಸ್‌ನಲ್ಲೇ ಬರುತ್ತಿದ್ದಳು. ಆಕೆಗೆ ಗಾಂಧಿನಗರದ ಲಿಂಕ್ ಹೇಗೆ ಸಿಕ್ಕಿತ್ತೋ? ಪ್ರತಿ ಬೆಳಿಗ್ಗೆ ಶೂಟಿಂಗಿಗೆಂದೋ, ಬ್ಯೂಟಿ ಪಾರ್ಲರಿಗೆ ಅಂತಲೋ ಹೊರಟವಳು ನಡುರಾತ್ರಿ ಹೊತ್ತಿಗೇ ವಾಪಸ್ಸಾಗುತ್ತಿದ್ದಳು.



ಎಸ್.ಕೆ.ಉಮೇಶ್

ಹಕೀಕತ್ತೇನೆಂದರೆ, ಪ್ರಿಯಾ ಜೈನ್ ಬೆಂಗಳೂರಿನ ಹೈಟೆಕ್ ಸೆಕ್ಸ್ ರ್‍ಯಾಕೆಟ್ಟೊಂದರಲ್ಲಿ ಸಿಲುಕಿಬಿಟ್ಟಿದ್ದಳು. ಗಾಂಧಿನಗರದಲ್ಲಿ ಸಿನಿಮಾ ಹೀರೋಯಿನ್ನುಗಳ ಸರಬರಾಜುದಾರನೆಂದು ಕುಖ್ಯಾತಿಗಳಿಸಿದ್ದ 'ಅಪ್ಪು' ಎಂಬಾತ ಆಕೆಯ ಥರೇವಾರಿ ಫೋಟೋ ಹೊತ್ತು ಯಾರ್‍ಯಾರೋ ಡೈರೆಕ್ಟರ್‌ಗಳು, ಪ್ರೊಡ್ಯೂಸರ್‌ಗಳಿಗೆ ಮಸ್ಕಾ ಹೊಡೆಯುತ್ತಿದ್ದ. ಮೂಲತಃ ಚೆನ್ನೈನ ಮಹೇಂದ್ರನ್ ಎಂಬಾತ ನಿರ್ದೇಶಿಸಿದ 'ಬ್ಲಾಕ್' ಎಂಬ ಚಿತ್ರದಲ್ಲಿ ಪ್ರಿಯಾಗೆ ಸಿಕ್ಕಿದ್ದು ಹೀರೋಯಿನ್ ಗೆಳತಿಯ ಪಾತ್ರ. ಆನಂತರ ಶಿವಪ್ರಭು ನಿರ್ದೇಶಿಸಿದ 'ಓ ಪ್ರಿಯತಮೆ' ಚಿತ್ರದಲ್ಲೂ ಪುಡಿ ಪಾತ್ರ ಸಿಕ್ಕಿತ್ತು. ಇಂಥವಳನ್ನು ಅಂಥಾ(!) ಡೈರೆಕ್ಟರ್ ಓಂಪ್ರಕಾಶ್ ರಾವ್‌ಗೆ ಪರಿಚಯಿಸಿದ ಪುಣ್ಯಾತ್ಮನಾದರೂ ಯಾರೆಂದು ತಲೆ ಕೆಡಿಸಿಕೊಂಡರೆ ಇಲ್ಲೂ ಅಪ್ಪು ಹೆಸರೇ ಕೇಳಿಬರುತ್ತದೆ.

'ಓಂಪ್ರಕಾಶ್‌ರಾವ್‌ನ ಕಿರಣ್ ಬೇಡಿ ಚಿತ್ರದಲ್ಲೂ ಪ್ರಿಯಾ ಪಾತ್ರ ಗಿಟ್ಟಿಸಿದಳಾದರೂ ಅದೂ ಕೂಡ ಸಣ್ಣ ಪಾತ್ರವೇ ಹೊರತು ಯಾರೂ ಆಕೆಯನ್ನು ಓರ್ವ ಹೀರೋಯಿನ್ನೆಂದು ಪರಿಗಣಿಸಲೇ ಇಲ್ಲ!



ಮುನಿರಾಜ, ಪವನ್, ಪ್ರಿಯಾ ಜೈನ್, ರವೀಶ, ಅಪ್ಪಾಜಿ

ಆದರೆ ನಟಿಸಿದ ಸಣ್ಣಪುಟ್ಟ ಪಾತ್ರಗಳ ಸ್ಟಿಲ್ ಫೋಟೋಗಳನ್ನೇ ತೋರಿಸಿ ಆಕೆಯನ್ನು ಹೈಟೆಕ್ ಸೆಕ್ಸ್ ದಂಧೆಗೆ ಬಳಸಿಕೊಂಡವನು ಜೆ.ಪಿ. ನಗರದ ಪುಡಿ ರೌಡಿ ಡಿ.ಎಲ್. ಪವನ್. ಈತ ಬನಶಂಕರಿಯ ರೌಡಿ ಅರಸಯ್ಯನ ಶಿಷ್ಯ. ಮೊದಮೊದಲು ಕೆಲ ಪುಡಿ ರೌಡಿಗಳನ್ನು ಕಟ್ಟಿಕೊಂಡು ಸಾಲಕಟ್ಟದವರ ಕಾರುಗಳನ್ನು ಸೀಝ್ ಮಾಡುತ್ತಿದ್ದ ಪವನ್‌ಗೆ ಪುಟ್ಟೇನಹಳ್ಳಿಯ ಗಿರಿ ಎಂಬ ಮತ್ತೊಬ್ಬ ರೌಡಿಯ ಲಿಂಕೂ ಇದೆ.

ಈ ಪವನ್ ಇಲ್ಲಿಗೆ ಎಂಟು ತಿಂಗಳ ಹಿಂದೆ ಚಿಕ್ಕಪೇಟೆಯ ಫೈನಾನ್ಸಿಯರ್ ಸತೀಶ್ ಎಂಬಾತನಿಂದ ಏಳು ಲಕ್ಷ ರೂಪಾಯಿ ಸಾಲ ಪಡೆದಿದ್ದ. ಒಂದೇ ತಿಂಗಳಲ್ಲಿ ಅದನ್ನು ತೀರಿಸುತ್ತೇನೆ ಎಂದೂ ಚೆಕ್ ಬರೆದುಕೊಟ್ಟ. ಆದರೆ ಏಳು ತಿಂಗಳಾದರೂ ಪವನ್ ಸತೀಶನತ್ತ ತಲೆ ಹಾಕಲಿಲ್ಲ, ಹಾಗಂತ ಸತೀಶ್ ಸುಮ್ಮನಿರಲಿಲ್ಲ. ಪದೇಪದೇ ಕೊಟ್ಟ ಸಾಲಕ್ಕೆ ದಬಾಯಿಸುತ್ತಲೇ ಇದ್ದ. ಅದಕ್ಕೆ ಪವನ್ ಸರಿಯಾದ ಷಡ್ಯಂತ್ರವನ್ನೇ ಹೆಣೆದ.

ಅದು ಸೆಪ್ಟೆಂಬರ್ 14ನೇ ತಾರೀಖು. ಬಾರಪ್ಪಾ ನಿನ್ನ ದುಡ್ಡು ಕೊಟ್ಟುಬಿಡ್ತೀನಿ ಎಂದು ಪವನ್ ಸತೀಶನನ್ನು ಜಯನಗರಕ್ಕೆ ಬರ ಹೇಳಿದ್ದಾನೆ. ಜಯನಗರದಿಂದ ಪುಟ್ಟೇನಹಳ್ಳಿ ಸರ್ಕಲ್‌ಗೆ ಬರ ಹೇಳಿ ಅಲ್ಲಿಂದ ತನ್ನ ಶಿಷ್ಯನೊಬ್ಬನ ಮೂಲಕ ಪುಟ್ಟೇನಹಳ್ಳಿಯ ಬಿ.ಜಿ. ರೆಸಿಡೆನ್ಸಿ ಎಂಬ ಅಪಾರ್ಟ್‌ಮೆಂಟೊಂದಕ್ಕೆ ಕರೆಸಿಕೊಂಡ. ಅದು ಒಂದಷ್ಟು ಮಂದಿ ಬ್ಯಾಚುಲರ್ ಹುಡುಗರು ಸೇರಿ ಬಾಡಿಗೆಗೆ ಹಿಡಿದಿದ್ದ ಫ್ಲಾಟು. ಸತೀಶ್ ಅಲ್ಲಿಗೆ ಬರುತ್ತಿದ್ದಂತೆಯೇ ಪವನ್ ಮತ್ತು ಆತನ ರೌಡಿ ಬಂಟರಾದ ಅಪ್ಪಾಜಿ, ಮುನಿರಾಜ ಉರ್ಫ್ ಜಾನಿ, ರವೀಶ, ಪುಟ್ಟೇನಹಳ್ಳಿಯ ಗಿರಿ ಮುಂತಾದವರೆಲ್ಲ ಅಟಕಾಯಿಸಿಕೊಂಡಿದ್ದಾರೆ. ಸತೀಶನ ಬಟ್ಟೆ ಬಿಚ್ಚಿ ಬೆತ್ತಲೆ ಮಾಡಿದ್ದೇ ಬೆಡ್‌ರೂಮೊಂದಕ್ಕೆ ನೂಕಿದ್ದಾರೆ.

ಒಳಗಿದ್ದವಳೇ ಉದಯೋನ್ಮುಖಿ ನಟಿ(!) ಪ್ರಿಯಾ ಜೈನ್ ಉರ್ಫ್ ಪಿಂಕಿ ಜೈನ್!

ದಂಗುಬಡಿದ ಸತೀಶನನ್ನು ಹಿಡಿದು ಬಡಿದ ಪವನ್ ಪ್ರಿಯಾ ಜೈನ್ ಜೊತೆಗೆ ಆತನ ಒಂದಷ್ಟು ಬೆತ್ತಲೆ ಫೋಟೋಗಳನ್ನು ತೆಗೆದಿದ್ದಾನೆ. ಬಲವಂತದಿಂದ ವಿಸ್ಕಿ ಕುಡಿಸಿ ಬ್ಲೂಫಿಲ್ಮ್ ಮಾದರಿಯಲ್ಲೇ ವೀಡಿಯೋ ಕೂಡ ಮಾಡಿದ್ದಾನೆ. 'ಸಾಲ ಕೊಟ್ಟ ಏಳು ಲಕ್ಷದ ಕತೆ ಹಾಳಾಗಲಿ, ಮತ್ತೆ 20 ಲಕ್ಷ ಕೊಟ್ಟರೇನೇ ಈಗ ತೆಗೆದ ಫೋಟೋ ಮತ್ತು ವೀಡಿಯೋಗಳನ್ನು ಕೊಡೋದು' ಎಂದು ಧಮಕಿ ಹಾಕಿಯೇ ಸತೀಶನನ್ನು ಬಿಟ್ಟು ಕಳಿಸಿದ್ದಾನೆ ಪವನ್.

ಬಹುಶಃ ಪ್ರಿಯಾಜೈನ್‌ಳ ಗ್ರಹಚಾರ ಕೆಟ್ಟಿತ್ತೋ ಅಥವಾ ಪವನ್‌ನ ಪಾಪದ ಕೊಡವೇ ತುಂಬಬಂದಿತ್ತೋ ಏನೋ. ಒಂದಷ್ಟು ದಿನ ಕೊರಗಿಗೆ ಬಿದ್ದೇ ಹಾಸಿಗೆ ಹಿಡಿದ ಫೈನಾನ್ಸಿಯರ್ ಸತೀಶ್ ಕೊನೆಗೂ ಧೈರ್ಯ ಮಾಡಿ ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್‌ರನ್ನು ಕಂಡು ಕಣ್ಣೀರಿಟ್ಟಿದ್ದಾನೆ. ಅಷ್ಟೇ, ಸೆಪ್ಟೆಂಬರ್ 23ರ ಹೊತ್ತಿಗೆ ನಟಿ ಪ್ರಿಯಾಜೈನ್ ಮತ್ತು ರೌಡಿ ಪವನ್‌ನ ಇಡೀ ತಂಡವನ್ನು ಇನ್ಸ್‌ಪೆಕ್ಟರ್ ಉಮೇಶ್ ಹಿಡಿದು ಲಾಕಪ್ಪಿಗೆ ದಬ್ಬಬಿಟ್ಟಿದ್ದರು.

ಗ್ಲಾಮರ್ ಹುಚ್ಚಿಗೆ ಬಿದ್ದ ಪ್ರಿಯಾಜೈನ್ ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿದ್ದಾಳೆ. ಆಕೆ ಸತೀಶ್ ಜೊತೆ ತೆಗೆಸಿಕೊಂಡ ಸೆಕ್ಸ್ ಫೋಟೋಗಳೇ ಆಕೆಯ ಕ್ರಿಮಿನಲ್ ಚಾಳಿಗೆ ಸಾಕ್ಷ ಹೇಳುತ್ತವೆ. ಆಕೆಯ ಹತ್ತು ವರ್ಷದ ಮಗನ ಗತಿ ದೇವರಿಗೇ ಪ್ರೀತಿ. ಇನ್ನು ಚಿಕ್ಕಪೇಟೆಯ ಸಂಪ್ರದಾಯಸ್ಥ ಮಾರ್ವಾಡಿಗಳಿಗೆಲ್ಲ ಹಣೆಹಣೆ ಚಚ್ಚಿಕೊಳ್ಳುವುದೊಂದೇ ಉಳಿದಿರುವ ಗತಿ.

ಹೇಗಿದ್ದ ಹೆಣ್ಣುಮಗಳು ಹೇಗಾಗಿ ಹೋದಳು?

ರಾ. ಸೋಮನಾಥ್

ಮಧುರ್ ಭಂಡಾರ್‌ಕರ್ ಮತ್ತು ಫ್ಯಾಷನ್


ಹಿಂದಿಯ ಖ್ಯಾತ ನಿರ್ದೇಶಕ ಮಧುರ್ ಭಂಡಾರ್‌ಕರ್ ನಿರ್ಮಿಸುತ್ತಿರುವ 'ಫ್ಯಾಷನ್' ಚಿತ್ರದ ಕಥಾನಾಯಕಿ ಗೀತಾಂಜಲಿ ಗುಪ್ತಾ ಎಂಬ ಮಾಡೆಲ್ ಸದ್ಯ ಹುಚ್ಚಾಸ್ಪತ್ರೆಯಿಂದ ಹೊರಬಂದಿರಬೇಕು. ಆದರೆ ಕಳೆದ ಬದುಕನ್ನು ಯಾರು ತಾನೇ ಸರಿಪಡಿಸಲು ಸಾಧ್ಯ? ಈ ಗೀತಾಂಜಲಿ ಗುಪ್ತಾಳಿಗೂ ಈಗ ಜೈಲು ಪಾಲಾಗಿರುವ ಪಿಂಕಿ ಜೈನ್ ಉರ್ಫ್ ಪ್ರಿಯಾ ಜೈನ್‌ಳ ಬದುಕಿಗೂ ಇರುವ ಕೊಂಡಿಯೇ ಫ್ಯಾಷನ್ ಅಥವಾ ಮಾಡೆಲಿಂಗ್.

ಅದೊಂದು ಭ್ರಮೆ. ಸಾವಿರಕ್ಕೊಬ್ಬಳು ಮಾಡೆಲ್ ಆಗಿ ಖ್ಯಾತಿ, ಹಣ ಗಳಿಸಬಹುದೇ ಹೊರತು ಎಲ್ಲರೂ ಬಿಪಾಷಾ ಬಸು, ಕತ್ರೀನಾ ಕೈಫ್ ಆಗಲಾರರು. ಅದು ವಾಸ್ತವ. ಮಾಡೆಲಿಂಗ್ ಹಾಬಿಯಾಗಿದ್ದರೇನೇ ಚೆಂದ. ಅದೇ ಕಸುಬಾಗಲಾರದು. ಸಿನಿಮಾ ಕೂಡ ಅಷ್ಟೇ. ಸಾವಿರಕ್ಕೊಬ್ಬಳಷ್ಟೇ ಕ್ಲಿಕ್ಕಾಗಬಹುದು. ಒಂದೇ ಸಿನಿಮಾಕ್ಕೆ ಸುಸ್ತು ಹೊಡೆದು ಕಣ್ಮರೆಯಾದ ಅದೆಷ್ಟು ಮಂದಿ ಹುಡುಗಿಯರಿಲ್ಲ? ಇನ್ನು ತಾಯಿಯಾಗಿ, ವಯಸ್ಸು ಮೀರಿದ ಪ್ರಿಯಾ ಜೈನ್ ಎಷ್ಟೇ ಮೇಕಪ್ ಮಾಡಿಕೊಂಡರೂ ಓಂಪ್ರಕಾಶ್‌ರಾವ್ ಥರದ ಡೈರೆಕ್ಟರ್‌ಗಳಿಗಷ್ಟೇ ಆಕೆ ಬೇಕಾಗಬಹುದೇ ಹೊರತು ಪ್ರೇಕ್ಷಕನಿಗಲ್ಲ.

ಬಹುಶಃ ತನ್ನ ಹೈಟೆಕ್ ವೇಶ್ಯಾವಾಟಿಕೆಗೆ ನೆರವಾಗಲೆಂದೇ ಪ್ರಿಯಾ ಸಿನಿಮಾ ಶೋಕಿಗೆ ಬಿದ್ದಳಾ?

ಪೊಲೀಸರ ಪ್ರಕಾರ ಇದೇ ಸತ್ಯ. ಆಕೆಯನ್ನು ಪವನ್ ಬೆಂಗಳೂರಿನ ಅನೇಕ ಬಿಲ್ಡರುಗಳು, ಅಧಿಕಾರಿಗಳು, ಫೈನಾನ್ಸಿಯರ್‌ಗಳ ಲಾಲಸೆಗೆ ಈಡು ಮಾಡಿದ್ದ. ತನ್ನ ಸೆಕ್ಸ್ ದಂಧೆಗೆ ಅನುವಾಗಲೆಂದೇ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರ ಕೊಡಿಸಿದ್ದ. ಶೋಕಿಗೆ ಬಿದ್ದು ಕಂಡಕಂಡ ಹುಡುಗರೊಂದಿಗೆ ಸುತ್ತಾಡುತ್ತಿದ್ದ ಆಕೆಯನ್ನು ಗಂಡ ಪ್ರವೀಣ್ ಹೊರಗಟ್ಟಿದ ಮೇಲೆ ಮುಂಬಯಿಯ ಆಕೆಯ ತಂದೆತಾಯಿಗಳೂ ಬಹಿಷ್ಕರಿಸಿಬಿಟ್ಟರು. ಅದೇ ಜಿ.ಕೆ. ಟೆಂಪಲ್ ಸ್ಟ್ರೀಟ್‌ನಲ್ಲಿ ಸಣ್ಣದೊಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದ ಆಕೆಗೆ ಬದುಕಲು ಬೇರೆ ದಾರಿಯಾದರೂ ಎಲ್ಲಿತ್ತು? ■

ಕಾಂಗ್ರೆಸ್‌ನೊಳಗೊಬ್ಬ ಕೋಮುವಾದಿ ಹಾರನಹಳ್ಳಿ ರಾಮಸ್ವಾಮಿ



ಕರ್ನಾಟಕ ಕಾಂಗ್ರೆಸ್‌ನಲ್ಲಿ ಯಾವ ಮಟ್ಟಿಗೆ ಅರಾಜಕತೆ ಇದೆ ಎಂದರೆ ಹಿರಿಯ ಕಾಂಗ್ರೆಸ್ಸಿಗ ಎಂದು ಹೇಳಿಕೊಳ್ಳುವವನೊಬ್ಬ ಸಾರ್ವಜನಿಕ ಸಭೆಯಲ್ಲೇ 'ಸೋನಿಯಾ ಗಾಂಧಿನೇ ಮತಾಂತರಕ್ಕೆ ಕಾರಣ' ಎಂದು ಚೀರಿಕೊಳ್ಳುತ್ತಾನೆ. ಸನಾತನ ಹಿಂದೂ ಧರ್ಮ ವಿರೋಧಿಸುವವರೆಲ್ಲಾ ದ್ರೋಹಿಗಳು ಅನ್ನುತ್ತಾನೆ. ಬುದ್ಧಿಜೀವಿಗಳು, ಸೆಕ್ಯುಲರ್‌ವಾದಿಗಳೆಲ್ಲಾ ದೇಶದ್ರೋಹಿಗಳೆಂದು ತೀರ್ಪು ಕೊಡುತ್ತಿದ್ದಾನೆ.

ಈತನೇ ಹಾರನಹಳ್ಳಿ ರಾಮಸ್ವಾಮಿ!

ಹೆಸರಿಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ಎಂತಲೂ ಹೇಳಿಕೊಳ್ಳುತ್ತಿರುತ್ತಾರೆ. ಕಾಂಗ್ರೆಸ್ ಸರ್ಕಾರಗಳಲ್ಲಿ ಉನ್ನತ ಶಿಕ್ಷಣ, ಕಾನೂನು ಖಾತೆ ಸಚಿವರಾಗಿದ್ದವರು. ಅಷ್ಟೆಲ್ಲಾ ಯಾಕೆ ಕಾಂಗ್ರೆಸ್ ಪಾರ್ಟಿಯ ಹಿರಿಯ ಮನುಷ್ಯನೀತ.

ಆದರೇನು?

ಹಾರನಹಳ್ಳಿ ರಾಮಸ್ವಾಮಿ ಈಗ ಎಲ್ಲೆ ಬಾಯಿ ತೆರೆಯಲಿ ಅದು ಹಿಂದೂ ಕೋಮುವಾದಿಯೊಬ್ಬನ ಮಾತಿನಂತಿರುತ್ತದೆಯೇ ವಿನಃ ಕಾಂಗ್ರೆಸ್ ಸೆಕ್ಯುಲರ್, ಗಾಂಧಿಯ ನೆರಳೂ ಸಿಗುವುದಿಲ್ಲ. ಮೊನ್ನೆ ಅಕ್ಟೋಬರ್ 23ರಂದು ಬೆಂಗಳೂರಿನಲ್ಲಿ ಸತ್ಯಾವಲೋಕನ ಸಂಸ್ಥೆ ಎಂಬ ಚಿಡ್ಡಿ ಗುಂಪು 'ಮತಾಂತರದ ಗಂಡಾಂತರ' ಎಂಬ ಸೆಮಿನಾರ್ ಏರ್ಪಡಿಸಿತ್ತು. ಅದರಲ್ಲಿ ಭಾಗವಹಿಸಿ ಮಾತನಾಡಿರುವ ಹಾರನಹಳ್ಳಿ "ಇಂದಿರಾ ಗಾಂಧಿ ಇದ್ದಾಗ ಈ ಸಮಸ್ಯೆ ಇರಲಿಲ್ಲ. ಆದರೆ ಸೋನಿಯಾ ಗಾಂಧಿ ಕಾಂಗ್ರೆಸ್ ನಾಯಕಿಯಾಗಿ ಬಂದ ಮೇಲೆ ಕ್ರಿಶ್ಚಿಯನ್ ಮತಾಂತರ ಜಾಸ್ತಿಯಾಗಿದೆ. ಕಾಂಗ್ರೆಸ್ ಪಕ್ಷ ಕೆಟ್ಟುಹೋಗಿದೆ" ಎಂದಿದ್ದಾರೆ.

ಪಕ್ಕಾ ಕೊಳಕು ಮನಸಿನ ಕೋಮುವಾದಿಗಳು ಮಾತ್ರ ಹೇಳಬಹುದಾದ ಮಾತುಗಳನ್ನು ಹಿರಿಯ ಕಾಂಗ್ರೆಸ್ಸಿಗ ಹಾರನಹಳ್ಳಿ ನುಡಿದಿದ್ದಾರೆ. ಆದರೆ ರಾಜ್ಯ ಕಾಂಗ್ರೆಸ್ಸಿನ ಯಾವೊಬ್ಬ ಲೀಡರ್‌ಗಳೂ ಇದನ್ನು ಖಂಡಿಸಿಲ್ಲ; ಒಂದು ನೋಟೀಸ್ ಕೊಟ್ಟಿಲ್ಲ.

ಏನಿದರ ಅರ್ಥ?

ರಾಜ್ಯ ಕಾಂಗ್ರೆಸ್‌ಗಿರುವ ಕೋಮುವಾದಿ ಮುಖ ಇದು.

ಹಾರನಹಳ್ಳಿ ರಾಮಸ್ವಾಮಿಗೂ ಹಿಂದೂ ಕೋಮುವಾದಿಗಳಿಗೂ ದಶಕಗಳ ಕಾಲದ ನೆಂಟಸ್ತಿಕೆ ಇದೆ.

2007ರ ಏಪ್ರಿಲ್‌ನಲ್ಲಿ ರಾಜ್ಯಾದ್ಯಂತ ನಡೆದ ಹಿಂದೂ ಜನಜಾಗೃತಿಯ ಬೆಂಗಳೂರು ಸಮಾವೇಶದಲ್ಲಿ ಹಾರನಹಳ್ಳಿ ಭಾಗವಹಿಸಿದ್ದರು. 2004ರಲ್ಲಿ ಬೆನ್ನಿಹಿನ್ ಎಂಬ ಕ್ರಿಶ್ಚಿಯನ್ ಗುರು ಬೆಂಗಳೂರಿಗೆ ಬಂದಿದ್ದಾಗ ಬಜೆಪಿಗಳೊಂದಿಗೆ ಸೇರಿಕೊಂಡು ಪ್ರತಿಭಟಿಸಿದ್ದರು.

ಆರೆಸ್ಸೆಸ್‌ನವರ ಪ್ರಮುಖ ಅಡ್ಡೆಯಾಗಿರುವ ರಾಷ್ಟ್ರೋತ್ಥಾನ ಪರಿಷತ್ ಹಾರನಹಳ್ಳಿಯವರ ತವರುಮನೆಯಾಗಿ ಹೋಗಿದೆ. ಈಗಲೂ ಬೆಂಗಳೂರಿನ ಬಹುತೇಕ ಕೋಮುವಾದಿ ಸಭೆಗಳಲ್ಲಿ ಕಾಂಗ್ರೆಸ್ಸಿಗನೆಂದು ಹೇಳಿಕೊಂಡೇ ಹಾರನಹಳ್ಳಿ ಭಾಗವಹಿಸುತ್ತಿದ್ದಾರೆ.

ಲೋಕಶಿಕ್ಷಣ ಟ್ರಸ್ಟಿಗೆ ಹಾರನಹಳ್ಳಿ ರಾಮಸ್ವಾಮಿ ಹಾಲಿ ಅಧ್ಯಕ್ಷ. ಈ ಟ್ರಸ್ಟ್‌ನ ಸಂಯುಕ್ತ ಕರ್ನಾಟಕ ದಿನಪತ್ರಿಕೆ ಹಿಂದೂ ಕೋಮುವಾದಿಗಳ ಕರಪತ್ರವಾಗಿ ಹೋಗಿದೆ. ಇದೆಲ್ಲಾ ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯಗಳು.

ಆದರೇನು?

ರಾಜ್ಯ ಕಾಂಗ್ರೆಸ್ಸಿಗರು ಹಾರನಹಳ್ಳಿಯನ್ನು ಕರೆದು ಆಡಳಿತ ಸುಧಾರಣ ಆಯೋಗದ ಅಧ್ಯಕ್ಷಗಿರಿ ನೀಡುತ್ತಾರೆ. ಸದಾ ಒಂದಿಲ್ಲೊಂದು ಅಧ್ಯಕ್ಷ ಸ್ಥಾನದಲ್ಲಿರುವಂತೆ ಮುದ್ದು ಮಾಡಿಕೊಂಡೇ ಬಂದಿದ್ದಾರೆ.

ಈಗ ಹಾರನಹಳ್ಳಿಯವರಿಗೆ ಆರೆಸ್ಸೆಸ್ ಪಿತ್ತ ಜಾಸ್ತಿಯಾಗಿ ಸೋನಿಯಾ ಗಾಂಧಿಯನ್ನೇ ಬಯ್ಯಲು ಶುರು ಮಾಡಿದ್ದಾರೆ. ಅದು ಏನಾದರಾಗಲಿ ಬಿಡಿ. ಆದರೆ ನಮ್ಮ ಸಂವಿಧಾನದ ಮುಖ್ಯ ಆಶಯವಾಗಿರುವ ಸೆಕ್ಯುಲರ್ ಮೌಲ್ಯಗಳನ್ನೇ ಖಂಡಿಸುತ್ತಾ ಪ್ರಗತಿಪರರನ್ನು ಜಾತ್ಯತೀತರನ್ನು ತಮ್ಮ ದಾಳಿಗೆ ಗುರಿಮಾಡಿಕೊಳ್ಳುತ್ತಿದ್ದಾರೆ.

ಬುದ್ಧಿಜೀವಿ ಪ್ರಗತಿಪರರೇನೋ ಹಾರನಹಳ್ಳಿ ಮಾತುಗಳನ್ನು ಒಂದೋ ನಿರ್ಲಕ್ಷಿಸಿಬಿಡಬಹುದು ಅಥವಾ ಪ್ರತ್ಯುತ್ತರ ನೀಡಬಹುದು... ಅದೂ ಈತ ಅಂತಾ ಮುಖ್ಯ ವ್ಯಕ್ತಿ ಅಂತೆನಿಸಿದಾಗ!

ಆದರೆ ಕಾಂಗ್ರೆಸ್ ಹಾಗೆ ಸುಮ್ಮನಿದ್ದರೆ ಏನರ್ಥ?

ಈ ಕಾಂಗ್ರೆಸ್ ಬಜೆಪಿಗಳ ಅಂಗಪಕ್ಷ ಎಂತಲಾ ಅಥವಾ ಬಜೆಪಿಯ ಕೋಮುವಾದಿ ಮನಸ್ಥಿತಿಯ ಹಾರನಹಳ್ಳಿ ತರಹದವರೂ ಕಾಂಗ್ರೆಸ್‌ನಲ್ಲಿರಬಹುದು ಎಂದಾ?

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ದೇಶಪಾಂಡೆ ಇದಕ್ಕೆ ಉತ್ತರಿಸಲಿ. ■

ಮಂಡ್ಯದಲ್ಲಿ ಆಪರೇಷನ್ (ಕ)ಮಲ: ಕಾಂಗ್ರೆಸ್-ದಳ ಜಳಜಳ



ಅಂಬಿ




ಶ್ರೀನಿವಾಸ್

ಮಂಡ್ಯ ನಗರಸಭೆಯಲ್ಲಿ ಆಪರೇಷನ್ ಕಮಲ ಯಶಸ್ವಿಯಾಗುವುದರೊಂದಿಗೆ ಈ ಜಿಲ್ಲೆಯ ರಾಜಕಾರಣ ಅಧ್ವಾನದ ಸ್ಥಿತಿಗೆ ಬಂದು ತಲುಪಿದೆ. ನಾಚಿಕೆ, ಮಾನ, ಮರ್ಯಾದೆ ಮೂರೂ ಬಿಟ್ಟು, ಪ್ರಜಾತಂತ್ರದ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ಪಡ್ಡೆ ಹೈಕಳ ರೀತಿಯಲ್ಲಿ ಬಜೆಪಿಯ ಹೈಜಾಕ್ ವೀರರು ಆಡುತ್ತಿದ್ದರೆ, ದಿಕ್ಕಿಲ್ಲದ ಸ್ಥಿತಿಯಲ್ಲಿ ಕಾಂಗ್ರೆಸ್ ಇದೆ. ಇನ್ನು ಇವತ್ತಿಗೂ ಜಿಲ್ಲೆಯಲ್ಲಿ ನಂಬರ್ ಒನ್ ಪಕ್ಷವಾಗಿರುವ ಜನತಾದಳಕ್ಕೆ ಈ ಹೊಸ ಬೆಳವಣಿಗೆಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದೇ ಗೊತ್ತಾಗದೆ ದಿಕ್ಕೆಟ್ಟು ಕುಂತಿದೆ.



ಬೋರೇಗೌಡ



ಸುರೇಶ್‌ಗೌಡ



ಚಂದ್ರಶೇಖರ್



ರಾಮು

ಜನಾರ್ದನ ರೆಡ್ಡಿಯ ಅಣ್ಣ ಕರುಣಾಕರ ರೆಡ್ಡಿ ಎರಡು ತಿಂಗಳ ಕೆಳಗೆ ಮಂಡ್ಯಕ್ಕೆ ಬಂದು ಹೋದಾಗಲೇ ಮಂಡ್ಯ ನಗರಸಭೆಯಲ್ಲಿ ಆಪರೇಷನ್ ಕಮಲಕ್ಕೆ ನಡೆಯುತ್ತಿರುವ ಸಿದ್ಧತೆ ಬಗ್ಗೆ 'ಲಂಕೇಶ್'ನಲ್ಲಿ ಬರೆದಿದ್ದೆವು. ಈಗದು ಯಶಸ್ವಿಯಾಗಿ ಮುಗಿದಿದೆ. ಮೊನ್ನೆ ಅಕ್ಟೋಬರ್ ೨೩ರಂದು ಮಂಡ್ಯ ನಗರಸಭೆಯ ೧೭ ಸದಸ್ಯರು ಬೆಂಗಳೂರಿನಲ್ಲಿ ಹಲ್ಲುಖಿ ಗೌಡರ ಜೊತೆ ಹಲ್ಲು ಕಿಸಿಯುತ್ತಾ ನಿಂತು ಫೋಟೋ ತೆಗೆಸಿಕೊಂಡು ಬಜೆಪಿ ಸೇರಿದರು. ಇದರಲ್ಲಿ ದಳದ 9 ಸದಸ್ಯರು, ಮೂವರು ಕಾಂಗ್ರೆಸ್ಸಿಗರು ಮತ್ತು ೫ ಜನ ಪಕ್ಷೇತರರು ಇದ್ದಾರೆ. ರೈಲು ರಮೇಶ ಮತ್ತು ಮಾಜಿ ರೌಡಿ ನಾಗೇಂದ್ರನ ಜೊತೆ ಹೊಸಹಳ್ಳಿ ಬೋರೇಗೌಡರಂಥವರೂ ಹೋಗಿರುವುದು ಮಂಡ್ಯದ ಸಜ್ಜನರನ್ನು ಬೆಚ್ಚಿಸಿದೆ. ಈ ಆಪರೇಷನ್‌ನ ರೂವಾರಿಗಳಾದ ಕಲ್ಲಹಳ್ಳಿ ನಾಗೇಂದ್ರ ಮತ್ತು ಎಂ.ಎಲ್.ರಮೇಶರನ್ನು ಯಾರಾದರೂ ಮಾತಾಡಿಸಿ ನೋಡಬೇಕು. ಎಷ್ಟೆಷ್ಟು ಲಕ್ಷಕ್ಕೆ ವ್ಯಾಪಾರ ಕುದುರಿಸಿದೆವು ಎಂದು ಮೂರು ಬಿಟ್ಟು ಕಕ್ಕುತ್ತಾರೆ. ಕ್ಷೇತ್ರಾಭಿವೃದ್ಧಿಗಾಗಿ ಬಜೆಪಿ ಸೇರಿದೆವು ಎಂತಲೋ, ಬಜೆಪಿಯ ತತ್ವ ಸಿದ್ಧಾಂತ ಮೆಚ್ಚಿ ಸೇರಿದೆವೆಂತಲೋ ತೋರಿಕೆಗಾದರೂ ಒಬ್ಬರೂ ಹೇಳುತ್ತಿಲ್ಲ. ಎಷ್ಟೆಷ್ಟು ಲಕ್ಷಕ್ಕೆ ಮಾರಾಟವಾದೆವು ಅಂತ ಕೆಲವರು ಪೆಚ್ಚು ನಗೆಯೊಂದಿಗೆ ಹೇಳಿದರೆ, ಇನ್ನು ಕೆಲವರು ಇದೇ ತಮ್ಮ ಜೀವಮಾನದ ಘನಂದಾರಿ ಸಾಧನೆಯೆಂಬಂತೆ ಕೊಚ್ಚಿಕೊಳ್ಳುತ್ತಿದ್ದಾರೆ.


ತಮಿಳು ಕಾಲೋನಿಯಿಂದ ಪಕ್ಷೇತರನಾಗಿ ಗೆದ್ದಿದ್ದ ರಮೇಶನನ್ನು ಶಾಸಕ ಎಂ.ಶ್ರೀನಿವಾಸ್ ಕರೆದುಕೊಂಡು ಬಂದು ನಗರಸಭೆಯ ಉಪಾಧ್ಯಕ್ಷನನ್ನಾಗಿಸಿದ್ದರು. ಜನತಾದಳಕ್ಕೆ ಸ್ಪಷ್ಟ ಬಹುಮತವಿದ್ದು ಯಾರದೇ ಬೆಂಬಲದ ಅಗತ್ಯ ಇಲ್ಲದಿದ್ದರೂ ಇಂತಹ ಪೆದ್ದು ಕೆಲಸವನ್ನು ಶ್ರೀನಿವಾಸ್ ಮಾಡಿದ್ದರು. ಈಗ ಈ ರಮೇಶನೂ ಆರು ಲಕ್ಷಕ್ಕೆ ಬಕರಿಯಾಗಿ ಬಜೆಪಿ ಸೇರಿಬಿಟ್ಟಿದ್ದಾನೆಂದರೆ, ಇದೇನು ಬಳ್ಳಾರಿ ದುಡ್ಡಿನ ಶಕ್ತಿಯೋ ಅಥವಾ ನಮ್ಮ ಪ್ರಜಾಪ್ರಭುತ್ವದ ಅಧೋಗತಿಯ ನಿದರ್ಶನವೋ ಅರ್ಥವಾಗುತ್ತಿಲ್ಲ.

ಇಂತಹದೊಂದು ಆಪರೇಷನ್ ನಡೆಯುತ್ತಿದೆ ಎಂಬ ಸುದ್ದಿ ಸಿಕ್ಕಾಗ ಮಂಡ್ಯಕ್ಕೆ ಧಾವಿಸಿ ಬಂದ ಚೆಲುವರಾಯಸ್ವಾಮಿ 'ಹಣಕಾಸಿನ ತೊಂದರೆ ಇದ್ದರೆ ಹೇಳಿ, ಬಳ್ಳಾರಿ ರೆಡ್ಡಿ ಕೊಡುವ... ಕೊಡಲಾಗದಿದ್ದರೂ, ಅಷ್ಟೋ ಇಷ್ಟೋ ಕೊ... ತ್ತೇವೆ,' ಎಂದು ಹೇಳಿದರೆ ಹೊರತು 'ನ... ಪಕ್ಷದಿಂದ ಗೆದ್ದಿದ್ದೀರಿ, ಈಗ ಬಜೆಪಿ ಕಡೆ ಹೋ... ಮಂಡ್ಯದ ಜನ ಕ್ಯಾಕರಿಸಿ ಉಗಿಯುವ ಹ... ಮಾಡುತ್ತೇವೆ' ಎಂದು ಗದರಲಿಲ್ಲ. ಆದರೆ ವಾಸ... ಏನೆಂದರೆ ಅಷ್ಟು ಹೊತ್ತಿಗಾಗಲೇ ನಗರಸ... ಸದಸ್ಯರು ಗಣಿರೆಡ್ಡಿಗಳಿಂದ ಒಂದೊಂದು ... ಅಡ್ವಾನ್ಸ್ ತೆಗೆದುಕೊಂಡು ಅರ್ಧ ಬಕರಿಯ... ಬಿಟ್ಟಿದ್ದರು.

ಎಂ.ಶ್ರೀನಿವಾಸ್‌ರ ವಿರೋಧವಿದ್ದರೂ, ಚೆಲುವರಾಯಸ್ವಾ... ಕೃಪೆಯಿಂದಲೇ ಟಿಕೆಟ್ ಪಡೆದಿದ್ದ ಕಲ್ಲಹಳ್ಳಿ ನಾಗೇಂದ್ರ ರೆಡ್ಡಿಗ... ಕೊಟ್ಟ ಸ್ಯಾಂಟ್ರೋ ಕಾರು ಹತ್ತಿಕೊಂಡು ಎಲ್ಲೆಡೆ ಪೋಸು ಕೊಡುತ್ತಿ... ಆದಾದ ಮೇಲೆ ಚೆಲುವ ಮತ್ತು ಸೀನಣ್ಣನ ಜೋಡಿ ಕೆಲ... ನಗರಸಭಾ ಸದಸ್ಯರನ್ನು ಕರೆದುಕೊಂಡು ಬೆಂಗಳೂರಿನ ದಳ... ಹೈಕಮಾಂಡ್ ಹತ್ತಿರ ತೋರಿಸಿ ಪತ್ರಿಕಾಗೋಷ್ಠಿಯನ... ನಡೆಸಿದರು. ಆ ಗೋಷ್ಠಿಯಲ್ಲಿ ಬಜೆಪಿಯವರು ಲಕ್ಷ ಲಕ್ಷ ... ತೋರಿಸುತ್ತಿದ್ದರೂ ನಾವಿನ್ನೂ ದಳದಲ್ಲೇ ಇದ್ದೇವೆ ಎಂ... ಪೋಜು ನೀಡಿದ್ದ ಕೌನ್ಸಿಲರ್ ಪದ್ಮಾವತಿ ಈಗ ಕಮಲಾ... ಆಗಿದ್ದಾಳೆ. ಜನತಾದಳವೇ ಖಾಲಿಯಾಗಿದ್ದರೂ ರಾಜ್ಯ ನಾಯಕರಿಂ... ಒಂದೇ ಒಂದು ಪತ್ರಿಕಾ ಹೇಳಿಕೆಯೂ ಹೊರಬದ್ದಿಲ್ಲ ಎಂದ... ಅದಕ್ಕೆಷ್ಟು ಶಾಕ್ ಆಗಿರಬಹುದು ನೀವೇ ಯೋಚಿಸಿ.

ಆಪರೇಷನ್ ಕಮಲದಲ್ಲಿ ಹೆಚ್ಚು ನಷ್ಟ ಅನುಭವಿಸಿ... ಕಾಂಗ್ರೆಸ್ ಪಾಡಂತೂ ನಾಯಿಪಾಡಾಗಿಬಿಟ್ಟಿದೆ. ತನ್ನ ಒಂಭತ್... ಜನರನ್ನು ಕಳೆದುಕೊಂಡು ಅನಾಥವಾಗಿರುವ ಕಾಂಗ್ರೆಸ್‌ನಿಂ... ಕೂಡ ಇದಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈಗಾಗ... ಒಂದು ಕಾಲನ್ನು ಕಾಂಗ್ರೆಸ್‌ನಲ್ಲೂ ಮತ್ತೊಂದು ಕಾಲನ್... ಬಜೆಪಿಯಲ್ಲೂ ಇಟ್ಟಿರುವ ಆತ್ಮಾನಂದರ ಕ್ಷೀಣ ಹೇಳಿಕೆಯನ... ಬಿಟ್ಟರೆ ಮತ್ಯಾರೂ ತುಟಿ ಎರಡು ಮಾಡಿಲ್ಲ. ಕೆ.ಆರ್.ಪೇಟೆಯ... ಶಾಸಕ ಮತ್ತು ಜಿಲ್ಲಾಧ್ಯಕ್ಷ ಕೆ.ಬಿ.ಚಂದ್ರಶೇಖರ್ ತನಗೂ ಮಂಡ್ಯಕ... ಸಂಬಂಧವೇ ಇಲ್ಲವೆಂಬಂತಿದ್ದರೆ, ಶ್ರೀರಂಗಪಟ್ಟಣದಲ್ಲಿ ರವೀಂ... ಶ್ರೀಕಂಠಯ್ಯಗೆ ಟಿಕೆಟ್ ತಪ್ಪಿಸಿ ತಾನೂ ಸೋತ ಅಂಬರೀಷ... ಎಲ್ಲಿ ಕುಡಿದು ಬಿದ್ದಿದ್ದಾರೋ ಯಾರಿಗೂ ಗೊತ್ತಿಲ್ಲ. ಟಿಕೆಟ್... ತಪ್ಪಿಸಿದ ಕೋಪಕ್ಕೆ ಅಂಬರೀಷ್‌ರನ್ನು ಸೋಲಿಸಲು ಕೆಲ... ಮಾಡಿದ್ದ ರವೀಂದ್ರ ಕೂಡಾ ಈಗ ಶ್ರೀರಂಗಪಟ್ಟಣದ... ಕಾಂಗ್ರೆಸ್‌ಗೆ ಪುನಶ್ಚೇತನ ಕೊಡುವ ಗೋಜಿಗೆ ಹೋಗುತ್ತಿ... ಮಳವಳ್ಳಿಯ ನರೇಂದ್ರಸ್ವಾಮಿ ಕಾಂಗ್ರೆಸ್ ಕುಳವೇ ಆಗಿದ್ದರೂ... ಟಿಕೆಟ್ ಇಲ್ಲದೆ ಪಕ್ಷೇತರನಾಗಿ ಗೆದ್ದು ಬಜೆಪಿಗೆ ಆಪತ್ಬಾಂಧವನಾ... ಸಚಿವನಾದ. ಅಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಯಮದೂರ...

ನೆಲಗಳ್ಳ ಎಮ್ಮೆಲ್ಲೆಗಳ ರಕ್ತದಾಹ



ಶ್ರೀನಿವಾಸ್

ಬೆಂಗಳೂರಿನ ಮೂವರು ಬಜೆಪಿ ಶಾಸಕರನ್ನು ಗೆಲ್ಲಿಸಿ ಕಳಿಸಿದ ಮತದಾರರ ಗಮನಕ್ಕಿರಲಿ ಅಂತ ಈ ಸುದ್ದಿ.


ಆವತ್ತು ಹೋರಾಟಗಾರ್ತಿ ಮೇಧಾ ಪಾಟ್ಕರ್ ಮುಂದೆ "ಸಾರಾಯಿ ವಿರೋಧಿ ಹೋರಾಟಗಾರ ಎ.ಟಿ. ಬಾಬು ಹಂತಕರನ್ನು ನಾನು ಬಿಡ್ತೀನಾ? ಒಂದೇ ಒಂದು ವಾರ ಟೈಮು ಕೊಡಿ. ಈ ಯಡಿಯೂರಪ್ಪ ಯಾರು ಅನ್ನೋದನ್ನ ಸಾಬೀತು ಮಾಡ್ತೀನಿ" ಎಂದಿದ್ದ ಮುಖ್ಯಮಂತ್ರಿ ಯಡ್ಡಿಗೆ ಈಗ ಅವರದೇ ಪಕ್ಷದ ಮೂವರು ಶಾಸಕರ ಶನಿಪೀಡೆ ಶುರುವಾಗಿದೆ.

ಎ.ಟಿ. ಬಾಬು ಹಂತಕರನ್ನು ಶಿಕ್ಷಿಸಿ ಎಂದಲ್ಲ, ಕೊಂದವರನ್ನು ರಕ್ಷಿಸಿ ಎಂದು ಗೃಹ ಸಚಿವ ಆಚಾರ್ಯರನ್ನು ದಬಾಯಿಸುತ್ತಿರುವ ಮೂವರು ಶಾಸಕರ ಪೈಕಿ ಮುಂಚೂಣಿಯಲ್ಲಿರುವವನು ಯಲಹಂಕದ ಭೂಕಂಟಕ ಎಮ್ಮೆಲ್ಲೇ ವಿಶ್ವನಾಥರೆಡ್ಡಿ, ಈತನ ಕುಲಬಾಂಧವ ಕೃಷ್ಣರಾಜಪುರದ ನೆಲಕಂಟಕ ಶಾಸಕ ನಂದೀಶ್‌ರೆಡ್ಡಿ ಮತ್ತು ರಾಜರಾಜೇಶ್ವರಿನಗರದ ಹಳೇ ನೆಲಗಳ್ಳ ಕಂಹಾಲಿ ಎಂಎಲ್‌ಎ ಎಂ. ಶ್ರೀನಿವಾಸ್ ಇಬ್ಬರೂ ಸೇರಿ ಮೊನ್ನೆಯಷ್ಟೇ ಗೃಹ ಸಚಿವ ಆಚಾರ್ಯರ ಛೇಂಬರಿಗೆ ನುಗ್ಗಿ ದಾಂಧಲೆ ಮಾಡಿದ್ದರ ಉದ್ದೇಶವೇನು ಗೊತ್ತೆ?

ಸದ್ಯ ಮಾಗಡಿಯ ಇನ್ಸ್‌ಪೆಕ್ಟರ್ ಕೃಷ್ಣಕುಮಾರ್ ಮತ್ತು ರಾಮನಗರದ ನಿಷ್ಠುರಿ ಇನ್ಸ್‌ಪೆಕ್ಟರ್ ಧರ್ಮೇಂದ್ರರನ್ನು ಎತ್ತಂಗಡಿ ಮಾಡಿ ಎಂಬುದೇ ಈ ಮೂವರು ಎಮ್ಮೆಲ್ಲೇಗಳ ದೊಡ್ಡ ಡಿಮ್ಯಾಂಡು!

ಅಷ್ಟಕ್ಕೂ ಮಾಗಡಿಗಾಗಲಿ, ರಾಮನಗರಕ್ಕಾಗಲಿ ಏನೇನೂ ಸಂಬಂಧವಿಲ್ಲದ ಈ ಮೂವರು ನೆಲಗಳ್ಳ ಎಮ್ಮೆಲ್ಲೆಗಳಿಗೂ ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್‌ಗ... ಎತ್ತಂಗಡಿಗೂ ಏನು ಸಂಬಂಧ?

ಹಕೀಕತ್ತಿರುವುದೇ ಅಲ್ಲಿ. ಶತಗತಾಯ ಎ.ಟಿ. ಬಾಬು ಹಂತಕ ಪಾಯ್ಸನ್ ರಾಮನನ್ನು ಬಚಾವು ಮಾಡುವುದೇ ಇವರ ಷಡ್ಯಂತ್ರ. ಎ.ಟಿ. ಬಾಬು ಹತ್ಯೆಯ ಸೂತ್ರಧಾರನಾದ ಪಾಯ್ಸನ್ ರಾಮನನ್ನೇನಾದರೂ ಪೊಲೀಸ್ ಕಸ್ಟಡಿಗೆ ಪಡೆದು ಬಾಯಿಬಿಡಿಸಿದರೆ ಬೆಂಗಳೂರಿನ ಮೂವತ್ತು ಪ್ರಮುಖ ಲಿಕ್ಕರ್ ದೊರೆಗಳು ಜೈಲು ಪಾಲಾಗುತ್ತಾರೆ. ಈ ಪೈಕಿ ಒಬ್ಬ ಪ್ರಕಾಶ್‌ನಗರದ ಕುಮಾರ ವೈನ್ಸ್ ಮಾಲೀಕ ಕುಮಾರೇಗೌಡನಾದರೆ ಮತ್ತೊಬ್ಬ ಶಿವಾಸ್ ಬಾರ್ ಮಾಲೀಕ ಮಲೆಯಾಳಿ ಪ್ರಸನ್ನ ಮತ್ತು ಮೂರನೆಯವನೇ ಪೀಣ್ಯದ ಖದೀಮ ಬಾರ್ ಲಕ್ಕಣ್ಣ.



ಎ.ಟಿ.ಬಾಬು

ಈ ಪೈಕಿ ಕುಮಾರೇಗೌಡನಿಗೆ ರಾಜರಾಜೇಶ್ವರಿ ನಗರದ ಹಾಲಿ ಎಮ್ಮೆಲ್ಲೇ ಶ್ರೀನಿವಾಸ್ ಪರಮಾಪ್ತನಾದರೆ ಬಾರ್ ಲಕ್ಕಣ್ಣನಿ... ಯಲಹಂಕದ ಶಾಸಕ ವಿಶ್ವನಾಥ್ ರೆಡ್ಡಿಯೇ ಪರಮಗುರು. ಮುಂದಿನ ಪಾಲಿ... ಚುನಾವಣೆಯಲ್ಲಿ ಈ ಭಾಗದಲ್ಲಿ ಪಾಯ್ಸನ್ ರಾಮನ ಬೆಂಬಲವಿದ್ದರೆ ಕತೆಯೆ... ಬೇರೆ. ಪೀಣ್ಯದ ಕೆಲಭಾಗ ಯಲಹಂಕಕ್ಕೂ ರಾಜರಾಜೇಶ್ವರಿ ನಗರ ವಿಧಾನಸಭ... ವ್ಯಾಪ್ತಿಗೂ ಒಳಪಟ್ಟಿವೆ. ಇಲ್ಲಿಗೆ ತಿಂಗಳ ಹಿಂದೆಯೇ ರಾಮನಗರದ ಇನ್ಸ್‌ಪೆಕ್ಟ... ಧರ್ಮೇಂದ್ರರನ್ನು ವಿಶ್ವನಾಥ್ ರೆಡ್ಡಿ ಎತ್ತಂಗಡಿ ಮಾಡಿಸಿಬಿಟ್ಟಿದ್ದ. ಅದ... ಜನಪರ ಹೋರಾಟಗಾರರಿಗೆ ಗೊತ್ತಾಗಿ ಇನ್ನೇನು ಪ್ರತಿಭಟನೆಗಳಾಗುತ್...




...ಟ್ಟರಾಜು ಈಗ ನೆಹರೂ ಯುವ ಕೇಂದ್ರ, ಸ್ಪ್ರೈಟ್, ...ವ್ ಮಾಡಿಕೊಂಡು ಕಾಂಗ್ರೆಸ್‌ಅನ್ನು ಮರೆತಾಗಿದೆ. ...ದ್ದೂರಿನಲ್ಲಿ ಸೋತ ತಮ್ಮಣ್ಣ ಈಗಾಗಲೇ ಬಿಜೆಪಿಯ ...ಗಿಲು ತಟ್ಟಿ ಆಗಿದೆ. ಮಂಡ್ಯ ಕ್ಷೇತ್ರದಲ್ಲಿ ಸೋತ ...ಚ್.ಬಿ.ರಾಮು ತನ್ನ ಗಾಡ್‌ಫಾದರ್ ಅಂಬರೀಷ್ ...ಲಿಯಲ್ಲಿ ಗುಂಡು ಹಾಕುತ್ತಾ, ಆಗಾಗ ತೂರಾಡುತ್ತಾ ...ಂಡ್ಯದ ಬೀದಿಗಳಲ್ಲಿ ಕಾಣಿಸಿಕೊಳ್ಳುತ್ತಾರಷ್ಟೆ. ಪಾಂಡವ ...ರದ ಕಾಂಗ್ರೆಸ್‌ನ ಒಂದು ಬಣ ಕೆಂಪೇಗೌಡರ ...ತೆ ಬಿಜೆಪಿಗೆ ಹೋದರೆ, ಅಣ್ಣೇಗೌಡರು ಮತ್ತು ...ರ ಬೆಂಬಲಿಗರು ಪುಟ್ಟರಾಜುವಿನ ಚಿಲ್ಲರೆ ಕಾಸನ್ನು ...ಸಿಕೊಳ್ಳುತ್ತಾ ಇದ್ದಾರೆ. ಕೊಲೆಯಾಗಿ ಹೋದ ...ಂಗ್ರೆಸ್ ನಾಯಕ ಎಚ್.ಪಿ.ನಾಗೇಂದ್ರರ ಹೆಂಡತಿ ...ನಾವಣೆಯಲ್ಲಿ ಸೋತರೂ ಮುಡಾ ಅಧ್ಯಕ್ಷೆಯಾಗಿ ...ರೆ. ಅವರ ನೆಟ್‌ವರ್ಕ್‌ನ ಅರ್ಧದಷ್ಟು ಪುಡಿ ...ಯಕರಾದರೂ ಬಿಜೆಪಿ ಪಾಲಾಗಿದ್ದಾರೆ.

ಇನ್ನು ನಾಗಮಂಗಲದ ಸುರೇಶ್ ಗೌಡ ಕ್ಷೇತ್ರದ ...ಂಬೆಲ್ಲಾ ಓಡಾಡುತ್ತಿದ್ದರೂ, ಶಿವರಾಮೇಗೌಡ ಮತ್ತು ...ಲುವರಾಯಸ್ವಾಮಿಯ ಪುಂಡು ರಾಜಕಾರಣವನ್ನು ...ಯುವುದಕ್ಕಷ್ಟೇ ಸೀಮಿತರಾಗಿದ್ದಾರೆ. ಇದು 'ರಾಷ್ಟ್ರ ...ಯಕ' ಎಸ್.ಎಂ.ಕೃಷ್ಣರ ತವರು ಜಿಲ್ಲೆ ಮಂಡ್ಯದಲ್ಲಿ ...ಂಗ್ರೆಸ್ ತಲುಪಿರುವ ಸ್ಥಿತಿ.

ಹಾಗೆ ನೋಡಿದರೆ, ಬಿಜೆಪಿಯಾಗಲೀ, ಆರೆಸ್ಸೆಸ್ ...ಲೀ ಮಂಡ್ಯ ಜಿಲ್ಲೆಯಲ್ಲಿ ಎಂದೂ ಗಮನಾರ್ಹವಾಗಿ ...ವೂರಿದ್ದಿಲ್ಲ. ಕಾಂಗ್ರೆಸ್ ಮತ್ತು ದಳಗಳೇ ಜಿಲ್ಲೆಯನ್ನು ...ಶಕಗಳ ಕಾಲ ಆಳಿವೆ. ಆದರೆ, ಇತ್ತೀಚೆಗೆ ...ಜ್ಯರಾಜಕಾರಣದಲ್ಲಿ ಈ ಎರಡೂ ಪಕ್ಷಗಳು ವಿರೋಧ ...ಗಳಾಗಿ ಕುಳಿತಿರುವುದು, ಬಳ್ಳಾರಿ ಗಣಿ ದುಡ್ಡು ...ಜ್ಯಾದ್ಯಂತ ಈ ಎರಡೂ ಪಕ್ಷಗಳ ರಾಜಕಾರಣಿಗಳನ್ನು ...ೀದಿಸುತ್ತಿರುವುದು, ಕಾಂಗ್ರೆಸ್-ದಳಗಳ ನಾಯಕತ್ವ ...ೀಮಾರಿಯಾಗಿ ಕುಳಿತಿರುವುದು ಮಂಡ್ಯದ ಮೇಲೂ ...ಭಾವ ಬೀರಿದೆ. ಇದೆಲ್ಲದರ ಲಾಭ ಪಡೆಯಲೆಂದೇ ...ಜೆಪಿ ಮೂರು ಬಿಟ್ಟು ಖರೀದಿಗಿಳಿದಿದೆ.

ಎಲ್ಲಾ ಸಮಯದಲ್ಲೂ ಅಪೂರ್ವ ನ್ಯಾಯಪ್ರಜ್ಞೆ...ನ್ನು ಮೆರೆದಿರುವ ಮಂಡ್ಯದ ಜನತೆಯೇ ಬಾರು ...ೋಲು ಹಿಡಿದು ಬೀದಿಗಿಳಿದರೆ ಇದು ಒಂದಿಷ್ಟು ...ಹೋಗಬಹುದೇನೋ?

■ ಲಕ್ಷ್ಮಣ್ ಚೀರನಹಳ್ಳಿ



ಮಂಡ್ಯದ ಚೋರ್ ಬ್ರದರ್ಸ್!

ಮಂಡ್ಯದ ಚೋರ್ ಬ್ರದರ್ಸ್ ಯಾರು ಅಂಥ ಸಣ್ಣ ಹುಡುಗನನ್ನು ಕೇಳಿದರೂ ಜಫ್ರುಲ್ಲಾ-ಅಸಾದುಲ್ಲಾ ಅಂಥ ಥಟ್ಟನೆ ಉತ್ತರ ಸಿಗುತ್ತೆ ಅಂದರೆ ಕಳ್ಳತನದಲ್ಲಿ ಅವರೆಷ್ಟು ಫೇಮಸ್ಸಾಗಿದ್ದಾರೆ ಯೋಚಿಸಿ.

ದುಬೈ ಕನ್ನಡ ಸಂಘದ ಸ್ವಘೋಷಿತ ಅಧ್ಯಕ್ಷ, ದುಬೈನಲ್ಲಿ ಸ್ಟಾರ್ ಹೋಟೆಲ್‌ಗಳ ಒಡೆಯ, ಕೈಗಾರಿಕೋದ್ಯಮಿ ಅಂತೆಲ್ಲಾ ಕರೆಸಿಕೊಂಡು ತಿರುಗುವ ಜಫ್ರುಲ್ಲಾ ಖಾನ್ ಮಂಡ್ಯದಲ್ಲಿ ಆಲ್ ಪಾರ್ಟಿ ಲೀಡರ್. ಎಲ್ಲಾ ಪಕ್ಷಗಳಿಗೂ ಫೈನಾನ್ಸ್ ಮಾಡುವ ಜಫ್ರುಲ್ಲಾನಿಂದ ಆಲ್ ಪಾರ್ಟಿಗಳೂ ದುಡ್ಡು ತಿಂದಿದ್ದಾರೆ. ಈತನ ಆದಾಯದ ಮೂಲ ಜೊತೆಗಾರರಿಗೂ ನಿಗೂಢವಾಗಿದೆ. ಈತ ಮಂಡ್ಯಕ್ಕೆ ಬಂದು ಬಡ ಮುಸ್ಲಿಮರನ್ನ ಉದ್ಧಾರ ಮಾಡಿದ್ದಕ್ಕಿಂತ, ಇಲ್ಲಿನ ಯುವಕರಿಗೆ ಚಿಲ್ಲರೆ ಎಸೆಯುತ್ತಾ ಹಾಳು ಮಾಡಿದ್ದೇ ಹೆಚ್ಚು. ಇಡೀ ಮಂಡ್ಯದ ಪುಡಿ ರೌಡಿಗಳನ್ನು ತನ್ನ ಸುತ್ತ ಇಟ್ಟುಕೊಳ್ಳುತ್ತಿದ್ದ ಜಫ್ರುಲ್ಲಾ ಜಡೇಜಾ ರವಿಯ ಮರ್ಡರ್ ನಂತರ ಪತ್ತೆಯೇ ಇರಲಿಲ್ಲ. ಸತ್ತ ಮನೆಯವರಿಗೆ 2 ಸಾವಿರ ಕೊಟ್ಟು ಕೊಡುಗೈ ದಾನಿ ಅಂತ ಪತ್ರಿಕೆಗಳಲ್ಲಿ ಬರೆಸಿಕೊಳ್ಳುತ್ತಿದ್ದ. ಇನ್ನು ಈತನ ತಮ್ಮ ಅಸಾದುಲ್ಲಾ ಅಣ್ಣನ ಥೈಲಿಗಳಿಗೆ ಸಾಥ್ ನೀಡುತ್ತಲೇ ರಾಜಕೀಯಕ್ಕೆ ಎಂಟ್ರಿ ಕೊಟ್ಟ. ಅದೇ ಹಣದಿಂದಲೇ ಮೂಡಾ ಅಧ್ಯಕ್ಷಗಿರಿಯನ್ನೂ ಹೊಡೆದುಕೊಂಡಿದ್ದ ಮೂಡಾದ ಮೂಲಕ ಮಂಡ್ಯದ ಅಭಿವೃದ್ಧಿ ಮಾಡಿದ್ದಕ್ಕಿಂತ ರಿಯಲ್ ಎಸ್ಟೇಟ್ ಕುಳಗಳಿಗೆ ಅನುಕೂಲ ಮಾಡಿಕೊಟ್ಟಿದ್ದು ಬಿಟ್ಟರೆ ಈತ ಕಡಿದು ಕಟ್ಟೆ ಹಾಕಿದ್ದೇನೂ ಇಲ್ಲ.

ಇಂತಹ ಚೋರ್ ಬ್ರದರ್ಸ್‌ಗಳು ಮಂಡ್ಯ ಸಿಂಡಿಕೇಟ್ ಬ್ಯಾಂಕ್‌ಗೆ ಯಾಮಾರಿಸಿ 8 ಕೋಟಿ ರೂ. ನುಂಗಿರುವುದರ ಸುದ್ದಿ ಇದೀಗ ತಾನೇ ಹೊರಬರುತ್ತಿದೆ. ಆದರೆ ಇದುವರೆಗೂ ಮ್ಯಾನೇಜರ್ ಸ್ವಾಮಿ ಇದರ ಬಗ್ಗೆ ಬಾಯಿ ಬಿಡುತ್ತಿಲ್ಲ. ಯಾವ ಶೂರಿಟಿ ಇಲ್ಲದೆ ಹಣ ಕೊಟ್ಟ ಮ್ಯಾನೇಜರ್ ಅಣ್ಣ ತಮ್ಮಂದಿರಿಬ್ಬರನ್ನು ಹುಡುಕುತ್ತಾ ತಿರುಗುತ್ತಿದ್ದರೂ ಹಣ ಮಾತ್ರ ಬರುತ್ತಿಲ್ಲ. ಜಫ್ರುಲ್ಲಾನ ಡಿಪಾಸಿಟ್ 3 ಕೋಟಿ ನಂಬಿಕೊಂಡು ಹಣ ಅಳಿದಳಿದು ಕೊಟ್ಟ ತಪ್ಪಿಗೆ ಮ್ಯಾನೇಜರ್ ಈಗ ಬೆವರಿಳಿಸಿಕೊಳ್ಳುತ್ತಿದ್ದಾನೆ. ಶ್ರೀರಂಗಪಟ್ಟಣದಲ್ಲಿ ಫ್ಯಾಕ್ಟರಿ ಕಟ್ಟುತ್ತೇವೆಂದು ಬೊಗಳೆ ಬಿಟ್ಟು ಡ್ರಾ ಮಾಡಿಕೊಂಡ ಈ ಹಣ ಎಲ್ಲಿ ಹೋಯಿತು? ಜಫ್ರುಲ್ಲಾನಿಂದ ಆಗಾಗ ಸಾವಿರ, ಸಾವಿರಗಳನ್ನು ತೆಗೆದುಕೊಂಡ ಮಂಡ್ಯದ ಮಹಾನ್ ಪುಡಿಪುಕ್ಕಗಳಿಗೆಲ್ಲಾ ಆ ಹಣ ಎಲ್ಲಿಂದ ಬರುತ್ತಿತ್ತು ಎಂದು ಈಗ ಗೊತ್ತಾಗುತ್ತಿದೆ. ಇಷ್ಟೆಲ್ಲಾ ದೋಖಾ ನಡೆಯುತ್ತಿದ್ದರೂ, ಪೊಲೀಸರು ಮಾತ್ರ ತಲೆಕೆಡಿಸಿಕೊಳ್ಳದೆ ತಮಗೆ ಯಾವ ದೂರೂ ಬಂದಿಲ್ಲ ಎಂದು ಮುಗುಂ ಆಗಿ ಇರುವುದು ಏಕೋ ಗೊತ್ತಾಗುತ್ತಿಲ್ಲ. ■

...ಷ್ಟುವಾಗಲೇ ಹುಷಾರಾದ ಹೋಮ್ ಮಿನಿಸ್ಟರ್ ...ಚಾರ್ಯ ಧರ್ಮೇಂದ್ರರ ಎತ್ತಂಗಡಿ ರದ್ದುಗೊಳಿಸಿ...ದೆ.

...ಆಗಲೇ ಗೃಹ ಸಚಿವರ ವಿರುದ್ಧ ಕಿಡಿಕಾರಿದ ...ಶ್ವನಾಥ್ ರೆಡ್ಡಿ ಇದಾಗಿ ವಾರಕ್ಕೇ ಮಾಗಡಿ ...ನ್ಸ್‌ಪೆಕ್ಟರ್ ಕೃಷ್ಣಕುಮಾರ್‌ರನ್ನು ...ತ್ತಂಗಡಿ ಮಾಡುವಂತೆ ಎರಡನೇ ..., ಕೊಟ್ಟ. ಅದರ ಆಧಾರದ ...ರೆಗೇ ಮಾಗಡಿಯಿಂದ ...ಷ್ಣಕುಮಾರ್‌ರನ್ನು ವರ್ಗಾ ಮಾಡಿ ...ಗೆ ಮರಿಗೌಡ ಎಂಬ ಲಡಾಸು ...ಯನ್ನು ಹಾಕಲಾಯ್ತು. ಇದರ ...ದ್ಧವೂ ಮದ್ಯ ವಿರೋಧಿ ...ವಳಿಗಾರರ ಪ್ರತಿಭಟನೆಯಾಯ್ತು.



... ಮೊನ್ನೆ ನಡೆದ ವರ್ಗಾವಣೆಯಲ್ಲಿ ...ಯಿಲ್ಲದೇ ಮತ್ತೆ ಕೃಷ್ಣಕುಮಾರ್‌ರನ್ನು ...ಗಡಿಗೇ ಹಾಕಿಸಲು ಹಿರಿಯ ಐಪಿಎಸ್ ...ಕಾರಿ ಇನ್‌ಫೆಂಟ್, ಕಮಲ್‌ಪಂತ್ ...ಂತಾದವರು ಪಟ್ಟ ಪಾಡಾದರೂ ಎಂಥಾದ್ದು? ...ಮಾಡಿದಿಲ್ಲಾ? ಯಕಶ್ಚಿತ್ ಪೊಲೀಸ್ ಇನ್ಸ್‌ಪೆಕ್ಟರ್‌ನ ...ನ್ಸ್‌ಫರ್ ಮಾಡಿಸೋಕ್ಕಾಗಲ್ವೇನ್ರೀ...? ಎಂದು ...ಗಾಡಿಬಿಟ್ಟ. ಎ.ಟಿ. ಬಾಬು ಪಕ್ಕ ವಿರುದ್ಧ ...ತಕರ ಪತ್ರೆಗಾಗಿ ನಡೆದ ಹೋರಾಟವನ್ನು ...ರ್ಯಾಲೀ ಬಡಿಸಿ ಹೇಳಿದಾಗಲೂ ತಣ್ಣಗಾಗದ ...ನಾಥ್ ನೇರವಾಗಿ ಮುಖ್ಯಮಂತ್ರಿಗೇ ...ರುಕೊಟ್ಟ. ಈ ಬಗ್ಗೆ ಮುಖ್ಯಮಂತ್ರಿಯೇ

ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರಾದರೂ ವಿಶ್ವನಾಥ್ ರೆಡ್ಡಿ ಸರಿಹೋಗಲೇ ಇಲ್ಲ.

ಆತನಿಗೆ ಹಂತಕ ಪಾಯ್ಸನ್ ರಾಮನನ್ನು ರಕ್ಷಿಸಲೇಬೇಕಂತೆ. ಅದಕ್ಕೆಂದು ಪಾಯ್ಸನ್ ರಾಮನನ್ನು ಮಂಡ್ಯ ಜೈಲಿಂದ ಉಪಾಯವಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದ್ದಾಗಿದೆ. ಜೊತೆ ಹಂತಕ ಭವಾನಿ ಕೂಡ ಜೈಲು ವಾರ್ಡಿಗೇ ಬಂದಿದ್ದಾನೆ. ಸದ್ಯ ವಿಕ್ಟೋರಿಯಾ ಆಸ್ಪತ್ರೆಯ ಜೈಲು ವಾರ್ಡ್ ಪಾಯ್ಸನ್ ರಾಮನ ಪಾಲಿಗೆ ಸ್ವಚ್ಛಂದ ಹುತ್ತದಂತಾಗಿದೆ. ಆಸ್ಪತ್ರೆಯಿಂದ ಬಿಡುಗಡೆಯಾಗದೇ ಪೊಲೀಸ್ ಕಸ್ಟಡಿಗೆ ಪಡೆಯುವಂತಿಲ್ಲ. ಪೊಲೀಸರು ರಾಮನ ಬಾಯಿ ಬಿಡಿಸದೇ ಸುಪಾರಿ ಕೊಟ್ಟ ಲಿಕ್ಕರ್ ದೊರೆಗಳು ಪತ್ತೆಯಾಗೋಲ್ಲ.

ಅಷ್ಟಕ್ಕೂ ಎ.ಟಿ. ಬಾಬು ಕೂಡ ಕಳೆದ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದ. ತಮ್ಮದೇ ಪಕ್ಷದ ಪರವಿದ್ದ ಓರ್ವ ಜನಪರ, ನಿಷ್ಠಾವಂತ ಹೋರಾಟಗಾರನಿಗಿಂತಲೂ ಹಂತಕ ಪಾಯ್ಸನ್ ರಾಮನೇ ಈ ಎಮ್ಮೆಲ್ಲೆಗಳಿಗೆ ಮುಖ್ಯವೆ?

ನೆಲಗಳ್ಳ ಖದೀಮರೇ ಎಮ್ಮೆಲ್ಲೆಗಳಾದರೆ ರೌಡಿಗಳು ಕೊಲೆಗಡುಕರಿಗಲ್ಲದೇ ಇನ್ಯಾರಿಗೆ ತಾನೇ ಲಾಭ? ■

ಮಂಡ್ಯ ಮುನಿಸಿಪಾಲಿಟಿ ಜನ ಮಾರಿಕೊಂಡರಂತಲ್ಲಾ

ಶಂಕರೇಗೌಡರು, ಮಾದೇಗೌಡರು, ಕೃಷ್ಣಪ್ಪನವರೆಲ್ಲಾ ರಾಜಕಾರಣ ಮಾಡಿದ ಮಂಡ್ಯದ ನೆಲ ಈಗ ಬಿಕರಿಗೆ ಸಿದ್ಧವಾಗಿದೆಯಂತಲ್ಲಾ. ಇದನ್ನು ಅರಿತ ಗಣಿಕಳ್ಳನೊಬ್ಬ ಸೂಟ್‌ಕೇಸ್ ತುಂಬ ಹಣ ತುಂಬಿಕೊಂಡು ಬಂದು ಮಂಡ್ಯ ನಗರ ಸಭೆಯಲ್ಲಿ ಬೀಡುಬಿಟ್ಟ ಕೂಡಲೇ ಜೆಡಿಎಸ್‌ನ ಗುಲಾಮರು ಮತ್ತು ಕಾಂಗ್ರೆಸ್‌ನ ಕಳ್ಳರೆಲ್ಲಾ ಪಕ್ಷಾತೀತವಾಗಿ ಒಗ್ಗಟ್ಟು ತೋರುತ್ತ "ಕರುಣಾಕರ ರೆಡ್ಡಿಗೆ ಜಯವಾಗಲಿ" "ನಮ್ಮ ಮೇಲೆ ಕರುಣೆ ತೋರಿದ ರೆಡ್ಡಿಗೆ ಜೈ" ಎಂದು ಘೋಷಣೆ ಹಾಕಿದವಂತಲ್ಲಾ. ಇದರಿಂದ ಪುಳಕಿತನಾದ ರೆಡ್ಡಿ ಪಕ್ಷಾಂತರಿಗಳಿಗೆ ಗಿಫ್ಟ್ ಬಾಕ್ಸ್ ಕೊಡಲಾಗಿ ಸದಸ್ಯರು ಮಂಕಾದವಂತಲ್ಲಾ. ಕಡೆಗೆ ರೆಡ್ಡಿ ಅವರ ಕಿವಿಯಲ್ಲಿ "ಮನೆಗೆ ಹೋಗಿ ಎಣಿಸಿಕೊಳ್ಳಿ, ಇಲ್ಲಿ ಮಾತ್ರ ಬಿಚ್ಚಬೇಡಿ" ಎಂದನಂತಲ್ಲಾ. ಕೂಡಲೇ ತಮ್ಮನ್ನು ಮಾರಿಕೊಂಡ ಸದಸ್ಯರು, ಮನೆಗೆ ಹೋಗಿ ರೆಡ್ಡಿ ಗಿಫ್ಟನ್ನು ಬಿಚ್ಚಿ ಅದರಲ್ಲಿದ್ದ ನೋಟನ್ನು ಎಣಿಸುತ್ತ ಕುಳಿತಿವೆಯಂತಲ್ಲಾ, ಥೂತ್ತೇರಿ!!

*****

ಈ ನಡುವೆ ಪಲ್ಲಂಗದ ಮೇಲೆ ಕುಳಿತು ಗಣಿರೆಡ್ಡಿ ಗಿಫ್ಟನ್ನು ಎದೆಗೊತ್ತಿಕೊಳ್ಳುತ್ತಿರುವ ಪದ್ಮಾವತಿ "ನಿಜವಾಗ್ಲು ಬಳ್ಳಾರಿ ರೆಡ್ಡಿಗಳು ಇಷ್ಟು ಒಳ್ಳೆಯವರೂ ಅಂತ ಗೊತ್ತಿರಲಿಲ್ಲ. ಈ ಕುಮಾರಸ್ವಾಮಿ ಹೇಳಿದ ನೋಡಿ ನಾನೇನೊ ಅವ್ರು ರೌಡಿಗಳು ಅನ್ಕಂಡಿದ್ದೆ. ಈಗ ನೋಡಿದ್ರೆ ಪುಣ್ಯಾತ್ಮರು, ದಾನಧರ್ಮ ಮಾಡದ್ರಲ್ಲಿ ಎತ್ತಿದ ಕೈಯಿ" ಎಂದು ರೆಡ್ಡಿಗಳನ್ನು ಹೀನಾಮಾನ ಗುಣಗಾನ ಮಾಡಿದಳಂತಲ್ಲಾ. ಮಂಡ್ಯದ ಕೋಟೆಗೆ ರೆಡ್ಡಿಗಳು ಲಗ್ಗೆ ಹಾಕಿದ್ದನ್ನು ಕೇಳಿದ ದೇವೇಗೌಡರು ಗುಡುಗಿ "ಏನು ಮಾಡ್ತಯಿದಾನೆ ಆ ಚೆಲುವ? ಫಲವತ್ತಾದ ಖಾತೆ ಕೊಟ್ಟಿದ್ದು ಏಕೆ ಅಂತ ಗೊತ್ತಿದೆಯಾ ಅವನಿಗೆ?" ಎಂದರಂತಲ್ಲಾ. ಅದಕ್ಕೆ ಚಲುವ "ಇಡೀ ಪಾರ್ಟಿನೆ ಗುಳೇ ಹೊರಟಿರುವಾಗ, ನಾವು ಯಾರ್ನ ಅಂತ ತಡಿಲಿ? ಅಷ್ಟಕ್ಕೂ ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆಲಿ ನಾವು ಮಾಡಿದ್ನೆ ಬಿಜೆಪಿಗಳು ಮಾಡ್ತ ಇದಾರೆ. ಅದರಲ್ಲೇನು ತಪ್ಪು?" ಎಂದಿಲ್ಲವಂತಲ್ಲಾ. ಆದರೂ ಗೌಡರು ಚಲುವನ ಬಿಜೆಪಿ ಅಭಿಮಾನದ ಬಗ್ಗೆ ಇನ್ನು ಗುಮಾನಿ ಇಟ್ಟುಕೊಂಡು ಚಿಕ್ಕಬಳ್ಳಾಪುರಕ್ಕೆ ನೂಕಿ ತಮಾಷೆ ನೋಡಿಲಿದ್ದಾರಂತಲ್ಲಾ, ಥೂತ್ತೇರಿ!!

*****

ಥೂತ್ತೇರಿ ■ ಯಾಹೂ

ಕರ್ನಾಟಕದಲ್ಲಿ ಕಿತ್ತು ತಿನ್ನುತ್ತಿರುವ ಸಮಸ್ಯೆಗಳಿರುವಾಗ ಅದೆಲ್ಲವನ್ನ ಬಿಟ್ಟ ಎಡೂರಿ, ಶಾಸ್ತ್ರಿ ಭಾಷೆ ಬೇಕು ಎಂದು ರಚ್ಚೆ ಹಿಡಿದಿದ್ದಾನಂತಲ್ಲಾ. "ಶಾಸ್ತ್ರಿ ಭಾಷೆ ಎಂದರೇನು ಗುರುವೆ?" ಎಂದು ಈವರೆಗೆ ಯಾವ ಮಾಧ್ಯಮದವನೂ ಕೇಳಿಲ್ಲವಂತಲ್ಲಾ. ಅಕಸ್ಮಾತ್ ಎಡೂರಿ ಕೊಟ್ಟಿರುವ ಗಿಫ್ಟನ್ನು ಮರೆತು ಕೇಳಿದರೂ ಕೂಡ ಕೂಡಲೇ ಜಮದಗ್ನಿಯಂತಾಗುವ ಎಡೂರಿ "ಶಾಸ್ತ್ರಿ ಭಾಷೆ ಗೊತ್ತಿಲ್ಲದ ನೀವೆಂತ ಪತ್ರಕರ್ತರ್ರೀ?" ಅನ್ನುವುದು ಗ್ಯಾರಂಟಿ ಎಂದು ತಿಳಿದಿರುವ ಮಾಧ್ಯಮದ ಬೃಹಸ್ಪತಿಗಳು, ಶೋಭಕ್ಕನ ಕಾರ್ಯಾಚರಣೆಗೆ ಎಡೂರಿಯಿಂದ ಉತ್ತರ ಪಡೆಯತೊಡಗಿವೆಯಂತಲ್ಲಾ. ಇದ್ದುದರಲ್ಲಿ ಪರವಾಗಿಲ್ಲ ಎನ್ನಬಹುದಾದ ಶೋಭಕ್ಕ "ತಾಲೂಕಿಗೆ ಹೊರೆಯಾಗಿರುವ ಪಂಚಾಯ್ತಿ ತೆಗೆಯಬೇಕು" ಎಂದರೆ, ಅದನ್ನೇ ತಿರುಚಿಕೊಂಡ ಯಡ್ಡಿ "ನಮ್ಮ ಶೋಬು ಹೇಳಿರುವುದು ಹಾಗಲ್ಲ, ದುರ್ಬಲ ತಾಲ್ಲೂಕ್ ಪಂಚಾಯ್ತಿ ಬಲಪಡಿಸಬೇಕು ಅಂದಿದ್ದಾರೆ. ಇದು ಭಾಷೆಯಲ್ಲಾಗಿರೊ ವ್ಯತ್ಯಾಸ. ಅದಕ್ಕೇ ನಾನು ಶಾಸ್ತ್ರಿಭಾಷೆ ಬಂದರೆ ಎಲ್ಲ ಸರಿಯಾಗುತ್ತೆ ಅಂತ ಹೇಳೋದು" ಎಂದು ಗರಮ್ಮಾದರಂತಲ್ಲಾ, ಥೂತ್ತೇರಿ!!

*****



ಬರೋಬ್ಬರಿ ಐದು ಸಾವಿರ ಪೊಲೀಸರನ್ನು ಮೂರಾವರ್ತಿ ವರ್ಗ ಮಾಡಿರುವ ಯಡ್ಡಿ ಸರ್ಕಾರ ಅವರ ಜೇಬಿನಲ್ಲಿ ಐದು ರೂಪಾಯಿ ಇಲ್ಲದಂತೆ ದೋಚಿದೆಯಂತಲ್ಲಾ. ಇಷ್ಟರಮಟ್ಟಿನ ವರ್ಗಾವಣೆ ಅಗತ್ಯವಿತ್ತೆ ಎಂದು ಯಡ್ಡಿ ಪಟಾಲಂ ಕೇಳಿದರೆ, "ಅದು ಆರೆಸೆಸ್ಸ್ ನಿಷ್ಠ ಪೊಲೀಸ್ ಅಧಿಕಾರಿಗಳನ್ನು ಹುಡುಕಿ ಹಾಕಿಸಿಕೊಳ್ಳುವಲ್ಲಿ ಇಂತಹ ಪ್ರಮಾದ ನಡೆದಿರಬಹುದು. ಅಧಿಕಾರಿಗಳು ಇರುವುದೇ ಆಡಳಿತ ನಡೆಸುವವರ ಆಜ್ಞೆ ಪಾಲಿಸಲು. ಅಷ್ಟಕ್ಕೂ ನಾವು ಈ ಪೊಲೀಸ್ ಪೇದೆಗಳನ್ನು ಜಮ್ಮು ಕಾಶ್ಮೀರಕ್ಕೆ ವರ್ಗಾ ಮಾಡಿದ್ದೇವಾ? ನಮ್ಮಲ್ಲೇ ಹಂಚಿಕೊಂಡಿದ್ದೇವೆ" ಎನ್ನುತ್ತಿವೆಯಂತಲ್ಲಾ. ತನ್ನಲ್ಲಿ ಬರುವ ಪೇಷಂಟುಗಳಿಗೆ ಕಣ್ಮುಚ್ಚಿ ಇಂಜಕ್ಷನ್ ಕೊಡುತ್ತಿದ್ದ ಆಚಾರಿ ವರ್ಗಾವಣೆ ಫೈಲಿಗೂ ಹಾಗೆಯೇ ದಸ್ಕತ್ ಹಾಕುತ್ತ ಕುಳಿತಿದ್ದಾನಂತಲ್ಲಾ. ಇದರ ಫಲವಾಗಿ ಇಡೀ ಪೊಲೀಸ್ ಇಲಾಖೆ ಸಂತ್ರಸ್ತರ ಮುಖ ಹೊತ್ತು ಕರ್ತವ್ಯಕ್ಕೆ ವಿಮುಖರಾಗಿ ಅತಂತ್ರವಾಗಿದೆಯಂತಲ್ಲಾ. ಇತ್ತ ಪೊಲೀಸ್ ಇಲಾಖೆಯನ್ನು ಅರೆದು ಕುಡಿದಂತೆ ಮುಗುಮ್ಮಾಗಿರುವ ಶಂಕರ ಬದರಿ "ನಮ್ಮ ಕಿವಿ, ನಾಲಿಗೆ ಇನ್ನು ಸರಿಯಾಗಿ ಕೆಲಸ ಮಾಡುತ್ತಿಲ್ಲ" ಎಂದಿದ್ದಾರಂತಲ್ಲಾ, ಥೂತ್ತೇರಿ!!

*****

ಊರೆಲ್ಲಾ ಉಗಾದಿ ಮಾಡಿದ್ರೆ ಅದ್ವಾಡಿ ಅಮಾಸೆ ಮಾಡಿತ್ತಂತೆ ಎಂಬ ಗಾದೆ ಮಾತು ಕುರುಬರ ಹಟ್ಟಿಯಲ್ಲಿ ಮತ್ತೆ ಚಾಲ್ತಿಗೆ ಬಂದಿದೆಯಂತಲ್ಲಾ. ಸಾಯುತ್ತಿದ್ದ ಈ ಗಾದೆ ಮಾತು ಈಗ ಚಾಲ್ತಿಗೆ ಬಂದಕಾರಣ ಕೇಳಲಾಗಿ, ಸದರಿ ಗಾದೆಯನ್ನು ಚಾಲ್ತಿಗೆ ತಂದವನು ಅದೇ ಕುರುಬರ ಈಶ್ವರಪ್ಪನಂತಲ್ಲಾ. ಬಿಜೆಪಿ ಸರ್ಕಾರದಲ್ಲಿ ಬೆಳಕು ಕೊಡುವ ಮಂತ್ರಿಯಾಗಿ ಸರಿಯಾಗಿ ಕೆಲಸ ಮಾಡುವುದು ಬಿಟ್ಟು, ಉಡುಪಿ ಚಡ್ಡಿಗಳು ಕೆಡವಿ ಕಟ್ಟಿದ ಕನಕಗೋಪುರವೇ ಇರಲಿಲ್ಲ ಎಂದು ವಾದಿಸ ಹೊರಟಿದ್ದಾನಂತಲ್ಲಾ. ಆಗಾಗ್ಗೆ ಪೇಜಾವರದ ಕಡೆಯ ಅಕ್ರಮ ಸಂತಾನದಂತೆ ಮಾತನಾಡುವ ಈಶ್ವರಪ್ಪನ ಬಗ್ಗೆ ಮೈಸೂರು ಕಡೆಯ ವಿಶ್ವನಾಥ್ ಅಭಿಪ್ರಾಯ ಕೇಳಲಾಗಿ "ಅದೊಂದು ಶೂದ್ರ ಮುಂಡೆದು" ಎಂದು ವಿಶ್ವನಾಥ್ ಬ್ರಾಹ್ಮಣನಂತೆ ನಕ್ಕರಂತಲ್ಲಾ. "ಸರಿ ಸ್ವಾಮಿ, ತಾವೇನು?" ಎಂದು ಕೇಳಲಾಗಿ "ನಾನು ಕುರುಬರ ಪೈಕಿ ವಿಶ್ವನಾಥ್" ಎಂದರಂತಲ್ಲಾ, ಥೂತ್ತೇರಿ!!! ■

ಒಂದೂವರೆ ಲಕ್ಷ ಫ್ಲಾಟುಗಳನ್ನು ಕೊಳ್ಳೋರೇ ಗತಿಯಿಲ್ಲ

ರಿಯಲ್ ಎಸ್ಟೇಟ್ ಲ್ಯಾಂಡ್ ಮಾಫಿಯಾ ಖತಂ







ಒಂದು ಕೋಟಿಗಿದ್ದ ಎಕರೆ ಜಮೀನನ್ನು ಗೋಗರೆದು ಅರವತ್ತು ಲಕ್ಷಕ್ಕೆ ಕೊಡ್ತೀನಿ ಅಂದರೂ ಯಾರೂ ಖರೀದಿಸುತ್ತಿಲ್ಲ!

ದುಡ್ಡಿನಾಸೆಗೆ ಬಿದ್ದು ದುಬಾರಿ ರೇಟು ಕೊಟ್ಟು ಕೊಂಡ ಸೈಟುಗಳಿಗೆ ಮರುಗಿರಾಕಿ ಸಿಗುತ್ತಿಲ್ಲ.

ಇದು ಕೇವಲ ನೆಲಮಂಗಲ ಸುತ್ತಮುತ್ತಲ ರಿಯಲ್ ಎಸ್ಟೇಟ್ ಗತಿಯಷ್ಟೇ ಅಲ್ಲ. ಬೆಳ್ಳಂದೂರು ರಿಂಗ್ ರಸ್ತೆ ಎಚ್‌ಎಸ್‌ಆರ್ ಲೇಔಟ್ ಸುತ್ತಮುತ್ತ ಆಕಾಶವೇ ಕಾಣದಂತೆ ತಲೆ ಎತ್ತಿದ ಅಸಂಖ್ಯಾತ ಅಪಾರ್ಟ್‌ಮೆಂಟುಗಳ ಫ್ಲಾಟುಗಳೆಲ್ಲ ನೊಣ ಹೊಡೆಯುತ್ತಿವೆ. ಕೊಳ್ಳುವವರೇ ಗತಿಯಿಲ್ಲ. ಈ ರೀತಿ ಬೆಂಗಳೂರೊಂದರಲ್ಲೇ ಮಂತ್ರಿ, ಪೂರ್ವಂಕರ, ರಹೇಜಾ, ಪ್ರೆಸ್ಟೀಜ್, ಎಂಬೆಸ್ಸೀ, ಮಹಾವೀರ್, ಗೋಪಾಲನ್ ಇತ್ಯಾದಿ ಬಿಲ್ಡರುಗಳು ಬೇಕಾಬಿಟ್ಟಿ ಕಟ್ಟಿಸಿದ ಒಂದೂವರೆ ಲಕ್ಷ ಫ್ಲಾಟುಗಳನ್ನು ಕೇಳುವವರೇ ದಿಕ್ಕಿಲ್ಲ.

ರಿಯಲ್ ಎಸ್ಟೇಟ್ ನೆಲಕಚ್ಚಿದೆ. ಕೊಂಡಿಟ್ಟ ಖಾಲಿ ಸೈಟುಗಳ ರೇಟು ಅರ್ಧಕ್ಕೆ ಕುಸಿದಿದೆ. ಲ್ಯಾಂಡ್ ಮಾಫಿಯಾ ದಿಕ್ಕೆಟ್ಟು ಕೂತಿದೆ. ರೌಡಿಗಳ ರಾತ್ರಿ ಪಾರ್ಟಿ, ಕಾರ್ ಶೋಕಿ ಎಲ್ಲವೂ ರಾತ್ರೋರಾತ್ರಿ ಕಣ್ಮರೆಯಾಗಿ ಹೋಗಿದೆ.

ಎಲ್ಲೋ ಅಮೆರಿಕದ ಬ್ಯಾಂಕುಗಳು ದಿವಾಳಿಯಾಗಿದ್ದಕ್ಕೂ, ಭಾರತದ ಷೇರ್ ಮಾರುಕಟ್ಟೆ ಬರಬಾದಾಗಿದ್ದಕ್ಕೂ, ಇತ್ತ ಬೆಂಗಳೂರಿನ ಲ್ಯಾಂಡ್ ಭೂಮ್ ನೆಲಕಚ್ಚಿರುವುದಕ್ಕೂ ನೇರಾನೇರ ಸಂಬಂಧ ಕಲ್ಪಿಸಿ ಬಾಯಿಬಡಿದುಕೊಳ್ಳುವವರಿಗೆ ಬಹುಶಃ ವಾಸ್ತವ ಗೊತ್ತಿರಲಿಕ್ಕಿಲ್ಲ.

ಷೇರು ಮಾರುಕಟ್ಟೆ ದಿವಾಳಿಯಾಗಿದೆ ನಿಜ. ಆರ್ಥಿಕವಾಗಿ ಅಮೆರಿಕ ಕುಸಿದುಬಿದ್ದಿರುವುದು ಅಷ್ಟೇ ಸತ್ಯ. ಆದರೆ ಬೆಂಗಳೂರಿನ ರಿಯಲ್ ಎಸ್ಟೇಟ್ ಅವನತಿಗೆ ಇದೇ ಮುಖ್ಯ ಕಾರಣವಲ್ಲ. ಅದು ಶುರುವಾಗಿದ್ದು ಇಲ್ಲಿಗೆ ಒಂದೂವರೆ ವರ್ಷದ ಹಿಂದೆ. ಯಾವತ್ತು ಹೌಸಿಂಗ್ ಸಾಲದ ಮೇಲಿನ ಬಡ್ಡಿಯನ್ನು ಬ್ಯಾಂಕುಗಳು ಶೇ. 7 ರಿಂದ ಹನ್ನೆರಡಕ್ಕೇರಿಸಿ ಬಿಟ್ಟವೋ ಆಗಲೇ ಬೆಂಗಳೂರಿನ ರಿಯಲ್ ಎಸ್ಟೇಟ್‌ನ ಹಣೆಬರಹ ಬರೆದಾಗಿತ್ತು.

ಬೆಂಗಳೂರಿನ ರಿಯಲ್ ಎಸ್ಟೇಟ್‌ನ ಆಧಾರಸ್ತಂಭವೇ ಇಲ್ಲಿನ ಮಧ್ಯಮವರ್ಗ. ಏಳು ಪರ್ಸೆಂಟಿಗೆ ಹೌಸಿಂಗ್ ಸಾಲ ಪಡೆದು ಸೈಟೊಂದನ್ನು ಕೊಂಡು ಒಂದೋ ಎರಡೋ ವರ್ಷಕ್ಕೆ ಅದನ್ನು ಮಾರಿದರೆ ದುಪ್ಪಟ್ಟು ಲಾಭ ಗ್ಯಾರಂಟಿಯಿತ್ತು. ಯಾವತ್ತು ಬಡ್ಡಿಯ ರೇಟು ಹನ್ನೆರಡು ಪರ್ಸೆಂಟಿಗೇರಿತೋ ಬರುವ ಲಾಭಕ್ಕೂ, ಕೊಂಡು ಸೈಟನ್ನು ರೀಸೇಲ್ ಮಾಡಿ ಗಿಟ್ಟುವ ಲಾಭಕ್ಕೂ ಅಷ್ಟೇ ಆಗಿಬಿಡುತ್ತದೆ. ಇದು ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆ ಕಂಡ ಮೊದಲ ಪೆಟ್ಟಾದರೆ ಬಿಜೆಪಿ ಅಧಿಕಾರಕ್ಕೆ ಬಂದದ್ದೇ ರೆವಿನ್ಯೂ ಸೈಟುಗಳ ರಿಜಿಸ್ಟ್ರೇಷನ್ ನಿಷೇಧಿಸಿದ್ದು ಎರಡನೇ ಪೆಟ್ಟು. ಸರ್ಕಾರ ಏಕಾಏಕಿ ರೆವಿನ್ಯೂ ಭೂಮಿಯ ರಿಜಿಸ್ಟ್ರೇಷನ್ ನಿಲ್ಲಿಸಿದ್ದಕ್ಕೂ ಕಾರಣವಿದೆ. ಅದೂ ಕೂಡ ಲ್ಯಾಂಡ್ ಮಾಫಿಯಾ ಮಟ್ಟಹಾಕುವ ತಂತ್ರವೇ. ಯಾವುದೇ ಕೃಷಿ ಭೂಮಿಯನ್ನು ನಿವೇಶನವನ್ನಾಗಿ ಪರಿವರ್ತಿಸಬೇಕೆಂದರೆ ಮೊದಲು ಲ್ಯಾಂಡ್ ಕನ್ವರ್ಷನ್ ಅಂದರೆ ಭೂಪರಿವರ್ತನೆಯಾಗಬೇಕು. ಅದಕ್ಕಂತಲೇ ದೊಡ್ಡಮಟ್ಟದ ಶುಲ್ಕ ಕಟ್ಟಬೇಕು. ಹಾಗೇ ಕನ್ವರ್ಷನ್ ಆದ ಜಮೀನನ್ನು ನಿವೇಶನಗಳನ್ನಾಗಿ ಮಾಡಬೇಕೆಂದರೆ ಅದಕ್ಕೆ ಬಿಡಿಎ ಅಥವಾ ಬಿಎಂಆರ್‌ಡಿಎಯಿಂದ ಲೇಔಟ್ ಪ್ಲಾನ್ ಅಪ್ರೂವಲ್ ಆಗಬೇಕು.

ಆದರೆ ಬೆಂಗಳೂರು ಸುತ್ತಮುತ್ತಲ ಬಹುತೇಕ ಬಿಲ್ಡರುಗಳು ಲ್ಯಾಂಡ್ ಕನ್ವರ್ಷನ್ ಮಾಡಿಸದೇ, ಲೇಔಟ್ ನಕ್ಷೆಗೆ ಮಂಜೂರಾತಿಯನ್ನೂ ಪಡೆಯದೇ ಸೈಟುಗಳನ್ನಾಗಿ ವಿಂಗಡಿಸಿ ತೀರ ಅಗದೀ ದರಕ್ಕೆ ಸೈಟು ಮಾರುತ್ತಾರೆ. ಅಷ್ಟೊಂದು ಕಮ್ಮಿ ದರಕ್ಕೆ ಸೈಟು ಮಾರುತ್ತಿದ್ದರಿಂದಲೇ ಈತನಕ ಮಧ್ಯಮವರ್ಗದ ಜನಕ್ಕೆ ಸೈಟು ಕೈಗೆಟುಕುತ್ತಿತ್ತು.

ಇದು ಎಂಥಾ ಅನಾಹುತಕಾರಿಯೆಂದರೆ ಬೆಂಗಳೂರು ಸುತ್ತಮುತ್ತ ಇಂಥ ಮುನ್ನೂರಕ್ಕೂ ಅಧಿಕ ಅನಧಿಕೃತ ಬಡಾವಣೆಗಳು ರಾತ್ರೋರಾತ್ರಿ ತಲೆ ಎತ್ತಿದವು. ಹೌಸಿಂಗ್ ಸೊಸೈಟಿಯ ಖದೀಮರಿಂದ ಹಿಡಿದು ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ, ಅಬಕಾರಿ ಮಂತ್ರಿ ಕಟ್ಟಾ ನಾಯ್ಡು ತನಕ ಈ ಥರದ ಕಳ್ಳ ಲೇಔಟು ಮಾಡಿ ಸಹಸ್ರಾರು ಜನಕ್ಕೆ ಟೋಪಿಯಿಟ್ಟರು. ಇಂಥ ಲೇಔಟುಗಳಿಗೆ ನಕ್ಷೆಯೇ ಇರುವುದಿಲ್ಲವಾದ್ದರಿಂದ ಪಾರ್ಕಿಗೆಂದು, ರಸ್ತೆಗೆಂದು, ಆಟದ ಮೈದಾನಕ್ಕೆಂದು ಪೊಲೀಸ್ ಠಾಣೆಗೆಂದು ಮೀಸಲಿಡಬೇಕಾದ ಭೂಮಿಯೆಲ್ಲ ಸೈಟಾಗಿ ಮಾರಲ್ಪಡುತ್ತವೆ. ನಾಯಿಕೊಡೆಗಳಂತೆ ಹುಟ್ಟಿಕೊಂಡ ಇಂಥ ಕಳ್ಳ ಲೇಔಟುಗಳಿಗೆಲ್ಲ ಕುಡಿಯುವ ನೀರು ಕೊಡಹೊರಟರೆ ಇಡೀ ಕಾವೇರಿ ನದಿಯೇ ಬರಿದಾಗುತ್ತದೆ.

■ ರಾ. ಸೋಮನಾಥ್

ಯಾವತ್ತು ಸರ್ಕಾರ ರೆವಿನ್ಯೂ ನಿವೇಶನಗಳ ರಿಜಿಸ್ಟ್ರೇಷನ್ ನಿಲ್ಲಿಸಿತೋ ಅನಿವಾರ್ಯವಾಗಿ ಬಿಲ್ಡರುಗಳ ಕಳ್ಳ ಸೈಟುಗಳಿಗೆ ಗಿರಾಕಿ ಸಿಗದಂತಾಯ್ತು. ಜೊತೆಗೇ ಬಿಡಿಎ ನಾಡಪ್ರಭು ಕೆಂಪೇಗೌಡ ಮತ್ತು ಶಿವರಾಮ ಕಾರಂತರ ಹೆಸರಲ್ಲಿ ಎರಡು ಹೊಸ ಬಡಾವಣೆಯನ್ನು ಘೋಷಿಸಿತು. ಇದೇ ಹೊತ್ತಿಗೆ ಭೂ ಪರಿವರ್ತನೆ ಮಾಡಿಸಿ, ಲೇಔಟ್ ಪ್ಲಾನ್ ಅಪ್ರೂವಲ್ ಪಡೆದು ಸೈಟು ಮಾರಲು ನಿಂತ ಬಿಲ್ಡರುಗಳೆಲ್ಲ ತಮ್ಮ ಸೈಟಿನ ಬೆಲೆಯನ್ನು ದುಪ್ಪಟ್ಟು ಹೆಚ್ಚಿಸುವುದು ಅನಿವಾರ್ಯವಾಯಿತು. ಹೀಗೆ ಖಾಸಗಿ ಲೇಔಟುಗಳ ಸೈಟಿಗೆ ದುಬಾರಿ ರೇಟು ಕೊಟ್ಟು ಖರೀದಿಸುವ ಬದಲು ಪಾಲಿಕೆ ಅಥವಾ ಬಿಡಿಎ ಸೈಟುಗಳನ್ನೇ ಖರೀದಿಸಬಹುದಲ್ಲ?

ಇದು ಬೆಂಗಳೂರಿನ ಸೈಟು ಕೊಳ್ಳುವವರ ಮನಸ್ಥಿತಿ. ಏಕೆಂದರೆ ಬಿಡಿಎ ಅಂಗೀಕೃತ ಖಾಸಗಿ ಬಡಾವಣೆಗಳ ಸೈಟುಗಳ ದರಕ್ಕೂ ಬಿಡಿಎ ವತಿಯಿಂದಲೇಕೊಳ್ಳುವ ನಿವೇಶನ ಬೆಲೆಗೂ ಅಂಥ ವ್ಯತ್ಯಾಸವೇನಿಲ್ಲ. ಭೂಪರಿವರ್ತನೆ ಮಾಡಿಸದೇ ನಕ್ಷೆ ಮಂಜೂರಾಗದೇ ಮಾರಿದ ರೇಟಿಗೆ ಸಿ.ಎ. ಸೈಟುಗಳ ಭೂಮಿ ಕಳೆದು ಉಳಿದ ಭೂಮಿಯಲ್ಲಿ ಸೈಟು ಮಾಡಿ ಮಾರುವುದು ಸಾಧ್ಯವೇ ಇಲ್ಲ.

ಇನ್ನು ಬಿಡಿಎಯಷ್ಟೇ ಬೆಲೆತೆತ್ತು ಸೈಟುಕೊಳ್ಳುವ ತಾಕತ್ತು ಬೆಂಗಳೂರಿನ ಯಾವ ಜನಸಾಮಾನ್ಯನಿಗಿದೆ?

ಇದು ಬೆಂಗಳೂರಿನ ರಿಯಲ್ ಎಸ್ಟೇಟ್ ಕುಸಿತಕ್ಕೆ ಎರಡನೇ ಕಾರಣವಾದರೆ ಇದಕ್ಕೆ ಪೂರಕವೆಂಬಂತೆ ಕಟ್ಟಡ ಸಾಮಗ್ರಿ, ಕೂಲಿ, ಇಟ್ಟಿಗೆ, ಸಿಮೆಂಟು ಎಲ್ಲದರ ಬೆಲೆಯೂ ಏಕಾಏಕಿ ಆಕಾಶಕ್ಕೇರಿದೆ. ಎರಡು ವರ್ಷದ ಹಿಂದೆ ತಲಾ ಇಟ್ಟಿಗೆಯೊಂದಕ್ಕೆ ಒಂದು ರೂಪಾಯಿ ಎಂಬತ್ತು ಪೈಸೆ ಇದ್ದದ್ದು ಈಗ ಮೂರೂವರೆ ರೂಪಾಯಿಯಷ್ಟಾಗಿದೆ. ಟನ್ ಕಬ್ಬಿಣಕ್ಕೆ 23 ಸಾವಿರ ರೂಪಾಯಿಯಿದ್ದದ್ದು ಏಕಾಏಕಿ 50 ಸಾವಿರಕ್ಕೇರಿ ಈಗದು 33 ಸಾವಿರಕ್ಕೆ ಬಂದು ನಿಂತಿದೆ. ಮೂಟೆ ಸಿಮೆಂಟಿಗೆ 120 ರೂಪಾಯಿಯಿತ್ತು, ಈಗದು ಅದರ ದುಪ್ಪಟ್ಟಿಗೂ ಅಧಿಕ ಅಂದರೆ ಮೂಟೆಗೆ 270 ರೂಪಾಯಿಯಾಗಿದೆ. ಸಾಲದ್ದಕ್ಕೆ ಆಳುಗಳ ಕೂಲಿಯೂ ಏಕಾಏಕಿ ದುಪ್ಪಟ್ಟಾಗಿದೆ. ಹಿಂದಾದರೆ ಗಂಡಾಳಿಗೆ ದಿನಕ್ಕೆ 70 ರೂಪಾಯಿಗಿದ್ದ ಕೂಲಿ ಈಗ 150 ಕ್ಕೇರಿದೆ. ಹೆಣ್ಣಾಳಿಗೆ 65 ರೂಪಾಯಿತ್ತು, ಈಗ ನೂರಾ ಮೂವತ್ತು ರೂಪಾಯಿ ಕೊಟ್ಟರೂ ಕಷ್ಟ.

ಇನ್ನು ತಲಾ ಲಾರಿ ಲೋಡಿಗೆ ಏಳೂವರೆ ಸಾವಿರ ರೂಪಾಯಿಯಿದ್ದ ಮರಳಿಗೆ ಈಗ ಅದರ ದುಪ್ಪಟ್ಟು ಅಂದರೆ 15 ಸಾವಿರ ಕಕ್ಕಲೇಬೇಕು!

ಈ ಪಾಟಿ ದುಬಾರಿ ರೇಟು ಕೊಟ್ಟು ಯಾವ ಸರ್ಕಾರಿ ನೌಕರ ಅಥವಾ ಜನಸಾಮಾನ್ಯನೊಬ್ಬ ಮನೆ ಕಟ್ಟಲು ಸಾಧ್ಯ?

ಈ ಮಧ್ಯೆ ಅಂದರೆ 2007 ರಲ್ಲಿ ಆದಾಯ ತೆರಿಗೆ ಇಲಾಖೆ ಹಾಕಿದ ಮತ್ತೊಂದು ಏಟೆಂದರೆ ಕಟ್ಟುವ ಮನೆಗೆ IT exemption ಅಂದರೆ ಆದಾಯ ತೆರಿಗೆ ವಿನಾಯ್ತಿಯನ್ನು ಕಿತ್ತುಹಾಕಿದ್ದು. ಒಬ್ಬ ವ್ಯಕ್ತಿಗೆ ಒಂದೇ ಮನೆ. ಆತ ಎರಡನೇ ಅಥವಾ ಮೂರನೇ ಮನೆ ಕಟ್ಟುತ್ತಾನೆಂದರೆ ಅದಕ್ಕೆ ಕಡ್ಡಾಯವಾಗಿ ಇನ್‌ಕಂ ಟ್ಯಾಕ್ಸ್ ಕಟ್ಟಲೇಬೇಕು. ಹಿಂದಾದರೆ ಬಡ್ಡಿ ಕಮ್ಮಿಯಿತ್ತು, ಸಾಲ ಸಿಗುತ್ತಿತ್ತು, ಕಂಡಕಂಡ ಮಾರ್ವಾಡಿಗಳೆಲ್ಲ ಒಂದು ಮನೆ ಸಾಲದೆಂಬಂತೆ ಎರಡೋ ಮೂರೋ ಮನೆ ಕಟ್ಟಿಸಿ ಬಾಡಿಗೆಗೆ ಬಿಡುತ್ತಿದ್ದವರು ಐಟಿ ಏಟಿನಿಂದಾಗಿ ಸೈ… ಕೊಳ್ಳುವುದನ್ನೇ ನಿಲ್ಲಿಸಿಬಿಟ್ಟರು.

ಇದರಿಂದಾಗಿ ರಿಯಲ್ ಎಸ್ಟೇಟ್ ದಂಧೆಗೆ ಹರಿ… ಬರುತ್ತಿದ್ದ ಕಪ್ಪು ಹಣವೇ ನಿಂತು ಹೋಯಿತು. … ಇನ್ನೂ ಒಂದು ನಿಗೂಢವಿದೆ. 2007 ರ ಡಿಸೆಂಬರ್‌ನಿಂ… ಈಚೆಗೆ ಬಹುತೇಕ ಬ್ಯಾಂಕುಗಳು ಹೌಸಿಂಗ್ ಲೋ… ಕೊಡುವುದನ್ನು ನಿಲ್ಲಿಸಿಬಿಟ್ಟವು. ಹಿಂದಾದರೆ ಸಾಲ ಪಡೆ… ಸೈಟು ಖರೀದಿಸಿದಂತೆ ಕಳ್ಳ ಲೆಕ್ಕ ತೋರಿಸಿ ಇನ್‌ಕಂಟ್ಯಾ… ವಂಚಿಸಬಹುದಿತ್ತು, ಈಗ ಹಾಗಲ್ಲ, ಸೈಟೊಂದರ ಬೆ… ಮೂವತ್ತು ಲಕ್ಷವೆಂದರೆ ಅದಕ್ಕೆ ಪೂರ್ತಿ ಲೆಕ್ಕ ಕೊಡಬೇ…

ಹೀಗಾಗಿ ಯಾರಿಗೆ ನಿಜಕ್ಕೂ ಮನೆಯ ಅ… ಕತೆಯಿದೆಯೋ ಅವರಷ್ಟೇ ಸೈಟು ಖರೀದಿಸಲು ಸಾಧ್ಯ… ಹೊರತು ಕಪ್ಪು ಹಣವನ್ನು ದುಪ್ಪಟ್ಟು ಮಾಡಿಕೊಳ್ಳು… ಆಸೆಗೆ ಬಿದ್ದು ಒಂದರ ಮೇಲೊಂದು ಸೈಟು ಖರೀದಿ… ಅದನ್ನೇ ಮತ್ತೆಮತ್ತೆ ಮಾರುವ players ಗಳು ರಿಯ… ಎಸ್ಟೇಟ್‌ನಿಂದ ನಾಪತ್ತೆಯಾಗಿದ್ದಾರೆ. ಬ್ಯಾಂಕುಗಳು ಸಾ… ಕೊಡುತ್ತಿಲ್ಲ, ತೀರಾ ಸರ್ಕಸ್ ಮಾಡಿ ಸಾಲ ಪಡೆದರ… ಬರುವ ಲಾಭಕ್ಕೂ ಕಟ್ಟುವ ಬಡ್ಡಿಗೂ ಸರಿಹೋಗುತ್ತ… ಜೊತೆಗೆ ರೆವಿನ್ಯೂ ನಿವೇಶನಗಳ ನೋಂದಾವಣೆಯ… ಸರ್ಕಾರ ನಿಲ್ಲಿಸಿಬಿಟ್ಟಿದೆ. ಹೀಗಾಗಿ ಏಕಾಏಕಿ ರಿಯ… ಎಸ್ಟೇಟ್ ಕುಸಿದಿದೆಯೇ ಹೊರತು ಷೇರು ಮಾರುಕ… ದಿವಾಳಿಯಾಗಿದ್ದಕ್ಕೂ ಅಮೆರಿಕದ ಆರ್ಥಿಕತೆ ಕುಸಿದಿದ್ದ… ಅಂಥಾ ದೊಡ್ಡ ಸಂಬಂಧವಿಲ್ಲ.

ಒಂದಂತೂ ಸತ್ಯ ಈ ಕಾರಣಕ್ಕಾದರೂ ಜನಸಾಮಾ…ರಿಗೆ ಸೈಟು ಕೈಗೆಟುಕುತ್ತದೆಯಲ್ಲ, ಕನಿಷ್ಠ ಲ್ಯಾಂ… ಮಾಫಿಯಾ ಆರ್ಭಟ ಅಡಗಿ ರೌಡಿಗಳ ಹಾವ… ಕಮ್ಮಿಯಾಗುತ್ತದೆಯಲ್ಲ; ಅದು ಸಂತೋಷ… ವಿಷಯ.







ಅಧಃಪತನದ ಇನ್ನೊಂದು ಮುಖ



ಗೋವರ್ಧನಮೂರ್ತಿ

ಇದಿಷ್ಟೇ ಅಲ್ಲದೇ ರಿಯಲ್ ಎಸ್ಟೇಟ್ ಕುಸಿತಕ್ಕೆ ಇನ್ನೂ ಕೆಲ ಕಾರಣಗಳಿವೆ. ಅದು ಬೆಂಗಳೂರಿಗೆ ಬರುತ್ತಿದ್ದ ವಲಸಿಗರ ಸಂಖ್ಯೆಯಲ್ಲಾದ ದಿಢೀರ್ ಕುಸಿತ.

ಇಲ್ಲಿಗೆ ಐದು ವರ್ಷದ ಹಿಂದೆ ಪ್ರತಿನಿತ್ಯ ಬೆಂಗಳೂರಿಗೆ ನಾಲ್ಕರಿಂದ ಐದು ಮಂದಿ ಹೊಸಬರು ಸೇರ್ಪಡೆಯಾಗುತ್ತಿದ್ದದ್ದು ಈಗ ಅದು ಏಕಾಏಕಿ ಎರಡೂವರೆ ಸಾವಿರಕ್ಕಿಳಿದಿದೆ. ಅದಕ್ಕೆ ಮುಖ್ಯ ಕಾರಣ ಬೆಂಗಳೂರಿನ ಟ್ರಾಫಿಕ್ ಜಾಮ್ ಮತ್ತು ಸಿಕ್ಕಾಪಟ್ಟೆ ಮನೆಬಾಡಿಗೆ.

ಚೆನ್ನೈ ಅಥವಾ ಹೈದರಾಬಾದ್‌ಗಳಲ್ಲಿ ಮಧ್ಯಮ ವರ್ಗಿಯೊಬ್ಬನಿಗೆ ತಿಂಗಳಿಗೆ ಮೂರು ಸಾವಿರಕ್ಕೆ ಸಿಗುವ ಅದೇ ಮನೆಗೆ ಬೆಂಗಳೂರಿನಲ್ಲಿ ಹತ್ತು ಸಾವಿರ ತೆರಬೇಕು. ಇನ್ನು ಕೊಚ್ಚಿನ್, ಪೂನಾಗಳಲ್ಲಿ ಇದಕ್ಕೂ ಕಮ್ಮಿ ದರದಲ್ಲಿ ಬದುಕು ಸಾಧ್ಯ. ಹಿಂದಾದರೆ ಬೆಂಗಳೂರೊಂದೇ ಸಿಲಿಕಾನ್ ಸಿಟಿಯಾಗಿತ್ತು, ಅಸಂಖ್ಯಾತ ಐಟಿ ಸಂಬಂಧಿ ಸಾಫ್ಟ್‌ವೇರ್ anxillery ಘಟಕಗಳಿದ್ದವು.

ಇದರಿಂದ ಹುಷಾರಾದ ತಮಿಳುನಾಡು ಈಗ ಅದೆಂಥಾ ಆಮಿಷವೊಡ್ಡುತ್ತಿದೆಯೆಂದರೆ ಯಾರೇ ಕೈಗಾರಿಕೋದ್ಯಮಿಗೆ ಎಕರೆಗೆ ಒಂದು ರೂಪಾಯಿ ಲೆಕ್ಕಕ್ಕೆ ಭೂಮಿ ಕೊಡುತ್ತಿದೆ. ಜೊತೆಗೆ ರಿಜಿಸ್ಟ್ರೇಷನ್ ಶುಲ್ಕದಿಂದ ಸಂಪೂರ್ಣ ವಿನಾಯ್ತಿ. ಇಲ್ಲಿನಂತೆ ನೂರೆಂಟು ಇಲಾಖೆ ಸುತ್ತಬೇಕಿಲ್ಲ… ಕೈಗಾರಿಕೆಗಳಿಗಂತಲೇ ಸಿಂಗಲ್ ವಿಂಡೋ ಏಜೆನ್ಸಿಯಿದೆ. ರಸ್ತೆಗಳೂ ನಿರಾಳ… ನೀರಿನ ಸಮಸ್ಯೆಯೂ ಇಲ್ಲ. ಬೆಂಗಳೂರು ವಿಪರೀತ ಬೆಳೆದಿದೆ ನಿಜ ಆದರ… ಮೂಲ ಸೌಕರ್ಯವಿಲ್ಲ. 1993-94 ರಲ್ಲಿ ಜನಸಾಮಾನ್ಯನೊಬ್ಬ ಬದುಕಲು ಬೆಂಗಳೂರಿನಲ್ಲಿ ಏನೆಲ್ಲಾ ವೆಚ್ಚವಾಗುತ್ತಿತ್ತೋ ಈಗದೇ ಪರಿಸ್ಥಿತಿ ಮತ್ತು ರೇಟು… ಚೆನ್ನೈ ಹೈದರಾಬಾದುಗಳಲ್ಲಿದೆ. ಯಾರೇ ಬಿಲ್ಡರ್ ಅಥವಾ ಮಧ್ಯಮವರ್ಗಿ… ಚೆನ್ನೈ ಮತ್ತು ಹೈದರಾಬಾದ್‌ಗಳಲ್ಲಿ ಕಮ್ಮಿ ದುಡ್ಡು ಹಾಕಿ ಹೆಚ್ಚು ಲಾಭಗಳಿಸುತ್ತಾರೆ… ಅದೇ ಬೆಂಗಳೂರಿನಲ್ಲಿ ಜಾಸ್ತಿ ದುಡ್ಡು ಹಾಕಿ ಕುಮ್ಮಿ ಲಾಭ ಪಡೆಯುತ್ತಾರೆ.

ಇದು ಬೆಂಗಳೂರಿನ ರಿಯಲ್ ಎಸ್ಟೇಟ್ ಅಧಃಪತನಕ್ಕಿರುವ ಮತ್ತೊಂದು ಮುಖ. ಪೂನಾ, ಕೊಚ್ಚಿನ್‌ನಂಥ ನಗರಗಳಲ್ಲೂ ಈಗ ಬೆಂಗಳೂರಿಗೆ ಪೈಪೋಟಿಯೆನ್ನಿಸುವಷ್ಟು ಐಟಿ ತಲೆ ಎತ್ತಿದೆ. ಹೀಗಾಗಿ ದುಡ್ಡೂ ಬರುತ್ತಿಲ್ಲ, ಜನಕ್ಕೂ ಬೆಂಗಳೂರು ಬೇಕಿಲ್ಲ. ಇದಕ್ಕೆ… ತಕ್ಕಂತೆ ಅಮೆರಿಕದ ಆರ್ಥಿಕ ಅಧಃಪತನಕ್ಕೆ ಸಿಲುಕಿದ ಜೆ.ಪಿ. ಮಾರ್ಗನ್‌ನಂಥ ದೈತ್ಯ… ರಿಯಲ್ ಎಸ್ಟೇಟ್ ಕಂಪೆನಿ ಬೆಂಗಳೂರಿನಲ್ಲಿ ಹೂಡಬೇಕಿದ್ದ ನೂರುಕೋಟಿ ಡಾಲರ್‌ನಷ್ಟು ಮೊತ್ತವನ್ನು ತಡೆಹಿಡಿದಿದೆ. ಜೊತೆಗೆ ಸಿಂಗಾಪೂರ್ ಮೂಲದ ಐದು ಕಂಪೆನಿಗಳು… ತಮ್ಮ ಬೆಂಗಳೂರಿನ ಪ್ರಾಜೆಕ್ಟುಗಳನ್ನು ಕೈಬಿಟ್ಟಿದೆ.

ಹಾಗಂತ ಇಡೀ ರಿಯಲ್ ಎಸ್ಟೇಟ್ ನಿರ್ನಾಮವಾಗಿವೆಯೆಂದಲ್ಲ. ಜೊಳ್ಳುಗಳೆ… ತೂರಿ ಹೋಗಿ ಪ್ರೆಸ್ಟೀಜ್, ಮಂತ್ರಿ, ರಹೇಜಾರಂಥ ಗಟ್ಟಿಕಾಳುಗಳಷ್ಟೇ ಉಳಿಯುತ್ತವೆ… ಕುಪೇಂದ್ರ ರೆಡ್ಡಿ, ರೆಡ್ಡಿ ವೀರಣ್ಣ, ದಯಾನಂದ್ ಪೈ, ಜೈಶಂಕರ್, ಉದಯ್ ಗರುಡಾಚಾರ… ಥರದವರಷ್ಟೇ ಉಳಿದು ಮಾದೇಶ ನಿರ್ಮಾಪಕ ಗೋವರ್ಧನಮೂರ್ತಿಯಂಥ ಬ್ರೋಕರುಗಳು… ನಿಕಾಲಿಯಾಗುತ್ತಾರೆ. ಹಾಗೇ ಇನ್ನೆರಡೇ ವರ್ಷಕ್ಕೆ ಮತ್ತೆ ರಿಯಲ್ ಎಸ್ಟೇಟ್ ಭೂಮ್… ಶುರುವಾದರೂ ಅಚ್ಚರಿಯೇನಿಲ್ಲ. ಹೇಗೆ ಹಗಲಿದ್ದಂತೆ ರಾತ್ರಿ ಬರುತ್ತೋ ಹಾಗೇ ಅಟ್ಟಹಾಸದ… ನಂತರ ಆಕ್ರಂದನವೂ ಇದ್ದೇ ಇರುತ್ತದೆ. ಅದು ನಿಸರ್ಗದ ನಿಯಮ.

...ದ್ದಗಂಗಾ ಶ್ರೀ-ಜಾತಿ ಜಗಳ ತಂದಿಟ್ಟ ಪುಣ್ಯಪುರುಷ



...ಮೀದು ಅಖಂಡ, ಅಚುಂದಾರ್ಶ ಅನ್ನುತ್ತಾರಲ್ಲ ಅಂತಾದ್ದೊಂದು ಕೀರ್ತಿ ಪಡೆದು ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆಗಳಿಲ್ಲದ 'ಆಧ್ಯಾತ್ಮಿಕ ಗುರು' ...ಕೊಳ್ಳುವ ಅರ್ಹತೆಯಿದ್ದವರು ಸಿದ್ದಗಂಗಾ ಸ್ವಾಮಿಗಳು. ಆದರೆ ಅವರು ಈಗ ಕೇವಲ ಲಿಂಗಾಯತ ಜಾತಿ ದುರಭಿಮಾನಿ ಗುಂಪುಗಳ ಅಶರೀರ ವಾಣಿಯಾಗಿದ್ದಾರೆ. ಯಡ್ಡಿ ಸರ್ಕಾರದ ಎಲ್ಲಾ ಭ್ರಷ್ಟಾಚಾರ, ಮುಸ್ಲಿಂ-ಕ್ರಿಶ್ಚಿಯನ್ನರ ಮೇಲಿನ ಹಲ್ಲೆ, ಮತಾಂತರ ವಿವಾದಗಳಿಗೆ ಸಂಬಂಧಿಸಿದಂತೆ ಹಿಂದೂ ಕೋಮುವಾದಿಗಳಿಗೆ ನೈತಿಕ ಬೆಂಬಲ ನೀಡುತ್ತಿರುವ ಮಾಮೂಲಿ ಮಠಾಧೀಶರಾಗಿದ್ದಾರೆ.

ನಿಜಕ್ಕೂ ಅವರ ಘನತೆಗೆ ತಕ್ಕ ವರ್ತನೆ ಅಲ್ಲ ಇದು.

ಒಂದು ಕಾಲದಲ್ಲಿ ಎಲ್ಲಾ ಜಾತಿ ಜನಾಂಗದವರ ಬೆಂಬಲ ಪ್ರೀತಿ ಪಡೆದಿದ್ದ ಸಿದ್ದಗಂಗಾ ಶ್ರೀಗಳು ಈಗ ಬಿಜೆಪಿ ಸ್ವಾಮಿಯಾಗಿರುವುದು 'ಭಾರತ ರತ್ನ'ದ ಪ್ರಲೋಭನೆಗೆಂಬ ಪುಕಾರುಗಳಿವೆ.

ಈ ವೈರಾಗ್ಯಮೂರ್ತಿಗೆ ಮುತ್ತು, ರತ್ನ ಯಾಕೆ ಬೇಕು. ಅದೂ ಬಸವತತ್ವ ವಿರೋಧಿಗಳ ಶಿಫಾರಸ್ಸಿನಿಂದ ಸಿಗುವ ಪ್ರಶಸ್ತಿ ಯಾಕೆ ಬೇಕು!

ಕನಿಷ್ಠ ಈಗಿನ ಒಕ್ಕಲಿಗ-ಲಿಂಗಾಯತರ ಬೀದಿ ಜಗಳವನ್ನಾದರೂ ನಿಲ್ಲಿಸಲು ಸ್ವಾಮಿಗಳು ಮಾತಾಡಬೇಕಿದೆ. ಇಲ್ಲದಿದ್ದರೆ ಒಕ್ಕಲಿಗ-ಲಿಂಗಾಯತ ಜಾತಿ ಜಗಳ ತಂದಿಟ್ಟ ಪುಣ್ಯ ಪುರುಷರೆಂಬ ಅತಿರೇಕದ ಆರೋಪವೂ ಅವರ ಹೆಗಲಿಗೇರುವುದು ಖಚಿತ.

...ರ್ನಾಟಕದಲ್ಲಿ ಜಾತಿ ಸಂಘರ್ಷದ ಸೇಡಿನ ವಾತಾವರಣ ದಟ್ಟೈಸುತ್ತಿದೆ.

...ನಕಗೋಪುರ ವಿಚಾರದಲ್ಲಿ ಕುರುಬ ಜನಾಂಗದ ಭಾವನೆಗಳಿಗೆ ...ಮಾನವಾಗುವಂತೆ ಬಿಜೆಪಿ ಸರ್ಕಾರದ ಮಂತ್ರಿ ಈಶ್ವರಪ್ಪ ತಾತ್ಸಾರದ ...ಡುತ್ತಿದ್ದಾರೆ.

...ದೇ ಸಮಯದಲ್ಲಿ ಈಗ ಒಕ್ಕಲಿಗ-ಲಿಂಗಾಯತ ಕದನವೊಂದು ...ಗತೊಡಗಿದೆ. ಇದಕ್ಕೆ ಯಡಿಯೂರಪ್ಪ ಹಾಗೂ ವೀರಶೈವ ...ಗಳು ನೇರ ಪ್ರಚೋದನೆ ನೀಡುತ್ತಿವೆ. ಕಂತೆಗೆ ತಕ್ಕ ಬೊಂತೆ ...ಮಂತೆ ಕೆಲ ಒಕ್ಕಲಿಗ ಸಂಘಟನೆಗಳೂ ನೀನು ಅಂದರೆ ನಿಮ್ಮಪ್ಪ ...ಮಂತೆ ಪ್ರತ್ಯುತ್ತರ ಕೊಡುತ್ತಿದ್ದಾರೆ. ಈ ನಡುವೆ ಬಿಜೆಪಿಗಳು ಅಧಿಕಾರಕ್ಕೆ ... ಮೇಲೆ ಆಡಳಿತದ ವಿವಿಧ ಹಂತಗಳಲ್ಲಿ ಸದ್ದಿಲ್ಲದ 'ಜನಾಂಗೀಯ ...ರ್ಮಲನೆ' (ethnic cleansing) ಥರದ ಕಾರ್ಯಾಚರಣೆಯೊಂದು ...ದೆ.

...ಇದೂ ಒಂದು ರೀತಿಯ ಆಪರೇಷನ್ ಕಮಲ!

...ಇದಕ್ಕೆ ಬಲಿಯಾಗುತ್ತಿರುವವರು ಮಾತ್ರ ಒಕ್ಕಲಿಗ, ಕುರುಬ ಹಾಗೂ ... ಜನಾಂಗದ ಅಧಿಕಾರಿಗಳು.

...ಯಡ್ಡಿ ಮುಖ್ಯಮಂತ್ರಿಯಾದ ಈ ನೂರೂ ಚಿಲ್ಲರೆ ದಿನಗಳಲ್ಲಿ ಹತ್ತಿರತ್ತಿರ ... ಸಾವಿರ ವರ್ಗಾವಣೆಗಳಾಗಿವೆ. ಇದೆಲ್ಲಾ ಆಡಳಿತದಲ್ಲಿ ಚುರುಕು-ದಕ್ಷತೆ ...ಕೆ ಉದ್ದೇಶದಿಂದಾದ ವರ್ಗಾವಣೆಗಳಲ್ಲ, ಬದಲಾಗಿ ನಿರ್ದಿಷ್ಟವಾಗಿ ...ತ ಮಹತ್ವದ ಹುದ್ದೆಗಳಲ್ಲಿದ್ದ ಒಕ್ಕಲಿಗ ಅಧಿಕಾರಿಗಳನ್ನು ಹುಡುಕುಡುಕಿ ...ಹಾಕುವ ವರ್ಗಾ ಕಾರ್ಯಾಚರಣೆ ಇದು. ಈ ಪ್ರಕ್ರಿಯೆಯಲ್ಲಿ ಅನೇಕ ...ಗ ಅಧಿಕಾರಿಗಳು ಇಂದು ಕೆಲಸಕ್ಕೆ ಬಾರದ, ಅಷ್ಟೇನೂ ಚಾರ್ಮ್... ಜಾಗಗಳಿಗೆ ಎತ್ತಿ ಎಸೆಯಲ್ಪಟ್ಟಿದ್ದಾರೆ. ಅವರು ಬಿಟ್ಟು ಹೋಗಿರುವ ...ಗಳಿಗೆ ಲಿಂಗಾಯತ ಆಫೀಸರ್‌ಗಳು ಬಂದು ಕೂರುತ್ತಿದ್ದಾರೆ.

...ಬಹುತೇಕ ಟ್ರಾನ್ಸ್‌ಫರ್‌ಗಳು ಲಂಚಕ್ಕಾಗಿ ನಡೆದರೆ ಈ ಒಕ್ಕಲಿಗರ ...ಗಳು ಮಾತ್ರ ಸೇಡಿಗಾಗಿ ನಡೆದಿರುವಂತಾದ್ದು.

ಲಿಂಗಾಯತರ ರಣೋತ್ಸಾಹ

...ಸಿದ್ದಗಂಗಾ ಸ್ವಾಮಿಗಳು ಕೇವಲ ಒಂದು ಜಾತಿಯ ಮಠಾಧೀಶರಂತೆ ...ಸುತ್ತಿದ್ದಾರೆ ಇದು ಸರಿಯಲ್ಲ' ಎಂದು ಮಾಜಿ ಸಿಎಂ ಕುಮಾರಸ್ವಾಮಿ ...ಕೆ ನೀಡಿದ್ದೇ ತಡ, ಲಿಂಗಾಯತ ಸಂಘಟನೆಗಳೆಲ್ಲಾ ಜಗಳಕ್ಕಿಳಿದು ಬಿಟ್ಟಿದ್ದಾರೆ. ...ರ್ಥ ಏನೆಂದರೆ ಕೆಲವು ಲಿಂಗಾಯತ ಗುಂಪುಗಳನ್ನು ...ರೆ ಒಕ್ಕಲಿಗ, ಕುರುಬ, ದಲಿತ, ಮುಸ್ಲಿಂ, ಗೊಲ್ಲ... ... ಬೇರೆ ಯಾರೂ ಸಿದ್ದಗಂಗಾ ಸ್ವಾಮಿ ಬೆಂಬಲಕ್ಕೆ ...ತ್ತಿಲ್ಲ.

...ವಿದರ ಅರ್ಥ!

...ಅಂದರೆ ಕುಮಾರಸ್ವಾಮಿ ಹೇಳಿದಂತೆ ಈಗ ಸಿದ್ದಗಂಗಾ ...ಗಳು ಕೇವಲ ಲಿಂಗಾಯತ ಜಾತಿಯ ಮಠಾಧೀಶರು ...ಾಗಲಿಲ್ಲವೆ?

...ಹಾಯುಷಿ ಸಿದ್ದಗಂಗಾ ಶ್ರೀಗಳು ತಾವಾಗಿಯೇ ಮಠದ ...ಷರೆಗೆ ಮಸಿ ಬಳಿದ ಹಾಗಾಗಿದೆ ಇದರಿಂದ.

ತಾವು ದಸರೆಗೆ ಕರೆದಾಗ ಬಾರದೇ ಹೋದ ಸ್ವಾಮಿಗಳು ಈ ಬಾರಿ ಬಿಜೆಪಿಗಳು ಕರೆದಾಗ ದಸರೆಗೆ ಹೋಗಿ ಭಾಗವಹಿಸಿದರಲ್ಲ ಎಂದು ಪ್ರಶ್ನಿಸಿದ್ದರು ಕುಮಾರಸ್ವಾಮಿ. ಇದೇನು ತಲೆ ಹಾರಿಹೋಗುವಂತಹ ಆರೋಪವಾಗಿರಲಿಲ್ಲ. ಆದರೆ ಹಾಲಿ ಬಿಜೆಪಿ ಸರ್ಕಾರವನ್ನು ಕೇವಲ ಲಿಂಗಾಯತರ ಸರ್ಕಾರ ಎಂದು ಬೀಗುತ್ತಿರುವ ಕೆಲವು ಅವಿವೇಕಿಗಳು ಇದನ್ನೊಂದು ಬೀದಿ ಜಗಳವಾಗಿ



ಬೆಳೆಸಲು ರೆಡಿಯಾಗಿ ಬಿಟ್ಟಿದ್ದಾರೆ. ಕುಮಾರಸ್ವಾಮಿಯನ್ನು ಖಂಡಿಸುವ ಪ್ರತಿಭಟಿಸುವ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಕೆಲ ಒಕ್ಕಲಿಗರ ಸಂಘಟನೆಗಳು ಪತ್ರಿಕಾ ಸಮರಕ್ಕಿಳಿದಿದ್ದಾರೆ.

ಈಗ ಭೀಮಣ್ಣ ಖಂಡ್ರೆ ರಂಗಪ್ರವೇಶವಾಗಿದೆ.


ಖಂಡ್ರೆ

ಒಕ್ಕಲಿಗರಿಗೇ ನೇರವಾಗಿ ಬೆದರಿಕೆ ಹಾಕುವಂತೆ ವೀರಶೈವ ಮಹಾಸಭಾದ ಖಂಡ್ರೆ ಪ್ರಚೋದನಾಕಾರಿ ಹೇಳಿಕೆ ಕೊಟ್ಟಿದ್ದಾರೆ. ಈಗ ರಾಜ್ಯ ಒಕ್ಕಲಿಗ ಮಹಾಸಭಾದ ನಾಯಕ ಟಿ.ಎಚ್. ಚಂದ್ರಶೇಖರ್ 'ಒಕ್ಕಲಿಗರ ಅವಹೇಳನ ಹೀಗೇ ಮುಂದುವರೆದರೆ ಜಾತಿ ಸಂಘರ್ಷವಾಗುವ' ಎಚ್ಚರಿಕೆ ಕೊಟ್ಟಿದ್ದಾರೆ.

ಸಿದ್ದಗಂಗಾ ಸ್ವಾಮಿಗಳಿಗೆ ಇದು


ನಾರಾಯಣಗೌಡ


ಶಂಕರಲಿಂಗೇಗೌಡ

ಬೇಕಿತ್ತಾ? ಜುಜುಬಿ ಒಂದು ಹೇಳಿಕೆಯಿಂದ ದುಃಖ ಕಾಲಾಗಿ ಬರುವ ವ್ಯಕ್ತಿತ್ವವಾಗುತ್ತಾ ಅವರದು?

ಕುಮಾರಸ್ವಾಮಿಯ ಆರೋಪದಲ್ಲಿ ಸತ್ಯಾಂಶವಿರದಿದ್ದರೆ ಅವರು ಅದನ್ನು ನಿರ್ಲಕ್ಷಿಸಬಹುದಿತ್ತು ಅಥವಾ ಸಮಜಾಯಿಷಿ ಕೊಡಬಹುದಿತ್ತು. ಅದು ಬಿಟ್ಟು ವೀರಶೈವ ಯುವ ವೇದಿಕೆ, ವೀರಶೈವ ಮಹಾಸಭಾದ ಅಕ್ಷಬುದ್ಧ ನಾಯಕರನ್ನು ಛೂಬಿಟ್ಟು ಒಕ್ಕಲಿಗರನ್ನು ಕೆರಳಿಸುವ ಚಟ ಯಾಕೆ ಬೇಕಿತ್ತು?

ಒಕ್ಕಲಿಗ ಅಧಿಕಾರಿಗಳಿಗೆ ಬರೆ

ಹೊರಗಡೆ ಹೀಗೆ ಜಾತಿ ಸಂಘರ್ಷದ ಬಿಸಿ ಏರುತ್ತಿರುವಾಗಲೇ ಬಿಜೆಪಿಗಳು ಸರ್ಕಾರಿ ಯಂತ್ರಾಂಗದೊಳಗಿನ ಒಕ್ಕಲಿಗ ಆಫೀಸರ್‌ಗಳ ಮೇಲೆ ಕತ್ತಿ ಒರಿದು ನಿಂತಿದ್ದಾರೆ. ಒಕ್ಕಲಿಗರು ಜಿಲ್ಲಾಧಿಕಾರಿ-ಎಸ್‌ಪಿ ಜಾಗಕ್ಕೆ ಬರದಂತೆ ನೋಡಿಕೊಳ್ಳಲಾಗುತ್ತಿದೆ. ಸ್ವತಃ ಮುಖ್ಯಮಂತ್ರಿ ಯಡ್ಡಿ ಆಫೀಸ್ ತುಂಬಾ ಬರೀ ಬ್ರಾಹ್ಮಣ, ಲಿಂಗಾಯತರೇ ತುಂಬಿಕೊಂಡಿದ್ದಾರೆ. ದಯಾಶಂಕರ್, ಬಳಿಗಾರ್, ಆರ್.ಪಿ. ಜಗದೀಶ್... ಹೀಗೆ. ಈ ತಕ್ಷಣದ ಪರಿಸ್ಥಿತಿಯಲ್ಲಿ ಕರ್ನಾಟಕದ ಯಾವೊಂದು ಜಿಲ್ಲೆಯಲ್ಲೂ ಒಬ್ಬರೂ ಒಕ್ಕಲಿಗ ಡಿಸಿ-ಎಸ್ಪಿಗಳಿರದಂತೆ ಜನಾಂಗೀಯ ಶುದ್ಧೀಕರಣ ಮಾಡಿಬಿಡಲಾಗಿದೆ.

ಒಮ್ಮೆ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿ ಬಿಡಿಎ ಕಮಿಷನರ್ ಹುದ್ದೆ ನಿಭಾಯಿಸಿದ್ದ ಶಂಕರಲಿಂಗೇಗೌಡರನ್ನು ಈಗ ವೈದ್ಯಕೀಯ ಶಿಕ್ಷಣ ಇಲಾಖೆ ಸೆಕ್ರೆಟರಿಯಾಗಿ ಮೂಲೆಗೆ ತಳ್ಳಲಾಗಿದೆ. ಸ್ಪೆಷಲ್ ಡಿಸಿಯಾಗಿದ್ದ ರಾಮೇಗೌಡರನ್ನು ಕನಕಪುರ ರಸ್ತೆಯಲ್ಲಿ ಬೋರ್ಡೇ ಇರದ ಕಚೇರಿಯೊಂದಕ್ಕೆ ನೂಗಹಾಕಲಾಗಿದೆ. ನಾಗರಾಜು ಎಂಬ ಇನ್ನೊಬ್ಬ ಸ್ಪೆಷಲ್ ಡಿಸಿ ಕೇಡರಿನ ಆಫೀಸರ್ ಎಲ್ಲಿದ್ದಾರೆಂಬುದೇ ಗೊತ್ತಾಗುತ್ತಿಲ್ಲ. ಅದೇ ರೀತಿ ಹಾಸನ ಡಿಸಿಯಾಗಿದ್ದ ಅಶ್ವಥನಾರಾಯಣ ಗೌಡರನ್ನು ನಿತ್ರಾಣಗೊಂಡಿರುವ ಮಂಡ್ಯ ಸಕ್ಕರೆ ಕಾರ್ಖಾನೇಲಿ ಕಬ್ಬು ಅರಿ ಎಂದು ತಳ್ಳಲಾಗಿದೆ. ಚಾಮರಾಜನಗರ ಡಿಸಿಯಾಗಿದ್ದ ವಿಶ್ವನಾಥರೆಡ್ಡಿಗೆ ಅಗೋಚರ ಸ್ಥಳ ತೋರಿಸಲಾಗಿದೆ.

ಇನ್ನು ಪೊಲೀಸ್ ಇಲಾಖೆ ವಿಚಾರಕ್ಕೆ ಬಂದರೆ ಐಪಿಎಸ್ ಆಫೀಸರ್‌ಗಳಾದ ಕಿಶೋರ್ ಚಂದ್ರ, ನಾರಾಯಣಗೌಡ, ಚಂದ್ರಶೇಖರ್‌ರನ್ನು ಅವರ ಅನುಭವ ಹಾಗೂ ಸಾಮರ್ಥ್ಯಗಳಿಗಿಂತ ಕಡಿಮೆ ದರ್ಜೆ ಸ್ಥಾನಗಳಿಗೆ ತಳ್ಳಲಾಗಿದೆ. ಐಜಿ ಮಟ್ಟದ ಅಧಿಕಾರಿ ಜೈಪ್ರಕಾಶ್ ಈಗ ಪೊಲೀಸ್ ಹೆಡ್ ಕ್ವಾಟ್ರರ್ಸ್‌ನಲ್ಲಿ ಕೊಳೆಯುತ್ತಿದ್ದಾರೆ. ರವೀಂದ್ರನಾಥ್ ಟ್ಯಾಗೋರ್ ಹೋಂಗಾರ್ಡ್‌ನಲ್ಲಿ ಕಾವಲು ಕೂರುವಂತೆ ಮಾಡಲಾಗಿದೆ. ಬೆಂಗಳೂರಿನ ಮಾಫಿಯಾಗಳು ಹೆದರಿ ನಡುಗುವಂತೆ ಮಿಂಚಿನ ಸಂಚಲನ ಮೂಡಿಸಿದ್ದ ಡಿಸಿಪಿ ರವಿಕಾಂತೇಗೌಡ ಈಗೆಲ್ಲಿದ್ದಾರೆ ಗೊತ್ತೆ?

ಗುಮಾಸ್ತ ತರಹದ ಇಂಟಲಿಜೆನ್ಸ್‌ನಲ್ಲಿ!

ಗಣಿ ಇಲಾಖೆಯ ಮುಖ್ಯ ಹುದ್ದೆಯಲ್ಲಿದ್ದ ಪ್ರಭಾಕರ್ ಒಕ್ಕಲಿಗರೆಂಬ ಒಂದೇ ಕಾರಣಕ್ಕೆ ಅಲ್ಲಿಂದ ಎಬ್ಬಿಸಿ ಶಿವಲಿಂಗಮೂರ್ತಿಯೆಂಬ ಶರಣ ಅಧಿಕಾರಿಯನ್ನು ತಂದು ಕೂರಿಸಿದ್ದಾರೆ ಯಡ್ಡಿ. ಕೆ.ಎಲ್. ಸುಧೀರ್ ಎಂಬ ಐಪಿಎಸ್‌ಗೂ ಕೂಡ ಇಂಟಲಿಜೆನ್ಸ್ ಶಿಕ್ಷೆ ನೀಡಲಾಗಿದೆ. ಬೆಂಗಳೂರು ಪ್ರೂರ್ವ ವಲಯದ ಡಿಸಿಪಿಯಾಗಿದ್ದ ಮುನಿಸ್ವಾಮಿ ಈಗ ಅಗ್ನಿಶಾಮಕದಳದ ಆಫೀಸರ್ ಮಾತ್ರ. ಈ ರೀತಿ ಒಕ್ಕಲಿಗ ಅಧಿಕಾರಿಗಳು ಎತ್ತಂಗಡಿಯಾಗಿರುವ ಜಾಗಗಳಿಗೆ ಲಿಂಗಾಯತರು, ಬ್ರಾಹ್ಮಣರು ಅಥವಾ ಗುಪ್ತ ಬಿಜೆಪಿ ಬೆಂಬಲಿಗ ಆಫೀಸರ್‌ಗಳು ಬಂದಿದ್ದಾರೆ. ಪೇಮೆಂಟ್ ಸೀಟ್ ಗಿರಾಕಿಗಳೂ ಇಲ್ಲವಿಲ್ಲ.


ಆದರೆ ಒಟ್ಟಾರೆ ಸಾರಾಂಶದಲ್ಲಿ ಯಡ್ಡಿ ಸರ್ಕಾರ ಒಕ್ಕಲಿಗ ಅಧಿಕಾರಿಗಳನ್ನು ತುಳಿದು ಮೂಲೆಗೆ ತಳ್ಳುತ್ತಿದೆ. ಇದು ಒಕ್ಕಲಿಗ ಅಧಿಕಾರಿಗಳಿಗೆ ಅಸಮಾಧಾನ ತಂದಿರುವುದೂ ನಿಜ.

ಇವಿಷ್ಟೂ ವಿವರಗಳನ್ನು 'ಲಂಕೇಶ್'ಗೆ ನೀಡಿದ್ದು ಈ ಅನ್ಯಾಯ ತಾರತಮ್ಯಗಳ ಬಗ್ಗೆ ನೊಂದಿರುವ ಒಕ್ಕಲಿಗ ಅಧಿಕಾರಿಗಳ ... ಸಭೆ ಕಳೆದ ವಾರ ನಡೆಯಿತು

...SS ಪತ್ರಕರ್ತ 'ಶೂದ್ರ ಜಗದ್ಗುರುಗಳು ಅಯೋಗ್ಯರು' ಅಂದ


...ಬೆಂಗಳೂರಿನಲ್ಲಿ ಒಕ್ಕಲಿಗ ಆಫೀಸರ್‌ಗಳ ಕಾಲು ಮುರಿದು ಕೂರಿಸುತ್ತಿರುವಾಗಲೇ ಕೆಲ ಬ್ರಾಹ್ಮಣ ...ಕರ್ತರು ಹೊಸ ಜಗಳ ಶುರು ಮಾಡಿದ್ದಾರೆ.

...ಜಗದ್ಗುರು ಸ್ಥಾನಮಾನದ ವಿಚಾರ ಅದು. ಬ್ರಾಹ್ಮಣರ ಶೃಂಗೇರಿ ಮಠದ ಬೆಂಬಲವಿರುವ ಶೃಂಕೋನ ... ಪತ್ರಿಕೆ ಇತ್ತೀಚೆಗೆ 'ಇತಿಹಾಸ ಬಲ್ಲವರ್‍ಯಾರು' ಎಂಬ ಒಂದು ಲೇಖನ ಪ್ರಕಟಿಸಿದೆ. ಅದರಲ್ಲಿ ...ಗೇರಿ ಮಠದ ಸ್ವಾಮಿಗೆ ಮಾತ್ರ ಜಗದ್ಗುರು ಅನ್ನಿಸಿಕೊಳ್ಳುವ ಯೋಗ್ಯತೆ ಇದೆ, ಉಳಿದ ಜಗದ್ಗುರುಗಳು ...ಬರೆ ಕಲಿತವರು, ಅಯೋಗ್ಯರು ಎಂದು ನೇರವಾಗಿ ಗೇಲಿ ಮಾಡಲಾಗಿದೆ. ಮೇಲುಜಾತಿ ದುರಹಂಕಾರ ಢಾಳಾಗಿ ಕಾಣುವ ಈ ವರದಿಯಲ್ಲಿ ಸಿದ್ದಗಂಗಾ ಶ್ರೀ, ಆದಿಚುಂಚನಗಿರಿ ಮಠಾಧೀಶರು ಸೇರಿದಂತೆ ಯಾರಿಗೂ ಜಗದ್ಗುರು ಅನಿಸಿಕೊಳ್ಳುವಷ್ಟು ವಿದ್ಯೆ ಸಂಸ್ಕಾರಗಳಿಲ್ಲ ಎಂದು ಪ್ರತಿಪಾದಿಸಲಾಗಿದೆ.



ಕುಮಾರಸ್ವಾಮಿ ನೀಡಿದ್ದ ಹೇಳಿಕೆಗಿಂತ ನೂರುಪಟ್ಟು ಅವಮಾನಕಾರಿಯಾದ ಮೂರನೇ ದರ್ಜೆ ಕಾಮೆಂಟ್ ಇದು. ಈ ಮಾತು ಹೇಳಿರುವವನು ಒಬ್ಬ ಬ್ರಾಹ್ಮಣ ಪತ್ರಕರ್ತ.

ವೀರಶೈವ ಸಂಘಟನೆಗಳು ಇದರ ಬಗ್ಗೆ ಏನನ್ನುತ್ತಾರೆ?


ಶೃಂಕೋನ
ಇತಿಹಾಸ ಬ...

ಸುಡುಗಾಡಾದ ಹುಬ್ಬಳ್ಳಿ-ಧಾರವಾಡ ಕಾಂಟ್ರಾಕ್ಟರ್‌ಗಳ ಮಹಿಮೆ





ಗಬ್ಬೆದ್ದಿರುವ ಹುಬ್ಬಳ್ಳಿ

ಕರ್ನಾಟಕದ ಎರಡನೇ ರಾಜಧಾನಿ ಎಂದೇ ಹೆಸರು ಪಡೆದಿರುವ ಹಾಗೂ ಉತ್ತರ ಕರ್ನಾಟಕದ ಕೇಂದ್ರಬಿಂದುವಾಗಿರುವ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ಮಹಾನಗರಪಾಲಿಕೆ ಎಂಬುದೊಂದಿದೆ. ಬಿಜೆಪಿ ಸರ್ಕಾರ ಬಂದ ಮೇಲಂತೂ ತನ್ನದೇ ಪಕ್ಷದ ಆಡಳಿತ ಇರುವ ಮಹಾನಗರಪಾಲಿಕೆಗೆ ಯಡ್ಡಿ ಬಾಯಿಮಾತಿನಲ್ಲೇ ಈಗಾಗಲೇ ನೂರಾರು ಕೋಟಿ ರೂಪಾಯಿ ಹರಿದು ಬರುತ್ತಿದೆ!



ಅಜಯ್ ನಾಗಭೂಷಣ್



ರಾಧಕ್ಕ

ತೆರಿಗೆದಾರರ ವಿರೋಧದ ನಡುವೆಯೇ ಸುಮಾರು 40 ಲಕ್ಷ ರೂಪಾಯಿ ವೆಚ್ಚದಲ್ಲಿ ವಿದೇಶ ಪ್ರವಾಸಕ್ಕೆ ಮಹಾಪೌರೆಯಾದ ರಾಧಕ್ಕ ಅಲ್ಲಿರುವ ಎಲ್ಲಾ ಅಧಿಕಾರಿಗಳನ್ನೂ ಬಿಟ್ಟು ಮೂರು ಜನ ಕಾರ್ಪೋರೇಟರ್‌ಗಳನ್ನು ಕರೆದುಕೊಂಡು ರಾತ್ರೋರಾತ್ರಿ ಹಾರಿದ್ದಾಳೆ!

ಅಧಿಕಾರದ ಕುರ್ಚಿ ಹಿಡಿದ ತಕ್ಷಣ ಅವಳಿನಗರದ ಜನತೆಗೆ ಪ್ರತಿದಿನ ನೀರುಕೊಡುತ್ತೇನೆಂದು ಹೇಳಿ ಈಗ ಒಂದು ವರ್ಷವಾಯಿತು. ನೀರಂತೂ ಕೊಡಲಿಲ್ಲ, ಆದರೆ ಜನರಿಗೆ ಅಕ್ಷರಶಃ ನೀರು ಕುಡಿಸುವುದನ್ನು ಬಿಡಲಿಲ್ಲ. ಹೋಗಲಿ ರಸ್ತೆ ಗಟಾರವನ್ನಾದರೂ ಸ್ವಚ್ಛಮಾಡುತ್ತಾರೆಯೇ ಎಂದು ನೋಡಿದರೆ ಅದೂ ಇಲ್ಲ, ಇವತ್ತು ಅವಳಿನಗರಗಳು ಗಬ್ಬುನಾರುತ್ತಿವೆ. ಇನ್ನು ಪಾಲಿಕೆಯ ಆರೋಗ್ಯ ಖಾತೆಗಂತೂ ಚಿಕೂನ್ ಗುನ್ಯವೇ ಅಂಟಿಕೊಂಡುಬಿಟ್ಟಿದೆ.

ಈ ದೇಶದಲ್ಲಿಯೇ ಹೆಚ್ಚಿನ ತೆರಿಗೆಯನ್ನು ತುಂಬುತ್ತಿರುವವರು ಅವಳಿನಗರದ ತೆರಿಗೆದಾರರು. ಅದಕ್ಕೆ ಪ್ರತಿಫಲವಾಗಿ ಕಡಿಮೆ ಸೌಲತ್ತನ್ನು ಪಡೆಯುವ ದೌರ್ಭಾಗ್ಯ ಕೂಡ ಅವರದ್ದು! ಅತ್ತ ಬೆಂಗಳೂರನ್ನು ಯಡ್ಡಿ ಸಿಂಗಾಪೂರ್ ಮಾಡುತ್ತೇನೆ ಎನ್ನುತ್ತಿದ್ದರೆ, ಇಲ್ಲಿನ ಬಾಯಿಬಡುಕಿ ಮಹಾಪೌರೆ ರಾಧಕ್ಕ ಹುಬ್ಬಳ್ಳಿ-ದಾರವಾಡವನ್ನು ಅಕ್ಷರಶಃ ಸುಡುಗಾಡು ಮಾಡಿಬಿಟ್ಟಿದ್ದಾಳೆ.

ಕಾರ್ಪೋರೇಶನ್ ಕಸ ಕಾಂಟ್ರಾಕ್ಟರ್‌ಗಳಿಗೆ ರಸ

67 ವಾರ್ಡುಗಳ ಅವಳಿ ನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ 2000ಕ್ಕೂ ಹೆಚ್ಚು ದಲಿತರು ಕಾಯಂ ಪೌರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಕಳೆದ 10 ವರ್ಷದ ಅವಧಿಯಲ್ಲಿ ಅವರ ಸಂಖ್ಯೆ ಇಳಿಯುತ್ತಾ ಹೋಗಿ ಇವತ್ತು ಸುಮಾರು 700 ಜನ ಮಾತ್ರ ಉಳಿದುಕೊಂಡಿದ್ದಾರೆ. ಪೌರಕಾರ್ಮಿಕರು ಮಾಡುತ್ತಿದ್ದ ಕೆಲಸವನ್ನು ಕಾಂಟ್ರಾಕ್ಟರ್‌ಗಳಿಗೆ ನೀಡುವ ಪ್ರಕ್ರಿಯೆ ಪ್ರಾರಂಭವಾದದ್ದೇ ಇದಕ್ಕೆ ಕಾರಣ.

ಕಾರ್ಪೋರೇಟರುಗಳು ಮತ್ತು ಅಧಿಕಾರಿಗಳು ಕೂಡಿಕೊಂಡು ಯಾವಾಗ ಈ ಗುತ್ತಿಗೆ ಆಧಾರದ ಪದ್ಧತಿ ರೂಪಿಸಿದರೋ ಅವಳಿ ನಗರಗಳಲ್ಲಿ ದಿನಂಪ್ರತಿ ಉತ್ಪತ್ತಿಯಾಗುವ ಕಸ ಕಾಂಟ್ರಾಕ್ಟರುಗಳಿಗೆ, ಪಾಲಿಕೆಯ ಅಧಿಕಾರಿಗಳಿಗೆ ರಸವಾಗಿ ಪರಿವರ್ತಿತವಾಯಿತು. ಹೆಲ್ತ್ ಆಫೀಸರ್‌ಗಳು, ಇನ್ಸ್‌ಪೆಕ್ಟರ್‌ಗಳು, ಕಾಂಟ್ರಾಕ್ಟ್‌ದಾರರು ಉದ್ಧಾರವಾಗುತ್ತಾ ಹೋದರು. ಕೆಲವರು ಸಣ್ಣಪುಟ್ಟ ಫಿನಾಯ್ಲ್ ಕಸಬರಿಗೆ ಸಪ್ಲೈ ಮಾಡಿಯೇ ಉದ್ಧಾರವಾದರೆ, ಇನ್ನೂ ಕೆಲವರು ದಲಿತ ಪೌರ ಕಾರ್ಮಿಕರನ್ನು ಸುಲಿಯುತ್ತಾ ಕೊಬ್ಬತೊಡಗಿದರು.


ಇವತ್ತು ಪಾಲಿಕೆಯಲ್ಲಿ 700 ಜನ ಕಾಯಂ ಪೌರಕಾರ್ಮಿಕರಿದ್ದರೆ, ಸುಮಾರು 1000 ಜನ ಗುತ್ತಿಗೆ ಪೌರಕಾರ್ಮಿಕರಿದ್ದಾರೆ. ಇವರನ್ನೆಲ್ಲಾ 25 ಜನ ಕಾಂಟ್ರಾಕ್ಟ್‌ದಾರರು ಕಸಗುಡಿಸಲು, ಶೌಚಾಲಯ ಸ್ವಚ್ಛಗೊಳಿಸಲು, ಗಟಾರ ಕ್ಲೀನ್ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ನಗರ ಶುಚಿಕರಣಕ್ಕಾಗಿಯೇ ಪಾಲಿಕೆ ಪ್ರತಿ ತಿಂಗಳು 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದರಲ್ಲಿ ಅರ್ಧ ಹಣ ಖರ್ಚು ಮಾಡಿದರೂ ಅವಳಿ ನಗರಗಳು ಶುಭ್ರವಾಗಿ ಕಂಗೊಳಿಸುತ್ತಿದ್ದವು. ಆದರೆ, ಕಾಂಟ್ರಾಕ್ಟರ್‌ಗಳ, ಅಧಿಕಾರಿಗಳ ತೀರದ ಧನದಾಹದಿಂದಾಗಿ ರಸ್ತೆ ಗಟಾರಗಳು ಮಾತ್ರ ಸ್ವಚ್ಛಗೊಳ್ಳುವ ಬದಲು ಗಬ್ಬೆದ್ದು ನಾರುತ್ತಿವೆ.

ಈ ಎಲ್ಲಾ ಕಾಂಟ್ರಾಕ್ಟ್‌ದಾರರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ದಲಿತರೇ. ಅದೇ ಅವರಿಗೆ ಪ್ಲಸ್ ಪಾಯಿಂಟ್ ಆಗಿಬಿಟ್ಟಿದೆ. ಇವರನ್ನು ಯಾರಾದರೂ ಪ್ರಶ್ನಿಸಿದರೆ ದಲಿತ ಅಟ್ರಾಸಿಟಿ ಕೇಸು ಗ್ಯಾರಂಟಿ! ಇವರೆಲ್ಲಾ ಕಾರ್ಪೋರೇಟರುಗಳಿಗೆ, ಪೌರಕಾರ್ಮಿಕ ಸಂಘಕ್ಕೆ, ಆರೋಗ್ಯ ನಿರೀಕ್ಷಕರಿಗೆ ಸರಿಯಾಗಿ ಮೇಯಿಸುತ್ತಾರಾದ್ದರಿಂದ ಅವರೆಲ್ಲ ಇವರ ಬೆಂಬಲಕ್ಕೆ ನಿಂತುಬಿಟ್ಟಿದ್ದಾರೆ. ಹುಬ್ಬಳ್ಳಿ-ಧಾರವಾಡ ನಗರಗಳು ಗಬ್ಬು ನಾರಲು ಇನ್ನೇನು ಬೇಕು ಹೇಳಿ.

ದಲಿತರ ರಕ್ತ ಹೀರುತ್ತಿರುವ ಜನ

ಇಲ್ಲಿರುವ ಸಾವಿರ ಪೌರ ಕಾರ್ಮಿಕರನ್ನು ಸುಮ 25 ಕಾಂಟ್ರಾಕ್ಟ್‌ದಾರರು ನಿಯಂತ್ರಿಸುತ್ತಿದ ಹಾಗೆನ್ನುವುದಕ್ಕಿಂತ ರಕ್ತಹೀರುತ್ತಿದ್ದಾರೆ ಎಂದೇ ಹೇಳಬ ಪಾಲಿಕೆ ಈ ಗುತ್ತಿಗೆದಾರರಿಗೆ ಪ್ರತಿ ಪೌರಕಾರ್ಮಿಕರಿಗ ನೀಡುವ ನಿಗದಿತ ವೇತನ ತಿಂಗಳಿಗೆ 1800 ಇಎಸ್‌ಐ 200 ರೂ., ಪಿಎಫ್ 200 ರೂ., 2200 ರೂಪಾಯಿಗಳು. ಇದರ ಜತೆಗೆ ಸುಪರ್‌ವೈಜ ರೂ. 2500 ನೀಡುತ್ತಿದೆ. ಯಾವುದೇ ಕಾಂಟ್ರಾಕ್ ಈವರೆಗೆ ಇಎಸ್‌ಐ ಅಥವ ಪಿಎಫ್ ಹಣ ಕ ಇಎಸ್‌ಐ ಮತ್ತು ಪ್ರಾವಿಡಂಟ್ ಫಂಡ್ ಅಧಿಕಾರಿಗ ಕೂಡ ಗುತ್ತಿಗೆದಾರರಿಂದ ಭರ್ಜರಿ ಪ್ರ ಮೇಯ್ದಿರುವುದರಿಂದ ಅವರೂ ತಲೆ ಕೆಡಿಸಿಕೊ ಗೊಡವೆಗೆ ಹೋಗಿಲ್ಲ. ಇಲ್ಲಿಯತನಕ ಬಂದ ಪಾಲಿಕೆ ಆಯುಕ್ತರೂ ಕೂಡ ಇದೆಲ್ಲ ಕಂಡೂಕಾಣ ಕುಳಿತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಪಾಲಿಕೆ ಆ ಡಾ. ಅಜಯ್ ನಾಗಭೂಷಣ ಈ ಅನ್ಯಾಯದ ವಿ

ರೇಷ್ಮಾ ಆತ್ಮಹತ್ಯೆ ಪ್ರಕರಣ ರೋಣದಲ್ಲೊಬ್ಬ ಮಿನಿ ಮೋದಿ




ದಟ್ಟ ದರಿದ್ರದ ರೋಣ ನೆಲದಲ್ಲಿ ಕರುಳು ಕಿವುಚುವಂತಹ ಆಕ್ರಂದನಗಳಿಗೆ ಕೊನೆಯೆಂಬುದಿಲ್ಲವೇನೋ? ಕಾಮಾಂಧುರರ ಪೀಡನೆಗೆ ರೋಸತ್ತು ರೇಷ್ಮಾ ಭಾನು ಎಂಬ ಅರಳುವ ಕುಡಿ ನೇಣಿಗೆ ಕೊರಳೊಡ್ಡಿ ಕಮರಿಹೋಗಿರುವುದು ಇದಕ್ಕೆ ಲೇಟೆಸ್ಟ್ ಸೇರ್ಪಡೆ. ಆದರೆ, ಇದು ರೋಣದ ಇತಿಹಾಸದಲ್ಲಿ ಹಿಂದೆಂದೂ ನಡೆದಿರದಂತಹ ಹೃದಯ ವಿದ್ರಾವಕ ಘಟನೆ. ಈ ಘಟನೆಯಿಂದ ಇಡೀ ರೋಣವೇ ತತ್ತರಿಸಿರುವಾಗ ಕೊಳಕು ಕೇಸರಿ ರಾಜಕಾರಣದಲ್ಲಿ ಮುಳುಗಿರುವ ಕಳಕಪ್ಪ ಬಂಡಿ ಎಂಬ ಮೋದಿಯ ಶನಿಸಂತಾನಿ ಶಾಸಕ ಗುಜರಾತ್ ಮಾದರಿಯ ಬಗ್ಗೆ ಬೊಬ್ಬೆಯಿಡುತ್ತಿದ್ದಾನೆ.



ರೇಷ್ಮಾ

ಅವತ್ತು ಅಕ್ಟೋಬರ್ 16, 2008. ಎಲ್ಲರಿಗೂ ಅದು ಸಾಮಾನ್ಯ ದಿನವಾಗಿದ್ದರೆ ರೇಷ್ಮಾ ಭಾನು ಎಂಬ ಹುಡುಗಿಗೆ ಭಯಾನಕ ಕೊನೆಯ ದಿನ. ಸ್ಥಳೀಯ ವೀರರಾಣಿ ಕಿತ್ತೂರು ಚೆನ್ನಮ್ಮ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದ ಆ ಹುಡುಗಿ ಅವತ್ತು ಕಾಲೇಜು ಮುಗಿಸಿಕೊಂಡು ಮನೆ ದಾರಿ ಹಿಡಿದಿದ್ದಳು. ಸೂಡಿ ರಸ್ತೆಯಿಂದ ನಡೆದುಕೊಂಡು ಬರುತ್ತಿರುವಾಗ ಈರಪ್ಪ ಕಿರೇಸೂರು, ಮುತ್ತಪ್ಪ ಕಿರೇಸೂರು, ಮಾಂತಯ್ಯ ಭಂಡಾರಿಮಠ, ಜಗದೀಶ್ ಕುಂಬಾರ ನೇತೃತ್ವದ ಪಡ್ಡೆ ಪಟಾಲಂ ಆಕೆಯನ್ನು ಅಡ್ಡಗಟ್ಟಿದೆ. ಅವಳನ್ನು ಹೊತ್ತೊಯ್ದು ಅತ್ಯಾಚಾರ ಎಸಗಿ ತಮ್ಮ ಕಾಮತೀಟೆ ತೀರಿಸಿಕೊಳ್ಳಬೇಕೆಂಬುದು ಅವರ ಪೂರ್ವ ಯೋಜಿತ ತೀರ್ಮಾನ. ಅಂತೆಯೇ ಅವರೆಲ್ಲಾ ಒಟ್ಟಾಗಿ ಅವತ್ತು ಆಕೆಯನ್ನು ಎಳೆದಾಡಲು ಪ್ರಾರಂಭಿಸಿದಂತೆಯೇ ತನ್ನ ಶಕ್ತಿಯನ್ನೆಲ್ಲಾ ರಟ್ಟೆಗೆ ತಂದುಕೊಂಡ ರೇಷ್ಮಾ ಕೊಸರಿಕೊಂಡು ತಪ್ಪಿಸಿಕೊಂಡಿದ್ದಾಳೆ. ಇದು ರೋಣದ ನಡುಬೀದಿಯಲ್ಲಿ ಮಟಮಟ ಮಧ್ಯಾಹ್ನ 12.30ಕ್ಕೆ ನಡೆದ ಘಟನೆ.






ಪ್ರತಿಭಟನಾ ನಿರತರು

ಹೇಗೋ ಭಯದಲ್ಲಿಯೇ ಮನೆ ತಲುಪಿ ಅಕ್ಕ ತಸ್ಲೀಮ ಭಾನುಳ ತೆಕ್ಕೆಗೆ ಬಿದ್ದು ತನಗಾದ ಅನುಭವವನ್ನು ಭೀತಿಯಿಂದಲೇ ಹೇಳಿದಳು. ತಸ್ಲೀಮ ತಂಗಿಗೆ ಸ್ವಲ್ಪ ಧೈರ್ಯ ಕೊಟ್ಟು ಉಣಬಡಿಸಿದ್ದಳು. ಅಷ್ಟು ಹೊತ್ತಿಗಾಗಲೇ ಆಕೆಯನ್ನು ಅಡ್ಡಗಟ್ಟಿದ ಬೀದಿ ನಾಯಿಗಳು ಮನೆಹತ್ತಿರ ಬಂದು "ಹೊರಗೆ ಬಾರೇ ಕೆಂಪಿ" ಎಂದು ಆರ್ಭಟಿಸಿದ್ದಾರೆ. ಇದರಿಂದ ಮತ್ತಷ್ಟು ಭಯಗೊಂಡ ರೇಷ್ಮ ಮತ್ತು ತಸ್ಲೀಮ ಮನೆಯೊಳಗೆ ಮುದುಡಿಕೊಂಡು ಕುಳಿತಿದ್ದಾರೆ. ಕೊನೆಗೆ ಬೀದಿ ಕಾಮುಕರ ಕಾಟ ಜಾಸ್ತಿಯಾದಾಗ ಅವರಿಬ್ಬರೂ ಹೊರಗೆ ಬಂದು "ಅಣ್ಣಾ... ನಾನು ನಿಮಗೆ ಏನ್ ಅನ್ಯಾಯ ಮಾಡಿನಿ? ನನಗ್ಯಾಕ್ ಹಿಂಗ ಮಾಡಾಕತ್ತೀರಿ?" ಎಂದು ಅಳುತ್ತಲೇ ಕೇಳಿದ್ದಾರೆ. ಹೊರಗೆ ಬರುವುದನ್ನೇ ಕಾಯುತ್ತಿದ್ದ ಪುಂಡರು ಏಕಾಏಕಿ ರೇಷ್ಮಾ ಮೇಲೆ ಎಗರಿಬಿದ್ದಿದ್ದಾರೆ. ತಕ್ಷಣವೇ ಅಕ್ಕ ತಸ್ಲೀಮ ತಾವೇನೂ ತಪ್ಪು ಮಾಡದಿದ್ದರೂ ಅವರ ಕ್ಷಮೆ ಯಾಚಿಸಿದ್ದಾಳೆ. ಆಗ ವಾಪಸ್ಸು ಹೋದಂತೆ ನಟಿಸಿದ ಪುಂಡರ ಗುಂಪು ಮಧ್ಯಾಹ್ನ ರೇಷ್ಮಾ ಭಾನುಳ ತಂದೆ ಊಟಕ್ಕೆಂದು ಬಂದಾಗ ಮತ್ತೆ ದಾಳಿ ಮಾಡಿದೆ.

ರೇಷ್ಮಾಳ ತಂದೆ ಬುಡನ್‌ಸಾಬ್ ಬೆಟಗೇರಿಗೆ ಇಲ್ಲಿಯ ತನಕ ನಡೆದದ್ದು ಗೊತ್ತೇ ಇರಲಿಲ್ಲ. ತೀರಾ ಕಡುಬಡತನದಲ್ಲಿಯೇ ಬದುಕುತ್ತಿರುವ ಅವರು ಟಾಂಗಾ ಓಡಿಸಿಯೇ ಕುಟುಂಬದ ಹೊಟ್ಟೆ ಹೊರೆಯಬೇಕು. ಎಂದಿನಂತೆ ಅವತ್ತೂ ಕೂಡ ತಮ್ಮ ಟಾಂಗಾ ನಿಲ್ಲಿಸಿ ಊಟಕ್ಕೆ ಬಂದಿದ್ದರು. ನಡೆದ ಘಟನೆಯನ್ನು ಅಪ್ಪನಿಗೆ ಹೇಳಿದರೆ ಅವರೆಲ್ಲಿ ನೊಂದುಕೊಳ್ಳುತ್ತಾರೋ ಏನೋ ಎಂದು ಅಕ್ಕತಂಗಿಯರು ಅವರಿಗೆ ಏನೂ ಹೇಳಿರಲಿಲ್ಲ. ತಟ್ಟೆಯಲ್ಲಿರುವ ಕೂಳು ಇನ್ನೇನು ಬುಡನ್‌ಸಾಬರ ಹೊಟ್ಟೆ ಸೇರಬೇಕು ಎನ್ನುವಷ್ಟರಲ್ಲಿ ಬೀದಿ ಕಾಮಣ್ಣರು ಮೂರನೇ ಬಾರಿಗೆ ಮನೆಗೆ ದಾಳಿಯಿಟ್ಟು "ನಿಮ್ಮಪ್ಪನ ಕಣ್ಮುಂದೆಯೇ ನಿನ್ನನ್ನು ರೇಪ್ ಮಾಡ್ತೀವಿ ಬಾರೇ" ಎಂದು ಅರಚಾಡತೊಡಗಿದ್ದಾರೆ. ಗಾಬರಿಗೊಂಡ ಬುಡನ್‌ಸಾಬರು ಏನೂ ಅರ್ಥವಾಗದೇ ಹೊರಗೆ ಬಂದಿದ್ದಾರೆ. ಅವರ ಹಿಂದೆ ಅವರ ಮೂರು ಜನ ಹೆಣ್ಣುಮಕ್ಕಳೂ ಬಂದಿದ್ದಾರೆ. ರೇಷ್ಮಾಳನ್ನು ನೋಡುತ್ತಿದ್ದಂತೆಯೇ ತಮ್ಮ ರಾಕ್ಷಸ ಕಾಮನೆಗಳನ್ನು ಉದ್ರೇಕಿಸಿಕೊಂಡ ಕಿರೇಸೂರ್ ಬ್ರದರ್ಸ್, ಭಂಡಾರಿಮಠ, ಜಗದೀಶ್ ಕುಂಬಾರ್ ಬುಡನ್‌ಸಾಬರ ಎದುರಿನಲ್ಲಿಯೇ ರೇಷ್ಮಾಳ ಮೈಕೈ ಮುಟ್ಟಿ ಎಳೆದಾಡಿದ್ದಾರೆ. ಮಗಳ ರಕ್ಷಣೆಗೆ ಬಂದ ಬುಡನ್‌ಸಾಬ್ ಅಸಹಾಯಕತೆಯಿಂದ ಆ ರಾಕ್ಷಸರ ಕಾಲಿಗೆ ಬಿದ್ದು ಗೋಳಾಡಿದ್ದಾರೆ. ಇಷ್ಟು ನಡೆಯುತ್ತಿದ್ದಂತೆ ಇನ್ನೇನು ಅಕ್ಕಪಕ್ಕದ ಜನರೆಲ್ಲಾ ಸೇರಿ ದೊಡ್ಡ ರಾದ್ಧಾಂತವಾಗಬಹುದೆಂದು ಯೋಚಿಸಿ "ರಾತ್ರಿ ನಿನಗ ... ಮಾಡ್ತಿವಿ" ಎಂದು ಅವಾಚ್ಯವಾಗಿ ಬಯ್ಯುತ್ತಾ ಕಂಬಿಕಿತ್ತಿದ್ದಾರೆ.



ಎಂಎಲ್‌ಎ ಕಳಕಪ್ಪ ಬಂಡಿ

ಈ ಘಟನೆ ರೇಷ್ಮಾಳ ಮನಸ್ಸಿನ ಮೇಲೆ ತುಂಬಾ ವ್ಯತಿರಿಕ್ತ ಪರಿಣಾಮ ಬೀರಿದೆ. ತನ್ನಿಂದಲೇ ತನ್ನ ಅಪ್ಪನಿಗೆ, ಕುಟುಂಬಕ್ಕೆ ಈ ಗತಿ ಬಂತಲ್ಲಾ ಎಂದು ಮನಸ್ಸಿನೊಳಗೇ ತನ್ನದಲ್ಲದ ತಪ್ಪಿಗಾಗಿ ರೋದಿಸಿದ್ದಾಳೆ. ಮನೆಯ ಮರ್ಯಾದೆ ಬೀದಿಗೆ ಬಂತಲ್ಲಾ ಎಂದು ಒಳಗೊಳಗೇ ಕುಸಿದುಬಿಟ್ಟಿದ್ದಾಳೆ. ಆದ ಅವಮಾನ ತಾಳಲಾರದೇ ಆತ್ ಮಾಡಿಕೊಳ್ಳುವ ನಿರ್ಧಾರ ಮಾಡಿಬಿಟ್ಟ

ಮಗಳನ್ನು ಸಮಾಧಾನ ಮಾಡಿ ಬು ಸಾಬರು ಟಾಂಗಾ ಓಡಿಸಲು ಹೊ ಹೋದರು. ಒಬ್ಬ ಅಕ್ಕ ಕಂಪ್ಯೂ ಕ್ಲಾಸ್‌ಗಾಗಿ ಹೊರನಡೆದಿದ್ದಾಳೆ. ತಸ್ಲೀಮ ಒಗೆಯಲು ಹೋಗಿದ್ದಾಳೆ. ಮನೆಯ ರೇಷ್ಮಾ ಒಬ್ಬಳೇ. ತಸ್ಲೀಮ ಬಟ್ಟೆ ಒ ಕೊಂಡು ವಾಪಾಸ್ಸು ಬಂದಾಗ ಸೀಲಿ ಫ್ಯಾನ್ ಬಗಿದಿದ್ದ ತೊಲೆಯಿಂದ ರೇಷ ಶವ ನೇತಾಡುತ್ತಿತ್ತು!

ರೇಷ್ಮಾ ಆತ್ಮಹತ್ಯೆಯ ಹಿಂದಿನ ಕಾರಣಗಳು ಹೀಗಿ ಆ ನಂತರ ರೇಷ್ಮಾಳ ಶವದ ಮುಂದೆ ನಡೆದದ್ದು ಅ ಅಮಾನವೀಯ ರಾಜಕಾರಣ. ವಾಸ್ತವದಲ್ಲಿ ಆತ್ಮಹತ್ಯೆಯಲ್ಲ. ಪಾಪಿಗಳು ನಡೆಸಿದ ಕಗ್ಗೊಲೆ. ಕಗ್ಗೊಲೆ ನಡೆಸಿದ ಪಾಪಿಗಳೆಲ್ಲಾ ಬಿಜೆಪಿಯ ಪುಢಾರಿ ಕಳೆದ ಚುನಾವಣೆಯಲ್ಲಿ ಕಳಕಪ್ಪ ಎಂಬ ಮೋ ಶನಿಸಂತಾನಿಯ ಬೆನ್ನಿಗೆ ನಿಂತು ಗೆಲ್ಲಿಸಿದವರೆ. ಆ ಋಣ ಈಗ ಕಳಕಪ್ಪ ತೀರಿಸಬೇಕಲ್ಲ? ಅದರಲ್ಲೂ ಸತ್ತ ಯಕಶ್ಚಿತ್ ಒಬ್ಬ ಮುಸ್ಲಿಮ್ ಹುಡುಗಿ ಎಂದಮೇ ಸಾಯಿಸಿದ ಕಿರೇಸೂರ್ ಬ್ರದರ್ಸ್ ಗಾಣಿಗ ಸಮುದಾ ಸೇರಿದವರು ಎಂದಮೇಲೆ ಪಾಪಿಗಳ ಪಕ್ಷ ವಹಿಸಿಕೊ ಕಳಕಪ್ಪನಿಗೆ ಇನ್ನೇನು ಕಾರಣ ಬೇಕು? ಕೊಲೆಗಡುಕ ಸ್ವಲ್ಪ ದಿನ ಊರು ಬಿಡಲು ಹೇಳಿದ ಕಳಕಪ್ಪ ಪ್ರಕರಣವನ್ನು ಹ್ಯಾಂಡಲ್ ಮಾಡಲು ಬಳಸಿದ್ದು ಗುಜ ಮಾದರಿಯನ್ನೆ.


▶▶

ಅಂಭುವಿಸುತ್ತಾರೆ. ಕುಟ್ಟುಪ್ಪುದಾರರಿಗೆ ನೀಡಬೇಕಾಗಿದ್ದ ತವೆತಿವಿಯುವ ಮೂಲಕ ಒಂದಿಷ್ಟು ಬಿಸಿ ಸುತ್ತಿದ್ದಾರೆ.

ಗುತ್ತಿಗೆದಾರರು ಪೌರಕಾರ್ಮಿಕರಿಗೆ ನೀಡುತ್ತಿರುವ 900 ರಿಂದ 1000 ರೂ.ಗಳು. ಉಳಿದಿದ್ದರಲ್ಲಿ ಗ್ಯ ನಿರೀಕ್ಷರಿಗೆ 1200, ಅಧಿಕಾರಿಗೆ 1000, ರೇಟರ್‌ಗಳಿಗೆ 5000 ದಿಂದ 10000 ರೂ.ವರೆಗೆ ಾಗುತ್ತದೆ. ಇನ್ನು ಪೌರ ಕರ ಸಂಖ್ಯೆಗೆ ಅನುಗುಣ ಬಿಲ್ ಪಾಸ್ ಮಾಡುವ ಪತಿ ತಿಂಗಳು ತಮ್ಮ ಪ್ರಸಾದ ಸ್ವೀಕರಿಸುತ್ತಾರೆ. ನಿಲ್ಲವೆಂದರೂ 25 ರಿಂದ ಪೌರಕಾರ್ಮಿಕರನ್ನು ಒದ ಒಬ್ಬ ಗುತ್ತಿಗೆದಾರ ಯಿಂದ ಪ್ರತಿ ತಿಂಗಳು ವುದು ಹೆಚ್ಚೂ ಕಡಿಮೆ ಲಕ್ಷ ರೂಪಾಯಿ. ಪ್ರತೀ ಕರಿಗೆ ನೀಡುವುದು ಸಾವಿರ ಯಿಯಾದರೂ ಒಟ್ಟು 30 ಮಾತ್ರ. ಇನ್ನುಳಿದವರಿಗೆ ವಿರ ಪ್ರಸಾದ ಕೊಟ್ಟರೂ ಸೆಗೆ ಇಳಿಸುತ್ತಿರುವುದು ತ್ರಿ 50 ಸಾವಿರ! ನಗರಗಳ ಂಡಿಗಳು ಸ್ವಚ್ಛವಾಗುವುದಾದರೂ ಹೇಗೆ?

ಗುತ್ತಿಗೆದಾರರು ತಮ್ಮ ರಕ್ಷಣೆಗಾಗಿ ಹಾಗೂ ುಗಳೊಂದಿಗೆ ಡೀಲಿಂಗ್ ಕುದುರಿಸಲು ನಾಗರಾಜ ಂಟಿ ಎಂಬಾತನನ್ನು ಅಧ್ಯಕ್ಷನನ್ನಾಗಿ ಮಾಡಿ ದ್ದಾರೆ. ಈತ ಕಾರ್ಪೊರೇಟರ್ ಟಗರಗುಂಟಿಯ ವರ ಸಂಬಂಧಿ ಕೂಡ. ದಾರವಾಡದ ವಾರ್ಡ್ , 19, 21ನ ಕಾಂಟ್ರಾಕ್ಟ್‌ದಾರ ಎನ್.ಸಿ.ಸಗಬಾಲ್ ಕಬ್ಬೇರ ಎಂಬಾತ ಮಾಜಿ ಕಾರ್ಪೊರೇಟರನ ತಿಷ್ಯ. ಇನ್ನು ವಾರ್ಡ್ ನಂ. 35ರ ಕಾಂಟ್ರಾಕ್ಟ್‌ದಾರ ಎಂಬಾತ ಪೌರ ಕಾರ್ಮಿಕರ ಸಂಘದ ಕಾರಿಯ ಸಹೋದರ ಸಂಬಂಧಿ.

ಧಾರವಾಡದ 6, 7, 8, 10, 11, 1, 4ನೇ ವಾರ್ಡುಗಳಲ್ಲಿ 160 ಜನ ಗುತ್ತಿಗೆ ಪೌರ ಕಾರ್ಮಿಕರನ್ನು ಆಳುತ್ತಿರುವ ಕಾಂಟ್ರಾಕ್ಟ್‌ದಾರ ಕೃಷ್ಣಾ ಅರವೇದ ಪಾಲಿಕೆಯಿಂದ ಪ್ರತಿ ತಿಂಗಳು ಏನಿಲ್ಲವೆಂದರೂ ಐದೂವರೆ ಲಕ್ಷ ರೂಪಾಯಿಗಳನ್ನು ಸುಲಿಯುತ್ತಿದ್ದಾನೆ. ಇನ್ನು 3, 4, 5, 12, 15ನೇ ವಾರ್ಡುಗಳಲ್ಲಿ 116 ಜನರನ್ನು ಕೆಲಸದಾಳಾಗಿ ಇಟ್ಟುಕೊಂಡಿರುವ ಎಸ್.ಕೆ ಸವದಿ ಪ್ರತಿ ತಿಂಗಳು ಐದು ಲಕ್ಷಗಳನ್ನು ಬಳಿದುಕೊಳ್ಳುತ್ತಾನೆ. ಅಂತೆಯೇ, ಹುಬ್ಬಳ್ಳಿಯ ವಾರ್ಡ್ ನಂ. 24 ಹಾಗೂ 52ರಿಂದ ನಾಗರಾಜ ಟಗರಗುಂಟಿ ಪ್ರತಿ ತಿಂಗಳು 1 ಲಕ್ಷದ 98 ಸಾವಿರ ಕೀಳುತ್ತಾನೆ. ಇದರ ಜತೆಗೆ ಇವರ ಸಹೋದರ ಸಂಬಂಧಿಗಳಾದ ವಾಸು ಗುಂಡಪಲ್ಲಿ, ರಾಜು ಗುಂಡಪಲ್ಲಿ, ಕೆ.ಎಂ. ಗುಂಡಪಲ್ಲಿ ಒಟ್ಟು ಐದೂವರೆ ಲಕ್ಷ ರೂಪಾಯಿಗಳನ್ನು ಬಾಚಿಕೊಳ್ಳುತ್ತಾರೆ. ವಾರ್ಡ್ ನಂ.23 ಹಾಗೂ 64ರಿಂದ ಗುರುನಾಥ ವಡಪಲ್ಲಿ ಸುಲಿಯುತ್ತಿರುವುದು 1 ಲಕ್ಷ 47 ಸಾವಿರ. ಉಳಿದಂತೆ ದಲಿತ ನಾಯಕ ಕೊಲಗೊಂಡ ಮಗ ರಮೇಶ ಕೊಲಗೊಂಡನಿಗೆ ವಾರ್ಡ್ ನಂ. 42 ನೀಡಲಾಗಿದ್ದು ಈತ ಪಾಲಿಕೆಯಿಂದ ಪ್ರತಿ ತಿಂಗಳು 94.600 ರೂಪಾಯಿ ಪಡೆದು ಧನ್ಯನಾಗಿದ್ದಾನೆ. ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇನ್‌ಕಂ ಟ್ಯಾಕ್ಸ್ ಕಟ್ಟದೆ, ಪಿಎಫ್, ಇಎಫ್‌ಐ ಕಟ್ಟದೇ ಇರುವ ಯಾವುದಾದರೂ ಉದ್ಯೋಗವೊಂದಿದ್ದರೆ ಅದು ಹುಬ್ಬಳ್ಳಿ ದಾರವಾಡ ಅವಳಿ ನಗರಗಳ ಪೌರಕಾರ್ಮಿಕರನ್ನು ದುಡಿಸಿಕೊಳ್ಳುವುದು ಎಂಬಂತಾಗಿದೆ.


Hubli-Dharwad Municipal Corporation

ಮಂಜೂರು ಮಾಡಿಸಿಕೊಂಡಿರುವ ಬಿಲ್

ಇಂತಹ ದುರಾಡಳಿತದ ಬಗ್ಗೆ ಪೌರಾಡಳಿತ ಸಚಿವರು ಹೇಗೆ ಪ್ರತಿಕ್ರಿಯಿಸುತ್ತಾರೆ?


■ ಹುಬ್ಬಳ್ಳಿಯಾಂವ

▶

ಗರೆಂದರೆ ಇಡೀ ರೋಣದ ಜನ ಬೆಚ್ಚಿಬೀಳುತ್ತಾರೆ. ಕಾರಣ ಗಾಣಿಗರಿಗೆ ಅಂಟಿದ ಗೂಂಡಾ ರೋಗ. ರೋಣದ ಶಾಂತಿಪ್ರಿಯ ಪ್ರಜ್ಞಾವಂತ ಜನ ಕ ಕೋಮು ಸೌಹಾರ್ದ ವೇದಿಕೆ, ದಲಿತ ಸಂಘರ್ಷ ಎಸ್‌ಎಫ್‌ಐ, ಡಿವೈಎಸ್‌ಎಫ್ ಮುಂತಾದ ನೆಗಳ ನೇತೃತ್ವದಲ್ಲಿ ಬೀದಿಗಿಳಿದೇ ಬಿಟ್ಟರು. ಬರ್ 18 ರಂದು ರೇಷ್ಮಾಳ ಸಾವಿಗೆ ಕಾರಣ ನ್ನು ಬಂಧಿಸಬೇಕೆಂದು ಬೃಹತ್ ಪ್ರತಿಭಟನೆ ನಡೆಸಿ ಪರಿಣಾಮವಾಗಿ ಇಡೀ ಪ್ರಕರಣಕ್ಕೆ ಹಿಂದೂ– ಟ್ ಕೋಮು ಬಣ್ಣ ಹಚ್ಚಿ ದಾಂಧಲೆ ನಡೆಸುವ ಕಳಕಪ್ಪನ ಮಾಸ್ಟರ್ ಪ್ಲಾನ್ ಚರಂಡಿ ಸೇರಿತು. ಕಳಕಪ್ಪನ ಒತ್ತಾಯಕ್ಕೆ ಮಣಿದು ಆರೋಪಿಗಳನ್ನು ಬಂಧಿಸಲು ಮೊದಮೊದಲು ಹಿಂಜರಿದಿದ್ದ ಪೊಲೀಸರೂ ಜನಪ್ರತಿರೋಧಕ್ಕೆ ಮಣಿದು ಇಲ್ಲಿಯತನಕ ಮೂವರನ್ನು ಬಂಧಿಸಿದ್ದಾರೆ. ಆದರೆ, ಇಡೀ ಪ್ರಕರಣವನ್ನು ಜೊಳ್ಳುಜೊಳ್ಳಾಗಿ ಹೆಣೆಯುತ್ತಿರುವ ಪೊಲೀಸರು ರೇಷ್ಮಾಳ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ಲಕ್ಷಣಗಳು ಕಾಣುತ್ತಿಲ್ಲ. ರೋಣದ ಜನ ಎಷ್ಟರಮಟ್ಟಿಗೆ ಗಟ್ಟಿಯಾಗಿ ನಿಲ್ಲುತ್ತಾರೆಂಬುದರ ಮೇಲೆ ಎಲ್ಲ ನಿಂತಿದೆ.

■ ಹುರುಳಿಕುಪ್ಪಿ ವಿನಯ್

ಚೆಡ್ಡಿ ತೊಟ್ಟ ತಹಶೀಲ್ದಾರ್



ತಹಶೀಲ್ದಾರ್ ಶಾರದೆ

ಣ್ಣು ದೇವತೆಗೆ ಸಮಾನ ಎಂದೆಲ್ಲಾ ಬೊಬ್ಬೆಯಿಡುವ ಸಂಘಪರಿವಾರಿಗಳು ರೇಷ್ಮಾ ಅಮಾಯಕ ಹೆಣ್ಣುಮಗಳನ್ನು ಪೀಡಿಸಿ ಆಕೆ ನೇಣಿಗೆ ಕೊರಳೊಡ್ಡುವಂತೆ ಮಾಡಿದರು. ಮಾನಗಳಿಂದ ಅವರು ಹೆಣ್ಣನ್ನು ಹೇಗೆ ನಡೆಸಿಕೊಂಡು ಬಂದಿದ್ದಾರೆಂಬ ವಾಸ್ತವವನ್ನು ಿದರೆ ಹೆಣ್ಣಿನ ಬಗೆಗಿನ ಅವರ ಮಾತುಗಳೆಲ್ಲಾ ಬೊಗಳೆ ಮಾತ್ರ ಎಂಬುದು ಬರಿಗೂ ಅರ್ಥವಾಗುವ ವಿಚಾರ. ಆದರೆ, ದುರಂತವೆಂದರೆ ರೋಣದ ತಹಶೀಲ್ದಾರ್ ಪ ಸಿ.ಕೆ.ಶಾರದೆ ಎಂಬ ಹೆಣ್ಣಿಗೆ ಮಾತ್ರ ಅದು ಅರ್ಥವಾದಂತೆ ಕಾಣುತ್ತಿಲ್ಲ.

ಷ್ಮಾ ಆತ್ಮಹತ್ಯೆ ನಡೆದಾಕ್ಷಣ ಇಡೀ ರೋಣದ ಜನ ಜಾತಿ, ಧರ್ಮಗಳ ಬೇಲಿ ಒಕ್ಕೊರಲಿನಿಂದ ಪ್ರತಿಭಟಿಸಿದರು. ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಪತ್ರ ಹಿಡಿದು ಮೂರು ಸಾವಿರಕ್ಕೂ ಹೆಚ್ಚು ಜನ ತಹಶೀಲ್ದಾರ್ ಶಾರದೆಯ ಕಚೇರಿಯ ಮುಂದೆ ರು. ಆದರೆ ಸಂಘಪರಿವಾರಿಗಳ ಪಡಸಾಲೆಯಲ್ಲಿ ಬಿದ್ದು ಹೊರಳಾಡುವ ಶಾರದೆ ಮಾತ್ರ ಆವತ್ತು ಾಗಿದ್ದಳು. ಅದರ ಮರುದಿನವೇ ಧರ್ಮದ ನಂಜು ಹರಡುವಲ್ಲಿ ನಿರತವಾಗಿರುವ ಆರ್‌ಎಸ್‌ಎಸ್‌ನ ಂಭದಲ್ಲಿ ತಾನೊಬ್ಬ ಸರ್ಕಾರಿ ಅಧಿಕಾರಿ ಎಂಬುದನ್ನೂ ಮರೆತು ಆಕೆ ಪ್ರತ್ಯಕ್ಷಳಾಗಿದ್ದಳು!

ಸ್ಥಾನದಲ್ಲಿ ಈಕೆ ಸಂಘಪರಿವಾರದ ತೆಕ್ಕೆಯಲ್ಲಿ ಈ ಪಾಟ ಹೊರಳಾಡುವುದಕ್ಕೆ ಕಳಕಪ್ಪ ಬಂಡಿಯೇ ಕಾರಣ. ನ ಹೆಸರನ್ನು ಕನವರಿಸುತ್ತಲೇ ಇರುವ ಈಕೆಯನ್ನು ರೋಣದ ಜನರು ಕಳಕಪ್ಪನ ಮಾಯಾಜಿಂಕೆ ಎಂದೇ ತ್ತಾರೆ.

ನ್ನೊಂದೆಡೆ ಪೊಲೀಸರ ಹುಡುತನವನ್ನೂ ನೋಡಿ. ಪೊಲೀಸ್ ಭಾಷೆಯಲ್ಲಿಯೇ ಹೇಳುವುದಾದರೆ ಯುಡಿ ದುಕ್ಷಣವೇ ರೇಷ್ಮಾ ಆತ್ಮಹತ್ಯೆ ಪ್ರಕರಣದ ಪೊಲೀಸ್ ಠಾಣೆಯಲ್ಲಿ ದಾಖಲಾಗಬೇಕಿತ್ತು. ಆದರೆ, ಕಳಕಪ್ಪನ ನನ್ನು ಜಳಿಯಲು ಪೊರಕೆ, ಬಕೆಟ್ ಹಿಡಿದು ಸಿದ್ಧವಾಗಿ ನಿಂತಿರುವ ಇಲ್ಲಿನ ಎಸ್.ಆರ್.ಪಾಟೀಲ್ ಎಂಬ ಪಿಎಸ್ಐ ಅಂತಹ ಕೆಲಸ ಮಾಡಲು ಮುಂದಾಗುತ್ತಾನೆಯೆ? ರೋಣದ ಜನ ಬೀದಿಗಿಳಿದ ಮೇಲೆಯೇ ರೇಷ್ಮಾಳ ತಂದೆ ಕೊಟ್ಟ ಕಂಪ್ಲೇಂಟ್ ದಾಖಲಿಸಿಕೊಂಡದ್ದು. ಆದರೇನಂತೆ ಎಫ್‌ಐಆರ್ ತಯಾರಿಸುವಲ್ಲಿ ಶೀಟ್ ತಯಾರಿಸುವಲ್ಲಿ ಕಳಕಪ್ಪನ ಹಿಂಬಾಲಕರನ್ನು ರಕ್ಷಿಸುವುದಕ್ಕೆ ಪಾಟೀಲ್ ಹವಣಿಸುತ್ತಿರುವುದು ಿದ್ದು.

ಚಿಕ್ಕಿದ್ದರೆ ನನ್ನ ಕಾರುಬಾರು ಕಳಕಪ್ಪ ಬಂಡಿ ಎಂಬ ಎಮ್ಮೆಲ್ಲೆ, ಸಂಘಪರಿವಾರಿಗಳ ಭಯೋತ್ಪಾದನೆಗೆ ಬೆಂಬಲವಾಗಿ ದ ತಹಶೀಲ್ದಾರ್ ಶಾರದೆ ಮತ್ತು ಪಿಎಸ್ಐ ಪಾಟೀಲ್ – ಇನ್ನೇನು ಬೇಕು ರೋಣ ಮಸಣವಾಗಲು?

ಗುಲಬರ್ಗಾ: 'ಜಾನುವರಸಿಟಿ'ಯ ಅವಾಂತರ

ಗುಲಬರ್ಗಾ ಯುನಿವರ್ಸಿಟಿಯನ್ನು ಹಿಂದೆ ಹಿರಿಯ ಪತ್ರಕರ್ತರೊಬ್ಬರು ಜಾನುವರಸಿಟಿ ಎಂದು ಕರೆದಿದ್ದರು. ಈ ಹೆಸರು ಬಹುಶಃ ಅಂದಿಗಿಂತಲೂ ಇಂದು ಅತ್ಯಂತ ಸಮರ್ಪಕ ಅನಿಸುತ್ತದೆ.




ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿಯೊಂದಿಗೆ ಗುಲಬರ್ಗಾದಲ್ಲಿ ಶುರುವಾದ ಕಲಬುರ್ಗಿ ವಿಶ್ವವಿದ್ಯಾಲಯ ಈ ಭಾಗದ ಜನಗಳ ಹೆಮ್ಮೆಯ ಬೌದ್ಧಿಕ ಕೇಂದ್ರವಾಗಬೇಕಿತ್ತು. ಆದರೆ ಇಲ್ಲಿಗೆ ಕುಲಪತಿಗಳಾಗಿ ಬಂದ ಬಹುತೇಕ (ಡಾ. ಎನ್. ರುದ್ರಯ್ಯನವರನ್ನು ಹೊರತುಪಡಿಸಿ) ಜನ ಇದನ್ನೊಂದು ಊರುಗೋಲಾಗಿ ಮಾಡಿಕೊಂಡು ತಿಂದುಂಡು ಎದ್ದು ಹೋಗಿದ್ದಾರೆ. ಡಾ. ಬಿ.ಜಿ.ಮೂಲಿಮನಿ ಎಂಬ ಎಬಡ ವಿಶ್ವವಿದ್ಯಾಲಯದ ಕುಲಪತಿಯಾಗಿ ಬಂದ ತರುವಾಯ ಅದರ ಬೌದ್ಧಿಕತೆಯೆ ಮೂಲಿ ಹಿಡಿದುಹೋಗಿದೆ. ಭ್ರಷ್ಟಾಚಾರವಂತೂ ಇಲ್ಲಿ ತನ್ನ ವಿಕಟ ನೃತ್ಯ ಶುರುಹಚ್ಚಿಕೊಂಡಿದೆ.

ಯಾವುದೇ ಡಿಪಾರ್ಟಮೆಂಟಿಗೆ ಹೋದರೂ ಆಯಾ ವಿಭಾಗದ ಮುಖ್ಯಸ್ಥನೊಂದಿಗೆ ವಿದ್ಯಾರ್ಥಿ(ನಿ)ಗಳ ಸಂಬಂಧ ಹೇಗಿದೆ ಎಂಬುದರ ಮೇಲೆಯೇ ಅವನ/ಆಕೆಯ ಅಂಕಗಳು ನಿರ್ಧರಿತವಾಗುತ್ತವೆ. ಇಲ್ಲಿ ಎಂ.ಫಿಲ್ ಹಾಗೂ ಪಿಎಚ್‌ಡಿ ಪದವಿಗಳನ್ನು ಬಿಕರಿಗೆ ಇಟ್ಟಿದ್ದಾರೆ. ವಿದ್ಯಾರ್ಥಿ (ವಿದ್ಯಾರ್ಥಿನಿಯರು)ಗಳು ತಮ್ಮ ಥೀಸೆಸ್ ಹೇಗೆ ಬರೆಯುತ್ತಾರೆ? ಹೇಗೆ ಬರೆದಿದ್ದಾರೆ ಎಂಬುದು ಇಲ್ಲಿ ಮುಖ್ಯವಾಗುವುದಿಲ್ಲ. ಅವರು ಯಾವ ಮಾರ್ಗದರ್ಶಕರ ಕೈಯ್ಯಲ್ಲಿ ಕಲಿಕೆ ಶುರುಮಾಡಿಕೊಂಡಿದ್ದಾರೆ? ಅವರೊಂದಿಗೆ ವಿದ್ಯಾರ್ಥಿಗಳ ಸಂಬಂಧ ಹೇಗಿದೆ? ಎಂಬುದರ ಮೇಲೆ ಅವರ ಭವಿಷ್ಯ ನಿರ್ಧರಿತವಾಗುತ್ತದೆ.



ರಶ್ಮಿ



ಮೂಲಿಮನಿ

ಕೆಲವು ಜನ ಪ್ರತಿಭಾನಿತ್ವ ವಿದ್ಯಾರ್ಥಿ/ನಿಯರುಗಳು ಅತ್ಯಂತ ಕರಾರುವಾಕ್ಕಾಗಿ/ವೈಚಾರಿಕವಾಗಿ ಬರೆದ ಲೇಖನಗಳು ಒಮ್ಮೊಮ್ಮೆ ತಮ್ಮ ಮಾರ್ಗದರ್ಶಕ ಗುರುಗಳೋ ಅಥವಾ ಎಚ್‌ಓಡಿಗಳ ಹೆಸರಿನಲ್ಲೋ ಪ್ರಿಂಟಾಗಿ ಹೊರಬರುವ ಕೌತುಕವನ್ನು ನೀವು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಮಾತ್ರ ಕಾಣಬಹುದು.

ಇದೇನೆ ಇರಲಿ: ಒಂದೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿ ಒಬ್ಬಳು ಎರಡೆರಡು ಪದವಿಗಳನ್ನು ಪಡೆದಿರುವ ಚೋದ್ಯವನ್ನು ನೋಡಬೇಕಾದರೆ ನೀವು ಕೂಡಲೇ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬರಬೇಕು.

ಇದು ಕುಮಾರಿ ರಶ್ಮಿ ವೀರಣ್ಣ ಎಂಬ ವಿದ್ಯಾರ್ಥಿನಿಯ ಕತೆ. ಈಕೆ 2005-2006ನೇ ಸಾಲಿನಲ್ಲಿ (ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ) ಗುಲಬರ್ಗಾದ ಚಾಂದಬೀಬಿ ಬಿ.ಎಡ್. ಕಾಲೇಜಿನ ವಿದ್ಯಾರ್ಥಿನಿಯಾಗಿ 2006ರ ಫೆಬ್ರುವರಿ 16 ರಂದು ಪದವಿಯನ್ನು (ಅಂಕಪಟ್ಟಿ ರಿಜಿಸ್ಟರ್ ಸಂಖ್ಯೆ: 5804070) ಮುಗಿಸಿದ್ದಾಳೆ. ಆದರೆ ಇದೇ ಸಾಲಿನಲ್ಲಿ (2005-2007) ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ವಿಭಾಗದಲ್ಲಿ ಎಂ.ಎ. ಕೋರ್ಸಿಗೆ ಪ್ರವೇಶ ಪಡೆದು ಆಗಸ್ಟ್ 1, 2007 ರಂದು ಎಂ.ಎ. (ಅಂಕಪಟ್ಟಿ ರಿಜಿಸ್ಟರ್ ಸಂಖ್ಯೆ: 0671877) ಪದವಿಕೂಡ ಪಡೆಯುತ್ತಾಳೆ. ಹೀಗೆ ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡೂ ಕಡೆ ಅಟೆಂಡ್ ಆಗಿ ತನ್ನ ಓದನ್ನು ಮುಗಿಸುತ್ತಾಳೆ!

ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ ಇದೇ ರಶ್ಮಿ ಗುಲಬರ್ಗಾದಲ್ಲಿಯ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಲೆ (ತಿಂಗಳಿಗೆ ಸುಮಾರು 10 ಸಾವಿರ ಸಂಬಳ ಪಡೆಯುತ್ತ) ಎಂ.ಫಿಲ್ ಪದವಿಗೆ ಪ್ರವೇಶವನ್ನು ಪಡೆದುಕೊಂಡಿದ್ದಾಳೆ. ನಿಜಕ್ಕೂ ಇದು ಅಸಾಧಾರಣ ಚಮತ್ಕಾರವೇ ಸರಿ. ಏಕೆಂದರೆ ಸರಕಾರಿ ಇಲ್ಲವೆ ಅರೆಸರಕಾರಿ ಹುದ್ದೆಯಲ್ಲಿದ್ದುಕೊಂಡು (ಶಿಕ್ಷಣ ಇಲಾಖೆ ಹೊರತುಪಡಿಸಿ) ಆದಾಯದ ಮೂಲ ಇರುವವರಿಗೆ ಎಂ.ಫಿಲ್ ಪದವಿ ಮಾಡಲು ಬರುವುದಿಲ್ಲ. ಆದರೂ ರಶ್ಮಿಯ ಗೈಡ್ ಆಗಿರುವ ಡಾ.ಡಿ.ಬಿ.ನಾಯಕ್‌ಗೆ ಇದು ಗೊತ್ತಿದ್ದರೂ ಆಕೆಗೆ ಅವಕಾಶನೀಡಿ, ಇನ್ನೊಬ್ಬ ಅರ್ಹ ವಿದ್ಯಾರ್ಥಿ/ನಿಯರಿಗೆ ವಂಚಿಸುತ್ತಾರೆಂದರೆ ಇದರಲ್ಲಿ ಎಂಥ ಗೋಲ್‌ಮಾಲ್ ನಡೆದಿರಬೇಕೆಂದು ನೀವೇ ಊಹಿಸಿ.

ಅದೇನೇ ಇದ್ದರೂ ಡಾ.ಡಿ.ಬಿ.ನಾಯಕ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರ ಚಾಳಿ ಗೊತ್ತಿರುವ ವಿಶ್ವವಿದ್ಯಾಲಯದ ಕಂಬ ಕಂಬಗಳು ಈ ಚಮತ್ಕಾರ ಕುರಿತಂತೆ ಬೇರೆಯದೆ ಆದ ಮಾತುಗಳನ್ನು ಧ್ವನಿಸುತ್ತಿವೆ. ■

ಪರವಾನಗಿ ಇಲ್ಲದ ಗುಲಬರ್ಗಾ ಐಟಿಐ ಕೇಂದ್ರಗಳು


ಕರಾಮತ್ತುಗಳಿಗೂ ಕಲಬುರ್ಗಿ ಜಿಲ್ಲೆಗೂ ಅವಿನಾಭಾವ ಸಂಬಂಧ. ಇಲ್ಲಿ ಹೇಳುವ ಅರಸ–ಕೇಳುವ ಪ್ರಧಾನಿ ಯಾರೂ ಇಲ್ಲ. ಇಲ್ಲಿ ಬಹುತೇಕ ಎಲ್ಲರೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ಕಾಲ ಕೆಳಗೆ ಹಾಕಿ ಕುಣಿಯುತ್ತಾರೆ. ಕಾನೂನು ಕಟ್ಟಳೆಗಳೆಲ್ಲ ಪುಸ್ತಕದ ಬದನೆಕಾಯಿ. ಜೋರುಧ್ವನಿ ಮತ್ತು ದುಡ್ಡು ಇಲ್ಲದೆ ಇದ್ದರೆ ನಿಮಗೆ ಇಲ್ಲಿ ಏನೂ ಗಿಟ್ಟುವುದಿಲ್ಲ. ಇವೆರಡೂ ನಿಮ್ಮಲ್ಲಿದ್ದರೆ ಕಾನೂನುಗಳನ್ನೆಲ್ಲ ನಿಮ್ಮ ಪರವಾಗಿ ಬಗ್ಗಿಸಿ ನಿಮ್ಮ ಪರವಾಗಿ ಕೊಡಲಾಗುತ್ತದೆ. ಇಲ್ಲಿಗೆ ಹೊಸದಾಗಿ ಬಂದ ಅಧಿಕಾರಿ ಮೊದಮೊದಲು ಇದೇನು ಇಲ್ಲಿಗೆ ಬಂದು ಎಡವಟ್ಟಾಯಿತಲ್ಲ?! ಎಂದು ಆಶ್ಚರ್ಯಪಡುತ್ತಾನೆ. ಆದರೆ ಬರುಬರುತ್ತ ಹೊಂದಿಕೊಂಡು ಕಿವಿಕಿತ್ತಿ ದಬ್ಬಿದರೂ ಇಲ್ಲಿಂದ ಹೋಗಲಾರದವನಾಗುತ್ತಾನೆ.

ಇಂಥ ಅಧಿಕಾರಿಗಳ ಸೋಂಬೇರಿ ನೀತಿಯಿಂದ ಗುಲಬರ್ಗಾ ಜಿಲ್ಲೆಯ ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಐ)ದ ಶಿಕ್ಷಣ ಸಂಪೂರ್ಣ ಎಕ್ಕುಟ್ಟಿ ಹೋಗಿದೆ. ಗುಲಬರ್ಗಾ ಜಿಲ್ಲೆಯಾದ್ಯಂತ ಈಗ ಸರಕಾರದ ಪರವಾನಗಿ ಇಲ್ಲದೆ ನಾಯಿಕೊಡೆಗಳಂತೆ ಐಟಿಐ ಕೇಂದ್ರಗಳು ತಲೆ ಎತ್ತಿ ನಿಂತಿವೆ. ಈ ಬಗ್ಗೆ ಸಂಬಂಧಿಸಿದ ಜೆ.ಡಿ. ಶಿವಲಿಂಗಮೂರ್ತಿಯನ್ನು ಸಂಪರ್ಕಿಸಿದರೆ ಎಲ್ಲವೂ ಹರಹರ, ಶಿವಶಿವ ಎಂಬ ಉತ್ತರ ಬರುತ್ತದೆ.



ಪರಮೇಶ್ವರಪ್ಪ

ಹೀಗಾಗಿ ಪರವಾನಗಿ ಇಲ್ಲದ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಜನ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿಗಳನ್ನು ಡೊನೇಷನ್ ರೂಪದಲ್ಲಿ ಸುಲಿದು ಅವರ ಭವಿಷ್ಯದ ಜೊತೆ ಹುಡುಗಾಟವಾಡುತ್ತಿದ್ದಾರೆ. ಈಗಾಗಲೆ ನಾಲ್ಕಾರು



ಕಡೆ ಎರಡೆರಡು ವರ್ಷ ಐ.ಟಿ.ಐ. ಕಾಲೇಜುಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಪಂಗನಾಮ ಹಾಕಿ ಓಡಿಹೋದವರೂ ಇದ್ದಾರೆ.

ಇಂಥ ಬೇವಾರ್ಸಿಗಳ ಸಾಲಿಗೆ ಸೇರಲು ರಂಗಂಪೇಟೆಯ ಜ್ಞಾನೋದಯ ಐ.ಟಿ.ಐ ಹಾಗೂ ಭೀಮರಾಯನಗುಡಿಯ ಗೊಲ್ಲಾಳೇಶ್ವರ ಐಟಿಐ ಸಜ್ಜಾಗಿವೆ. ಪರಮೇಶ್ವರಪ್ಪ ಕರದಿ ಎಂಬ ಐನಾತಿ ಆಸಾಮಿ (ಏನೂ ಅರಿಯದ ನಾಲ್ಕೆಂಟು ಸ್ಥಳೀಯ ಹುಡುಗರನ್ನು ಹಿಡಕೊಂಡ ಅವರ ಮೂಲಕ) ಈಗಾಗಲೇ ಎರಡೂ ಸಂಸ್ಥೆಗಳ ಹೆಸರಿನ ಮೇಲೆ ಸಾಕಷ್ಟು ಡೊನೇಷನ್ ಕಲೆಕ್ಟ್ ಮಾಡಿದ್ದಾನೆ. ಆದರೆ ಸರಕಾರದ ಪರವಾನಗಿ ಪಡೆದಿಲ್ಲ. ಸ್ವಂತದ್ದಾಗಲಿ ಅಥವಾ ಲೀಸ್ ಮೇಲೆ ಪಡೆದದ್ದಾಗಲಿ ಸ್ಥಳವಿಲ್ಲ. ಐಟಿಐಗೆ ಸಂಬಂಧಿಸಿದ ಯಾವುದೇ ಇನ್ಸ್ಟ್ರೂಮೆಂಟ್ಸ್‌ಗಳಿಲ್ಲ. ಆದರೂ ಪರವಾನಗಿ ಪಡೆದವರಿಗಿಂತಲೂ ಅವರ ಅಬ್ಬರ ಟಬರಿನಲ್ಲಿ ವಂಚಿಸುತ್ತಿದ್ದಾನೆ.

ಇಂಥ ಅವಿವೇಕಿಗೆ ಪಾಠ ಕಲಿಸುವ ತಾಕತ್ತು ಐ.ಟಿ.ಐ ಮೇಲಧಿಕಾರಿಗಳಿಗೆ ಇಲ್ಲವೆ ?

■ ವಿಶ್ವಾರಾಧ್ಯ ಸತ್ಯಂಪೇಟೆ

ಪೊನ್ನಮ್ಮಾಳರ ಜೊತೆಯಲ್ಲಿ...!

■ ■ ■ ಕಿ. ಚಂದ್ರೇಗೌಡ

ಶಿವಮೊಗ್ಗದ ಸಮಾಜವಾದಿಗಳು ಪೊನ್ನಮ್ಮಾಳ್ ಮನೆ ಮುಂದಾಸಿ ಹೋಗಲು ಅಳುಕುತ್ತಿದ್ದರು. ಮನೆ ಮುಂದಿದ್ದ ಗಿಡಮರಗಳ ನೆರಳು ಬೆಳಕಲ್ಲಿ ತಿಳ್ಳಗೆ ತಿರುಗಾಡುತ್ತಿದ್ದ ಪೊನ್ನಮ್ಮಾಳ್ ಕಣ್ಣಿಗೇನಾದರೂ ತಳೀಕಾಲದ ಸಮಾಜವಾದಿಗಳು ಬಿದ್ದರೆ "ಲೇ ಬಾರೋ ಇಲ್ಲಿ, ಏನು ಮಾಡ್ತಯಿದ್ದಿಯೋ? ಈಗ್ಲು ಕುಡಿತಾ ಯಿದ್ದಿಯಾ? ಕುಡಿಯೋದೆ ಆದ್ರೆ ನನ್ನನ್ನ ಮಾತನಾಡುಸ ಬೇಡ" ಎಂದು ಹೇಳುತ್ತಿದ್ದರು. ಇಂತಹ ಕಟು ಮಾತುಗಳನ್ನು ಪಟೇಲರಿಂದ ಹಿಡಿದು ಕೋಣಂದೂರು ಲಿಂಗಪ್ಪರವರೆಗೂ ಎಲ್ಲರೂ ಕೇಳಿದ್ದಾರೆ. ಅಷ್ಟೇ ಅಲ್ಲ ಇಂತಹ ಯಾವ ಚಟಗಳೂ ಇಲ್ಲದ ಕಡಿದಾಳು ಶಾಮಣ್ಣನವರೂ ಕೂಡ ಪೊನ್ನಮ್ಮಾಳರನ್ನು ಭೇಟಿಯಾಗಲು ಹೋಗುವ ಮುನ್ನ ತಪ್ಪು ಮಾಡಿದ ಶಾಲಾ ಬಾಲಕನಂತೆ ಅಳುಕುತ್ತಲೇ ಹೋಗುತ್ತಿದ್ದರು. ಆದರೂ ಒಂದು ಬೈಗುಳವಂತೂ ಇದ್ದೇ ಇರುತ್ತಿತ್ತು.

ಸಮಾಜವಾದ ಎಂಬ ಸಿದ್ಧಾಂತಕ್ಕೆ ಮೂರ್ತ ರೂಪವೇನಾದರೂ ಇದ್ದರೆ, ಅದು ಪೊನ್ನಮ್ಮಾಳ್ ಎಂಬುದು ಎಲ್ಲ ಸಮಾಜವಾದಿಗಳಿಗೂ ಮನವರಿಕೆ ಯಾದ್ದರಿಂದಲೋ ಏನೋ, ಅವರೆಲ್ಲ ಪೊನ್ನಮ್ಮಾಳರಿಗೆ ದೂರದಿಂದಲೇ ಕೈಮುಗಿದು ದೂರವೇ ಉಳಿದು ಬಿಟ್ಟರು. ಆದರೇನು ಪೊನ್ನಮ್ಮಾಳರು ಮನೆಯಲ್ಲಿ ಕೂರಲೇ ಇಲ್ಲ, ಎಲ್ಲೇ ಪ್ರತಿಭಟನೆ ಹೋರಾಟಗಳಿದ್ದರೂ ಅಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಅವರಿದ್ದ ಜಾಗದಲ್ಲಿ ನ್ಯಾಯವಿದೆ. ಆ ಹೋರಾಟ ಖಂಡಿತ ಅನ್ಯಾಯದ ವಿರುದ್ಧದ ಹೋರಾಟ ಎಂಬುದು ಸರಕಾರಕ್ಕೆ ಮನವರಿಕೆಯಾಗುವಷ್ಟು ಪ್ರಖರವಾಗಿತ್ತು.

ಒಮ್ಮೆ ಮಹಿಳಾ ಜಾಗೃತಿ ಹೋರಾಟದ ಹೆಣ್ಣುಮಕ್ಕಳಿಗೆ ಪೊಲೀಸರು ತುಂಬಾ ಕಿರುಕುಳ ನೀಡಿದ್ದರು. ಇದರಿಂದ ಸಿಟ್ಟಾದ ಪೊನ್ನಮ್ಮಾಳ್ ಡಿ.ಸಿ. ಕಚೇರಿಗೆ ಹೋದರು. ಪೊನ್ನಮ್ಮಾಳ್ ಸಿಟ್ಟಾಗಿರುವುದು ಅವರ ಮುಖದಲ್ಲಿ ಎದ್ದು ಕಾಣಿಸುತ್ತಿರಲಿಲ್ಲ, ಅತ್ಯಂತ ತಾಳ್ಮೆಯಿಂದಲೇ ಕಾಣಿಸಿಕೊಳ್ಳುತ್ತಿದ್ದ ಅವರ ಮಾತು ಹೊರಬಂದಾಗಲೇ ಅವರ ಸಿಟ್ಟು ಇತರರಿಗೆ ಗೊತ್ತಾಗುತ್ತಿತ್ತು. ಆದ್ದರಿಂದ ಶಿವಮೊಗ್ಗದ ಡಿ.ಸಿ. ತುಷಾರ್ ಗಿರಿನಾಥ್ ದೂರದಲ್ಲೇ ಕುಳಿತು ಏನು ಎಂಬಂತೆ ಪೊನ್ನಮ್ಮಾಳರನ್ನು ನೋಡಿದರು. "ಏ, ಬಾರಪ್ಪ ಇಲ್ಲಿ" ಎಂದರು ಪೊನ್ನಮ್ಮಾಳ್.

ಡಿ.ಸಿ. ಸಾಹೇಬರು ಈ ಸಂಬೋಧನೆಯನ್ನು ನಿರೀಕ್ಷಿಸಿರಲಿಲ್ಲವೇನೋ? ಅವರ ಡಿ.ಸಿ.ಗಿರಿ ಅರ್ಧಕ್ಕಿಳಿಯಿತು. ಎದ್ದು ಬಂದು ವಿಧೇಯತೆಯಿಂದ ನಿಂತರು. "ನೋಡಪ್ಪ ನನ್ನ ಮೊಮ್ಮಗನ ವಯಸ್ಸು ನಿನಗೆ" ಎಂದರು. ಸಾಹೇಬರು ತಮ್ಮ ನಡವಳಿಕೆಯಲ್ಲಿ ಮೊಮ್ಮಗನೇ ಆಗಿಹೋದರು. "ನಮ್ಮ ಮಹಿಳಾ ಜಾಗೃತಿ ಹೆಣ್ಣುಮಕ್ಕಳಿಗೆ ಪೊಲೀಸ್‌ನೋರು ತುಂಬಾ ಕಿರುಕುಳ ಕೊಡ್ತಾರಂತೆ. ಹೆಣ್ಣುಮಕ್ಕಳು ಪ್ರತಿಭಟನೆ ಮಾಡ್ತವೆ ಅಂದ್ರೆ ಅನ್ಯಾಯ ಆಗಿರಲೇ ಬೇಕಲ್ಲವಾ? ನಿಮ್ಮವರು ಕಾನೂನು ಪ್ರಕಾರ ನಡೆದುಕೊಳ್ಳಲಿ. ಕಿರುಕುಳ ಕೊಡೋದೇಕೆ? ಹೇಳವುರಿಗೆ" ಎಂದರು.

ಕೂಡಲೇ ಡಿ.ಸಿ. ಸಾಹೇಬರು ಪೊಲೀಸರಿಗೆ ಉಗಿದರು. ಆನಂತರ ಪೊನ್ನಮ್ಮಾಳ್ ಹೇಳಿದ ಕೆಲಸವನ್ನು ವಿಧೇಯತೆಯಿಂದ ಮಾಡುತ್ತಿದ್ದರು.

ಪೊನ್ನಮ್ಮಾಳರ ಆಲೋಚನೆಯಲ್ಲಿ ಯಾವ ಗೊಂದಲವೂ ಇರಲಿಲ್ಲ, ಆದ್ದರಿಂದ ಅವರು ಖಚಿತವಾಗಿ ಮಾತನಾಡುತ್ತಿದ್ದರು. ಅವರು ಕಟುವಾಗಿ ಮಾತನಾಡಿದರೂ ಕೂಡಲೇ ಹಲ್ಲಿಲ್ಲದ ಮಗುವಿನ ನಗುಬೀರುತ್ತಿದ್ದರು. ಅವರನ್ನ ಭೇಟಿ ಮಾಡಿ ಬಂದರೆ, ಗಾಂಧೀಜಿ, ಲೋಹಿಯಾ, ಗೋಪಾಲಗೌಡರ ಕಾಲದ ಒಂದು ಇತಿಹಾಸವನ್ನೇ ನೋಡಿ ಬಂದಂತಾಗುತ್ತಿತ್ತು. ಒಮ್ಮೆ ಶಿವಮೊಗ್ಗಕ್ಕೆ ಬಂದ ಕಾಳೇಗೌಡ ನಾಗವಾರರು ಪೊನ್ನಮ್ಮಾಳ್‌ರನ್ನು ನೋಡಬೇಕೆಂದರು. ನಾನು ಮತ್ತು ದಿವಾಕರ ಹೆಗಡೆ ಅವರನ್ನು ಕರೆದುಕೊಂಡು ಹೋದೆವು. ಕಾಳೇಗೌಡರಿಗೆ ಅದು ಒಂದು ರೀತಿಯ ಸಾರ್ಥಕದ ಕ್ಷಣ.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗೌರಿ ಲಂಕೇಶ್ ಬಂದಿರುವುದು ಗೊತ್ತಾಗಿ ಆಟೋ ಮಾಡಿಕೊಂಡು ಗೌರಿ ಇರುವಲ್ಲಿಗೆ ಬಂದಿದ್ದರು. ಪೊನ್ನಮ್ಮಾಳ್ ವಾಸಮಾಡುತ್ತಿರುವ ಬೀದಿಯಲ್ಲೇ ಇದ್ದ ಪಿ.ಲಂಕೇಶರನ್ನು ಚೆನ್ನಾಗಿ ಬಲ್ಲ ಪೊನ್ನಮ್ಮಾಳ್, ಆತನ ಮಗಳೇಗಿರಬಹುದೆಂಬ ಕುತೂಹಲದಿಂದ ಬಂದಿದ್ದರು. ಹಾಗೆಯೇ ಸಮಾಜವಾದಿ ಹೋರಾಟಗಾರರಾದ ಕಿಶನ್ ಪಟ್ನಾಯಕ್ ಬಂದಾಗಲೂ ಪೊನ್ನಮ್ಮಾಳ್ ಅವರನ್ನು ಹುಡುಕುತ್ತಾ ಬಂದಿದ್ದರು. ರವಿ ಎಂಬ ಆಟೋ ಹುಡುಗ ಅವರನ್ನು ಯಾವಾಗಲೂ ಕರೆದುಕೊಂಡು ಹೋಗಿ ಮತ್ತೆ ಮನೆಗೆ ತಲುಪಿಸುತ್ತಿದ್ದ. ಅವನಂತೂ ಪೊನ್ನಮ್ಮಾಳರಿಗೆ ಸ್ವಂತ ಮಗನಿಗಿಂತಲೂ ಹೆಚ್ಚಿನವನಾಗಿದ್ದ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಕ್ಕೆ ಚ್ಯುತಿಬಾರದಂತೆ ಬದುಕಿ ಸತ್ತವರಲ್ಲಿ ಸದಾಶಿವರಾಯರು, ಶಂಕರನಾರಾಯಣಭಟ್ಟರು ಮತ್ತು ಪೊನ್ನಮ್ಮಾಳ್ ಈ ಮೂರೇ ಜನರಿರಬೇಕು. ಕಾಂಗ್ರೆಸ್, ದಳ, ಬಿಜೆಪಿ ಸೇರಿ ಹಾಳಾದವರು ಇವರನ್ನು ಭೇಟಿಯಾಗಲು ಹೆದರುತ್ತಿದ್ದರು. ಆದರಲ್ಲೂ ಪ್ರತಿಭಟನೆಯ ಮುಂಚೂಣಿಯಲ್ಲಿದ್ದು ಎಲ್ಲರನ್ನೂ ಟೀಕಿಸಿಯೂ ಗೌರವ ಉಳಿಸಿಕೊಂಡವರೆಂದರೆ ಪೊನ್ನಮ್ಮಾಳರು.

ನಮ್ಮೆಲ್ಲರ ಹಿರಿಯ ಗೆಳೆಯರಾದ ಎಂ.ಪಿ. ಪ್ರಕಾಶ್ ಹಡಗಲಿಯ ರಂಗಭಾರತಿ ಟ್ರಸ್ಟಿನಿಂದ ಅವರ ತಂದೆಯವರಾದ ಮ.ಮ. ಪಾಟೀಲ್ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಕೊಡುತ್ತ ಬಂದಿದ್ದಾರೆ. ಲೇಖಕರು, ಕಲಾವಿದರು ಮತ್ತು ಸಮಾಜಸೇವಕರಿಗೆ ಕೊಡುತ್ತಿರುವ ಈ ಪ್ರಶಸ್ತಿಗೆ ಕಳೆದ ವರ್ಷ ಪೊನ್ನಮ್ಮಾಳ್‌ರನ್ನು ಆಯ್ಕೆ ಮಾಡಿದರು. ಅಲ್ಲದೆ ನನಗೆ ಫೋನ್ ಮಾಡಿ "ಪೊನ್ನಮ್ಮಾಳರಿಗೆ ಈ ವಿಷಯ ತಿಳಿಸಿ ಹಡಗಲಿಗೆ ಕರೆದುಕೊಂಡು ಬರಬೇಕು" ಎಂದು ಆ ಜವಾಬ್ದಾರಿಯನ್ನು ನನಗೆ ವಹಿಸಿದರು. ನಾನು ಈ ವಿಷಯ ಹೊತ್ತು ಪೊನ್ನಮ್ಮಾಳ್‌ರ ಮನೆಗೆ ಹೋದೆ.

ಮರಗಿಡದಿಂದ ಆವೃತವಾದ ತಣ್ಣಗಿನ ಆ ಮನೆಯ ಬಾಗಿಲಲ್ಲೇ ನಿಂತಿದ್ದರು. ಅವರನ್ನು ನೋಡಿ ಬಹಳ ದಿನವಾದ್ದರಿಂದ ಏಕೋ ನನ್ನ ಕೈಗಳು ನೇರ ಅವರ ಪಾದದ ಕಡೆ ಹೋದವು. "ಇದು ಬೇರೆ ಏನೋ" ಎಂದು ನಕ್ಕರು. ಅದೇ ಹಲ್ಲಿಲ್ಲದ ಮಗುವಿನ ನಗು. ಇನ್ನೊಂದಿಷ್ಟು ನಗಿಸಿ ಆ ಮುಖ ನೋಡಬೇಕೆನಿಸಿತು. ಆದರೆ ನಾನು ಹೊತ್ತು ತಂದ ವಿಷಯದಿಂದ ಅವರೊಂದಿಷ್ಟು ಕೆರಳಿದರು. "ಅವನಿಗೇನು ಪ್ರಶಸ್ತಿ ಕೊಡ್ತನೆ ಅವನು? ಇಂತ ಸರಕಾರದಲ್ಲಿ ಇದ್ದಾನಲ್ಲ, ನಾಚಿಕೆ ಬೇಡವ ಅವನಿಗೆ?" ಎಂದರು. "ಬಹಳ ಒಳ್ಳೆ ಸಜ್ಜನ ರಾಜಕಾರಣಿ ಹೆಸರಲ್ಲಿ ಕೊಡ್ತಾಯಿರೊ ಪ್ರಶಸ್ತಿ ಅದು. ಆ ಪ್ರಶಸ್ತಿಗೂ ಎಂ.ಪಿ. ಪ್ರಕಾಶರ ಈಗಿನ ರಾಜಕಾರಣಕ್ಕೂ ಸಂಬಂಧಯಿಲ್ಲ. ನೀವೇನೂ ಮಾತಾಡಂಗಿಲ್ಲ, ಇಲ್ಲಿಂದ ಕರಕೊಂಡೋಗಿ ಮನಃ ಕರಕೊಂಡು ಬಂದುಬಿಡ್ತೀವಿ" ಎಂದೆ. "ಎಲ್ಲಿ ಫೋನ್ ತಗೋ ಅವುನಿಗೆ" ಎಂದರು. ಪ್ರಕಾಶ್‌ಗೆ ಫೋನ್ ಮಾಡಿ, ಅವರ ಕೈಗೆ ಕೊಟ್ಟೆ. ಆ ಕಡೆಯಿಂದ ಪ್ರಕಾಶ್ ಏನು ಮಾತನಾಡಿದರೋ ಏನೋ ಪೊನ್ನಮ್ಮಾಳ್ ಸಮಾಧ[ಾನ]ದಿಂದ "ಆಯ್ತು ಬರ್ತಿನಿ" ಎಂದು ಒ[ಪ್ಪಿ]ಕೊಂಡರು.

ಎಂಬತ್ತಾರು ವರ್ಷದ ಪೊನ್ನಮ್ಮಾಳರ[ನ್ನು] ಜೋಪಾನವಾಗಿ ಕರೆದುಕೊಂಡುಹೋಗಿ ಪ್ರಶಸ್ತಿ ಕೊ[ಡಿಸಿ] ಕರೆದುಕೊಂಡು ಬರಬೇಕಿದ್ದುದರಿಂದ ಬ್ರೈಟ್ ಶಂ[ಕರ್] ಒಳ್ಳೆಯ ವಾಹನಮಾಡಿಕೊಟ್ಟರು. ಬೆಳಗ್ಗೆಯೇ [ನ]ಮಗಳು ಸಂಧ್ಯಾ ಮತ್ತು ತಂಗಿ ಮಗಳು ಪವಿತ್ರಳೊಂ[ದಿಗೆ] ಪೊನ್ನಮ್ಮಾಳ್ ಮನೆಗೆ ಓಡಿದೆ. ಅವಸರದಿಂದ [...] ಹೆಣ್ಣುಮಕ್ಕಳು ಸರಿಯಾಗಿ ತಲೆಬಾಚಿರಲಿಲ್ಲ, ಎರ[ಡೂ] ಹೆಣ್ಣುಮಕ್ಕಳಿಗೆ ಸರಿಯಾಗಿ ತಲೆಬಾಚಿ ಸಖಿಯರ[ಂತೆ] ಅಕ್ಕಪಕ್ಕ ಕೂರಿಸಿಕೊಂಡು ಹೊರಟರು.

ನಾನು ಪ್ರಯಾಣದುದ್ದಕ್ಕೂ ಪ್ರಶ್ನೆ ಕೇಳುವವನ[ು]. ಆದರೆ ಅವರ ಬದುಕಿನ ಅಪರೂಪದ ಘಟನೆ[ಗಳ] ಬಗ್ಗೆ ಅವರೆಂದೂ ಉತ್ಸಾಹದಿಂ[ದ] ಹೇಳಿಕೊಳ್ಳುವವರಾಗಿರಲಿಲ್ಲ. ಗಾಂಧೀಜಿಯ ಭೇ[ಟಿ,] ಲೋಹಿಯಾರೊಂದಿಗೆ ಕಾಗೋಡು ಚಳವಳಿ[ಯ] ಹೋರಾಟ ಮಾಡಿದ್ದು, ಎಲ್ಲದರ ಬಗ್ಗೆಯ[ೂ] ಸಹಜವಾಗಿ "ಸುಮ್ಮನಿರು ಅತ್ಲಗೆ" ಎಂಬ[ಂತೆ] ಚುಟುಕಾಗಿ ಉತ್ತರಿಸುತ್ತಿದ್ದರು. ನಮ್ಮ ವಾಹ[ನ] ಹೋಗುತ್ತಿದ್ದ ದಾರಿಯೂ ಅವರು ಹಿಂದೆ ತಿರುಗಾಡಿ[ದ] ದಾರಿಯಾಗಿತ್ತು. ಅಷ್ಟರಲ್ಲಿ ಡ್ರೈವರ್ ತಾನೂ ಚರ್ಚೆಯ[ಲ್ಲಿ] ಭಾಗವಹಿಸುವ ಉಮೇದಿನಿಂದ ಅಸಂಬದ್ಧವಾಗಿ, "[...] ಮುಸ್ಲಿಮರಷ್ಟು ಒಗ್ಗಟ್ಟು ನಮ್ಮಲ್ಲಿ ಬರದಿಲ್ಲ ಬಿಡಿ" ಎಂದ. "ಅಂಗಿಲ್ಲದೆಯಿದ್ರೆ ಬಿಡತಿದ್ದರ ನೀವು? ಅವ[ರು] ಒಗ್ಗಟ್ಟಾಗಿರದ್ರಿಂದಲೆ ಉಳಕೊಂಡಿರೋದು. ಅಟ್ರಾಸಿ[ಟಿ] ಕೇಸ್ ಇಲ್ದಯಿದ್ರೆ ಪ್ರತಿದಿನ ದಲಿತರ ಮೇಲೆ ಹ[ಲ್ಲೆ] ಮಾಡತಿದ್ರಿ" ಎಂದು ನಕ್ಕರು.

ಹಡಗಲಿ ಐ.ಬಿ.ಯಲ್ಲಿ ಉಳಿದುಕೊಂ[ಡಾಗ] ಪೊನ್ನಮ್ಮಾಳ್ ಒಂದಿಷ್ಟು ಮೊಸರನ್ನ ಬಿಟ್ಟರೆ ಇನ್ನೇನ[ನ್ನೂ] ತಿನ್ನಲಿಲ್ಲ, ತುಂಬಾ ಮಿತವಾದ ಆಹಾರ ತೆಗೆದುಕೊಳ್ಳುತ್ತಿ[ದ್ದ] ಅವರು ತಿರುಗಾಡಲು, ಮಾತನಾಡಲು ಮಾ[ತ್ರ] ಸಾಕಾಗುವಷ್ಟು ಆಹಾರ ತೆಗೆದುಕೊಳ್ಳುವಂ[ತೆ] ಕಾಣುತ್ತಿದ್ದರು. ಅಷ್ಟರಲ್ಲಿ ಎಂ.ಪಿ. ಪ್ರಕಾಶ್ ಬಂ[ದು] ನೇರ ಪೊನ್ನಮ್ಮಾಳರ ಕಾಲಿಗೆ ನಮಸ್ಕರಿಸಿದರು. [...] ರಾಜ್ಯದ ಗೃಹಮಂತ್ರಿ ಇಷ್ಟು ಭಯಭಕ್ತಿಯಿಂದ ಕಾಲಿ[ಗೆ] ನಮಸ್ಕರಿಸಬೇಕಾದರೆ ಆ ಯಮ್ಮ ಅವರ ತಾಯಿಯೆ [...] ಇರಬೇಕೆಂದು ಪ್ರಕಾಶ್ ಜೊತೆ ಬಂದಿದ್ದ ಅಂದಿ[ನ] ಸಾರಿಗೆ ಸಚಿವ ಅನುಮಾನ ವ್ಯಕ್ತಪಡಿಸಿದ. ಪಾ[...] ಎಮರ್ಜೆನ್ಸಿ ಜನತಾ ಪಕ್ಷದ ಉದಯ, ಇದೇನೊಂ[ದೂ] ಗೊತ್ತಿಲ್ಲದ ಆತ ಗೆದ್ದಕೂಡಲೇ ಸಾರಿಗೆ ಮಂತ್ರಿಯಾಗಿ[...] ಬಸ್ಸಿನ ಟೈರಿನಂತೆ ಕಾಣುತ್ತಿದ್ದ ಆತನಿಗೆ ಸರಿಯಾ[ಗಿ] ಎಂ.ಪಿ. ಪ್ರಕಾಶರೇ ಅರ್ಥವಾಗಿರಲಿಲ್ಲ ಎಂದ ಮೇ[ಲೆ] ಇನ್ನು ಪೊನ್ನಮ್ಮಾಳ್ ಯಾರೆಂದು ಹೇಗೆ ವಿವರಿಸುವುದ[ು]. ಅಷ್ಟಕ್ಕೂ ಆತ ದೇವೇಗೌಡರ ಒಡ್ಡೋಲಗದವನಾದ್ದರಿಂ[ದ] ಇಂತಹ ಮಾಹಿತಿಗಳ ಅಗತ್ಯವೂ ಆತನಿಗೆ ಇರಲಿ[ಲ್ಲ]. ಆದರೂ ಅವರು ಪೊನ್ನಮ್ಮಾಳ್, ಗಾಂಧೀಜಿ [...] ಆಡಿಸಿದ ಮಗು ಎಂಬುದನ್ನು ತಿಳಿದುಕೊಂಡು "ಇ[...] ಯಾವುದೋ ಮ್ಯೂಜಿಯಂನಲ್ಲಿಡುವ ವಸ್ತು" ಎಂಬ[ಂತೆ] ಸುಮ್ಮನಾದ.

ಸನ್ಮಾನದ ನಂತರ ಪೊನ್ನಮ್ಮಾಳ್ ಶಿವಮೊಗ್[ಗದ] ಕಮಲಾ ನೆಹರು ಕಾಲೇಜಿನ ಪಕ್ಕದ ಜಾಗವ[ನ್ನು] ಕೋರ್ಟಿನಲ್ಲಿ ಗೆದ್ದಿರುವುದಾಗಿ, ಅದನ್ನ ನಿವ[...] ಪೊಲೀಸರಿಗೆ ಹೇಳಿ ತೆರವು ಮಾಡಿಸಿಕೊಡಿ ಎಂ[ದು] ಕೋರ್ಟ್ ಆಜ್ಞೆಯನ್ನು ಪ್ರಕಾಶರ ಕೈಗಿತ್ತರು. ಇದ[ನ್ನು] ಒಪ್ಪಿಕೊಂಡ ಪ್ರಕಾಶ್ ಪೊನ್ನಮ್ಮಾಳರ[ನ್ನು] ಬೀಳ್ಕೊಟ್ಟರು.

ಪೊನ್ನಮ್ಮಾಳರಿ[ಗೆ] ಕೊಟ್ಟ ಮಾತಿನಂ[ತೆ] ಎಂ.ಪಿ.ಪ್ರಕಾಶ್ ಶಿವಮೊಗ್[ಗದ] ಎಸ್‌ಪಿಗೆ ಫೋನ್ ಮಾ[ಡಿ] ಕೋರ್ಟ್ ಆಜ್ಞೆ ಜಾರಿಗೊಳಿ[ಸು]ವಂತೆ ಹೇಳಿದರು. ಆದರೆ ಅಂದಿ[ನ] ಎಸ್ಪಿಗೆ ಗೃಹ ಮಂತ್ರಿಗಿಂತ ಮು[...] ಮಂತ್ರಿ ಮತ್ತು ಅವರಪ್ಪನೇ ಮು[...]ರಾಗಿದ್ದರಿಂದ ಎಂ.ಪಿ. ಪ್ರಕಾಶ್ ಆ[ಜ್ಞೆ] ಜಾರಿಯಾಗಲಿಲ್ಲ. ಅಷ್ಟರಲ್ಲಿ ಅವರ ಗೃ[ಹ] ಮಂತ್ರಿಗಿರಿಯೂ ಹೋಯ್ತು.


ಇತ್ತ ಪೊನ್ನಮ್ಮಾಳರು ವಿಷಣ್ಣರಾ[ಗಿ] ಸುಮ್ಮನಾದರು. ಅವರ ಮನೆ ಕಡೆ ಹೋಗ[ಲು] ನಮಗೂ ಮುಸುಡಿ ಇಲ್ಲದಂತಾಯ್ತು. ಆದ[ರೆ] ಅವರು ತೀರಿಕೊಂಡಾಗ ಹೋಗಿ ನೋಡ[ುವ] ನಮಗ್ಯಾವ ಅಳುಕೂ ಇರಲಿಲ್ಲ...




ಸಮಾಜವಾದಿ ಕಿಶನ್ ಪಟ್ನಾಯಕ್ ಜೊ[ತೆ] ...

ಪೊನ್ನಮ್ಮಾಳರ ಆಲೋಚನೆಯಲ್ಲಿ ಯಾವ ಗೊಂದಲವೂ ಇರಲಿಲ್ಲ, ಆದ್ದರಿಂದ ಅವರು ಖಚಿತವಾಗಿ ಮಾತನಾಡುತ್ತಿದ್ದರು. ಅವರು ಕಟುವಾಗಿ ಮಾತನಾಡಿದರೂ ಕೂಡಲೇ ಹಲ್ಲಿಲ್ಲದ ಮಗುವಿನ ನಗುಬೀರುತ್ತಿದ್ದರು. ಅವರನ್ನ ಭೇಟಿ ಮಾಡಿ ಬಂದರೆ, ಗಾಂಧೀಜಿ, ಲೋಹಿಯಾ, ಗೋಪಾಲಗೌಡರ ಕಾಲದ ಒಂದು ಇತಿಹಾಸವನ್ನೇ ನೋಡಿ ಬಂದಂತಾಗುತ್ತಿತ್ತು.

ಕೋಮುವಾದ ಭಯೋತ್ಪಾದನೆಯಲ್ಲವೇ?





…ತ್ತೀಚಿನ ದಿನಗಳಲ್ಲಿ ರಾಜ್ಯ ಮತ್ತು ದೇಶದಲ್ಲಿ …ೋತ್ಪಾದನೆ ಮತ್ತು ಕೋಮುಗಲಭೆಗಳು ಹೆಚ್ಚುತ್ತಿವೆ. …ಮುಗಲಭೆ ನಡೆದ ಸ್ಥಳ ಮತ್ತು ಬಾಂಬ್ ಬ್ಲಾಸ್ಟ್ …ಸ್ಥಳ ಹೆಚ್ಚುಕಡಿಮೆ ಒಂದೇ ಬಗೆಯ ಹೋಲಿಕೆ …ನ್ನು ಹೊಂದಿದೆ. ಅಷ್ಟು ಮಾತ್ರವಲ್ಲ, ಎರಡೂ …ಯ ಘಟನೆಗಳು ಜನರ ಮೇಲೆ ಒಂದೇ ಪರಿಣಾಮ … ಮಾಡುತ್ತವೆ. ಘಟನೆ ನಡೆದ ತಕ್ಷಣ ಮತ್ತು …ತ್ರ ದಿನ ಬಹುತೇಕರ ಮನಸ್ಸಲ್ಲಿ ಅಭದ್ರತೆ ಕಾಡುತ್ತದೆ. …ರಿಂದ ಈ ಕೋಮುವಾದ ಮತ್ತು ಭಯೋತ್ಪಾದನೆ …ರೋಗ್ಯವಂತ ಸಮಾಜಕ್ಕೆ ಘಾತುಕ ಶಕ್ತಿಗಳೇ.

…ಆದಾಗ್ಯೂ ಇವನ್ನು ನಮ್ಮ ಕಾನೂನು ಮತ್ತು …ವ್ಯವಸ್ಥೆಯ ಜವಾಬ್ದಾರಿ ಹೊತ್ತವರು ಮತ್ತು …ಧ್ಯಮಗಳು ನೋಡುವ ದೃಷ್ಟಿಕೋನವೇ ಬೇರೆಬೇರೆ …ಗಿವೆ.

…ಎಲ್ಲೋ ಒಂದು ಕಡೆ ಕೋಮುವಾದ ಪರವಾಗಿಲ್ಲ; …ಮಟ್ಟ ಹಾನಿ ಮಾಡುತ್ತದೆ. ಇದೀ ವ್ಯವಸ್ಥೆಯನ್ನೇ …ಮೇಲು ಮಾಡುವ ಕೃತ್ಯವಲ್ಲ. ಯಾವುದೋ ಅವೇಳೆ …ಲ್ಲಿ ಬಂದುಹೋಗುವ ಸಂಗತಿ. ಕಾಲ ಕಳೆದಂತೆ ಸರಿ …ಗಬಹುದು. ಆದುದರಿಂದ ಕೋಮುವಾದಕ್ಕೆ …ಮ್ಮಕ್ಕು ಕೊಡುವ ಸಂಘಟನೆಗಳನ್ನು ಮತ್ತು ಕೋಮುಗಲಭೆ …ಲ್ಲಿ ಭಾಗವಹಿಸುವವರನ್ನು ನಿಷ್ಠೂರವಾಗಿ ನೋಡುವ …ತ್ತು ಶಿಕ್ಷಿಸುವ ಅಗತ್ಯವಿಲ್ಲವೆಂದು ಪರಿಗಣಿಸಿದಂತೆ …ಯುತ್ತದೆ.

…ಆದರೆ ಭಯೋತ್ಪಾದನೆ ಹಾಗಲ್ಲ. ದೊಡ್ಡ ಮಟ್ಟದ … ಮಾಡುತ್ತದೆ. ಆದ್ದರಿಂದ ಭಯೋತ್ಪಾದನೆ ಬಗ್ಗೆ …ಬಾ ನಿಷ್ಠೂರ ಧೋರಣೆ ತಾಳಬೇಕು. ಭಯೋತ್ಪಾದನೆ …ಂದಿಗೆ ದೂರದ ಸಂಬಂಧ ಇದೆ ಎನ್ನುವ ಗುಮಾನಿ …ಲ್ಲ ವ್ಯಕ್ತಿಗಳನ್ನು ಮುಲಾಜಿಲ್ಲದೆ ಶಿಕ್ಷಿಸುವುದನ್ನು …ನೋಡುತ್ತಿದ್ದೇವೆ. ನಮ್ಮಂತಹ ಜಾತ್ಯತೀತ ರಾಷ್ಟ್ರದಲ್ಲಿ ಒಂದೇ …ಯ ಎರಡು ಕುಕೃತ್ಯಗಳನ್ನು ಹತೋಟಿಯಲ್ಲಿಡಲು … ಆಳುವ ವರ್ಗ ಅನುಸರಿಸುವ ಈ ದ್ವಿಮುಖ …ಯನ್ನು ಪ್ರಜ್ಞಾವಂತರು ಗಂಭೀರವಾಗಿ ಪರಿಗಣಿಸಿಯೇ …ಎನ್ನಬೇಕಾಗುತ್ತದೆ.

…ಬಾಂಬ್ ಬ್ಲಾಸ್ಟ್‌ಗಳು ಎಲ್ಲೇ ಆದರೂ ಅದಕ್ಕೆ ಅಲ್ಪ …ಖ್ಯಾತ ಸಮುದಾಯಕ್ಕೆ ಸೇರಿದ ಸಂಘಟನೆಗಳೇ ಕಾರಣ …ದು ಅಂತಹ ಸಂಘಟನೆಗಳನ್ನು ನಿಷೇಧಿಸುವುದು ಮತ್ತು …ಘಟನೆಗೆ ಸೇರಿದ ವ್ಯಕ್ತಿಗಳನ್ನು ಬಂಧಿಸಿ ಜೈಲಿಗೆ …ಟ್ಟುವುದು ಸಾಮಾನ್ಯ. ಇತ್ತೀಚಿನ ದಿನಗಳಲ್ಲಿ ನಡೆದ …ಹುತೇಕ ಕೋಮುಗಲಭೆಗಳಲ್ಲಿ ಬಹುಸಂಖ್ಯಾತ ಸಮು…ಯಕ್ಕೆ ಸೇರಿದೆ ಎಂದು ತಮಗೆ ತಾವೇ ಡಿಕ್ಲೇರ್ …ಡಿಕೊಂಡ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಿವೆ. …ಷ್ಟು ಮಾತ್ರವಲ್ಲ; ರಾಜಾರೋಷವಾಗಿ ತಾವೂ ಕೂಡ …ಬ್ ಬ್ಲಾಸ್ಟ್ ಮಾಡಿ ಬುಡಮೇಲು ಕೃತ್ಯಗಳನ್ನು …ಡಬಲ್ಲವೆಂದು ಸಾರ್ವಜನಿಕವಾಗಿ ಘೋಷಿಸಿಕೊಳ್ಳು… . ಬಹುಸಂಖ್ಯಾತರ ಹೆಸರಿನಲ್ಲಿ ಈ ಸಂಘಟನೆಗಳು …ರಲ್ಲಿ ಭಯಹುಟ್ಟಿಸುವ ಕೃತ್ಯಗಳನ್ನು ಮಾಡುತ್ತಲಿದ್ದರೂ …ಗಳ ಅಪರಾಧ ಭಯೋತ್ಪಾದನೆ ಯಾಕಾಗುವುದಿಲ್ಲ? …ಹುಸಂಖ್ಯಾತರ ಹೆಸರಿನಲ್ಲಿ ಅಭದ್ರತೆಯನ್ನು ಮತ್ತು …ಅಶಾಂತಿಯನ್ನು ಸೃಷ್ಟಿಸುವ ಸಂಘಟನೆಗಳನ್ನು ಹತೋಟಿ…ಯಲ್ಲಿಡಲು ಸರಕಾರ ಯಾಕೆ ಕ್ರಮ ಕೈಗೊಳ್ಳುವುದಿಲ್ಲ? …ಹುಸಂಖ್ಯಾತರ ಹೆಸರಿನಲ್ಲಿ ಆಂತರಿಕ ಅಭದ್ರತೆಯನ್ನು …ಟ್ಟುಹಾಕುವ ಸಂಸ್ಥೆಗಳನ್ನು ಸರಕಾರ ಹತೋಟಿಯಲ್ಲಿ…ಡುವುದು ಕೂಡ ಭಯೋತ್ಪಾದನಾ ಚಟುವಟಿಕೆಗಳ …ನಡೆಗೆ ಕಾರಣವಾಗಿರಬಹುದಲ್ಲವೇ?


ಮೇಲಿನ ಪ್ರಶ್ನೆಗಳಿಗೆ ಹಲವಾರು ಉತ್ತರಗಳು ಸಾಧ್ಯ. …ಗಳಲ್ಲಿ ಒಂದು ಉತ್ತರವು ಹೀಗಿರಲು ಸಾಧ್ಯ. …ಏನೆಂದರೆ ಸಂಘಪರಿವಾರದವರು ಹಲವಾರು …ಕಾರ್ಯಕ್ರಮಗಳ ಮೂಲಕ ಭಾರತವನ್ನು ಹಿಂದೂ …ರಾಷ್ಟ್ರವನ್ನಾಗಿಸಬೇಕೆಂದು ಪ್ರಯತ್ನಿಸುವುದು ತುಂಬಾ ಪ್ರಚಾರ …ದ ಸಂಗತಿ. ಹಿಂದೂ ರಾಷ್ಟ್ರದಲ್ಲಿ ಹಿಂದೂಗಳು …ದಲನೇ ದರ್ಜೆಯ ಪ್ರಜೆಗಳಾದರೆ ಉಳಿದ ಎಲ್ಲರೂ …ಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು ಮುಂತಾದವರು) …ನೇ ದರ್ಜೆಯ ಪ್ರಜೆಗಳಾಗಿರಬೇಕು. ಸಂಘಪರಿವಾರ …ರು ಇನ್ನೂ ತಮ್ಮ ಗುರಿ ಸಾಧಿಸದಿರುವುದರಿಂದ …ಗಿಯೂ ನಮ್ಮದು ಜಾತ್ಯತೀತ (ಅಂದರೆ ಹುಟ್ಟು …ಬ್ಬನಲ್ಲ; ಮನುಷ್ಯ ಅನ್ನುವ ಕಾರಣಕ್ಕಾಗಿ ನಾವೆಲ್ಲ …ಮಾನರು ಎನ್ನುವ ನಂಬಿಕೆ) ರಾಷ್ಟ್ರವೆನ್ನುವ ಕಲ್ಪನೆಯಿಂದ …ಆಡಳಿತ ಯಂತ್ರ ನಡೆಯುತ್ತದೆ ಎನ್ನುವ ನಂಬಿಕೆ …ದು. ಆದರೆ ನಮ್ಮ ಆಂತರಿಕ ಭದ್ರತೆಯನ್ನು ಕಾಪಾಡ…ಬೇಕಾದವರು ಕೋಮು ಮತ್ತು ಭಯೋತ್ಪಾದನಾ ಚಟು…ವಟಿಕೆಗಳ ಹತೋಟಿಗೆ ಕೈಗೊಳ್ಳುವ ಕಾನೂನುಕ್ರಮಗಳನ್ನು …ನೋಡಿದರೆ ಈಗಾಗಲೇ ನಮ್ಮಲ್ಲಿ ಹಿಂದೂ ರಾಷ್ಟ್ರ …ರೂಪುಗೊಂಡಿದೆಯೋ ಎಂಬ ಆತಂಕ ಕಾಡುತ್ತದೆ.

ಭಯೋತ್ಪಾದಕರನ್ನು ಪತ್ತೆಹಚ್ಚಲು ಮತ್ತು ಹತೋಟಿ…ಯಲ್ಲಿಡಲು ನಡೆವ ಪ್ರಯತ್ನದ ಒಂದಂಶವನ್ನೂ ಕೂಡ …ಕೋಮುವಾದದ ಮೂಲವನ್ನು ಪತ್ತೆಹಚ್ಚಲು ಮತ್ತು …ಹತೋಟಿಯಲ್ಲಿಡಲು ನಮ್ಮ ಆಡಳಿತ ವ್ಯವಸ್ಥೆ ಮಾಡುತ್ತಿಲ್ಲ. [illegible]

ಕೊಟ್ಟ ಮಾಹಿತಿ ನೆಲೆಯಲ್ಲಿ ರೇಖಾಚಿತ್ರಗಳನ್ನು ಬಿಡಿಸಿ ಗುರುತಿಸಲು ಪ್ರಯತ್ನಿಸಲಾಗುತ್ತಿದೆ. ಈ ರೀತಿಯಲ್ಲಿ ಗುರುತಿಸಲ್ಪಡುವವರೆಲ್ಲ ಅಲ್ಪಸಂಖ್ಯಾತ ಸಮುದಾಯದವರಾಗಿರುತ್ತಾರೆ. ಬಾಂಬ್ ಬ್ಲಾಸ್ಟ್ ಮಾಡಿದವರು ಯಾರೆಂದು ತೀರ್ಮಾನವಾಗುವ ಮೊದಲೇ ಕೆಲವೊಂದು ಸಂಘಟನೆಗಳನ್ನು ನಿಷೇಧಿಸುವ ತೀರ್ಮಾನವನ್ನು ತಳೆಯಲಾಗುತ್ತದೆ. ಆ ರೀತಿ ನಿಷೇಧಿಸಲ್ಪಡುವ ಸಂಘಟನೆಗಳು ಕೂಡ ಅಲ್ಪಸಂಖ್ಯಾತರ ಸಂಘಟನೆಗಳೇ.

ಎಲ್ಲಾ ಮಾಧ್ಯಮಗಳೂ ಭಯೋತ್ಪಾದನಾ ಚಟುವಟಿಕೆಗಳನ್ನು ಕಠಿಣವಾಗಿ ಖಂಡಿಸುತ್ತವೆ. ಭಯೋತ್ಪಾದನೆಯಲ್ಲಿ ಪಾಲ್ಗೊಳ್ಳುವವರನ್ನು, ಬೆಂಬಲಿಸುವವರನ್ನು ಮತ್ತು ಪ್ರಚಾರ ಮಾಡುವವರನ್ನು ದೇಶದ್ರೋಹಿಗಳೆಂದು ಬ್ರಾಂಡ್ ಮಾಡಲಾಗುತ್ತಿದೆ. ಭಯೊತ್ಪಾದನೆ ಸರಿಯೆಂದು ಯಾರೂ ವಾದಿಸಲು ಸಾಧ್ಯವಿಲ್ಲ. ಆದರೆ ಯಾತಕ್ಕಾಗಿ ಭಯೋತ್ಪಾದನೆ ಹುಟ್ಟಿಕೊಂಡಿದೆ ಮತ್ತು ಯಾತಕ್ಕಾಗಿ ಈ ಪ್ರಮಾಣದಲ್ಲಿ ಬೆಳೆದು ನಿಂತಿದೆ ಮತ್ತು ಅದೊಂದು ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಮಾತ್ರ ಅಲ್ಲ ಎನ್ನುವ ಸರಳೀಕೃತ ಮತ್ತು ಏಕಮುಖವಾದ ಚಿಂತನೆ, ಚರ್ಚೆ ಮತ್ತು ನಿರ್ಧಾರ ಸಾಧ್ಯವಾಗಿದೆ.

ಆದರೆ ಕೋಮುವಾದದ ಪ್ರಶ್ನೆ ಬಂದ ಕೂಡಲೇ ಸಂಪೂರ್ಣ ವಿಭಿನ್ನವಾದ ಪ್ರತಿಕ್ರಿಯೆಗಳನ್ನು ನೋಡುತ್ತಿದ್ದೇವೆ. ಕೋಮು ಸೌಹಾರ್ದತೆಯನ್ನು ಕೆದಕುವ ಎಲ್ಲಾ ಕಾರ್ಯಕ್ರಮಗಳು (ಭಾಷಣ, ಬರಹ, ಪ್ರಚಾರ ಇತ್ಯಾದಿಗಳು) ನಮ್ಮ ಕಣ್ಮುಂದೆಯೇ ನಡೆಯುತ್ತವೆ. ಕೋಮುವಾದಿಗಳ ಈ ಕಾರ್ಯಕ್ರಮಗಳ ಫಲವಾಗಿ ಕೋಮುಗಲಭೆಗಳಾಗುತ್ತವೆ. ಹಲವಾರು ಜನರು ಸಾವುನೋವು ಅನುಭವಿಸುತ್ತಾರೆ. ಆಸ್ತಿಪಾಸ್ತಿ ನಷ್ಟವಾಗುತ್ತದೆ. ಜನರಲ್ಲಿ ಅಭದ್ರತೆ ಕಾಡುತ್ತದೆ. ಆ ಸಂದರ್ಭದಲ್ಲಿ ಕೋಮುಗಲಭೆಯಲ್ಲಿ ಪಾಲ್ಗೊಂಡವರನ್ನು ಮತ್ತು ಪ್ರತಿಭಟಿಸಿದವರನ್ನು ಬಂಧಿಸುವ ನಾಟಕ ನಡೆಯುತ್ತದೆ. ಕೆಲವು ದಿನಗಳ ನಂತರ ಬಂಧಿತರು ಬಿಡುಗಡೆಗೊಳ್ಳುತ್ತಾರೆ.



ಮತ್ತೆ ಯಥಾರೀತಿಯ ಕೋಮುಗಲಭೆಗಳನ್ನು ಹುಟ್ಟುಹಾಕುವ ಕೃತ್ಯಗಳು ಮುಂದುವರೆಯುತ್ತವೆ. ಕೋಮುವಾದವನ್ನು ಬೆಂಬಲಿಸುವವರನ್ನು, ಪಾಲ್ಗೊಳ್ಳುವವರನ್ನು ಮತ್ತು ಪ್ರಚಾರ ಮಾಡುವವರನ್ನು ದೇಶದ್ರೋಹಿಗಳೆಂದು ಬ್ರಾಂಡ್ ಮಾಡುವುದಿರಲಿ, ಸ್ವಾಸ್ಥ ಸಮಾಜಕ್ಕೆ ಕಂಟಕರೆಂದು ಕೂಡ ನಾವು ಬ್ರಾಂಡ್ ಮಾಡಿಲ್ಲ.

ಇತ್ತೀಚಿನ ಕ್ರಿಶ್ಚಿಯನ್ ಚರ್ಚ್‌ಗಳ ಮೇಲೆ ದಾಳಿಯನ್ನು ಮಾಡಿದ್ದು ತಾನೆಂದು ಭಜರಂಗದಳ ಒಪ್ಪಿಕೊಂಡಿದೆ. ಅಷ್ಟು ಮಾತ್ರವಲ್ಲ; ಇನ್ನು ಮುಂದೆಯೂ ಇಂತಹ ದಾಳಿಗಳನ್ನು ಮಾಡಲಿದ್ದೇವೆಂದು (ಭಯೋತ್ಪಾದಕ ಸಂಘಟನೆಗಳ ಶೈಲಿಯಲ್ಲಿ) ಆ ಸಂಘಟನೆ ಹೇಳಿಕೆ ನೀಡಿದೆ. ಆದಾಗ್ಯೂ ರಾಜ್ಯದಲ್ಲಿ ಆ ಸಂಘಟನೆಯನ್ನು ನಿಷೇಧಿಸುವ ಧೈರ್ಯವನ್ನು ಸರಕಾರ ಮಾಡಿಲ್ಲ. ಆದಕ್ಕೆ ಬದಲು ನ್ಯೂಲೈಫ್ ಎಂಬ ಕ್ರಿಶ್ಚಿಯನ್ ಸಂಘಟನೆಯೊಂದನ್ನು ನಿಷೇಧಿಸುವ ಚರ್ಚೆಗಳು ನಡೆಯುತ್ತಿವೆ.

ಹಾಗೆ ನೋಡಿದರೆ ನ್ಯೂಲೈಫ್ ಕಾರ್ಯಕ್ರಮಗಳನ್ನು ಹತ್ತಿರದಿಂದ ನೋಡಿದರೆ ಹಿಂದೂಗಳು ಯಾರೂ ಭಯಪಡಬೇಕಾಗಿಲ್ಲ. ನ್ಯೂಲೈಫ್‌ನ ಉದ್ದೇಶ ಹಿಂದೂಗಳನ್ನು ಮತಾಂತರ ಮಾಡುವುದಲ್ಲ; ತಮ್ಮ ಧರ್ಮದೊಳಗಿನ ರೋಮನ್ ಕ್ಯಾಥೋಲಿಕ್‌ನ ಧರ್ಮಗುರುಗಳು (ರೋಮನ್ ಕ್ಯಾಥೋಲಿಕ್) ಕೆಲವೊಂದು ಆಚರಣೆಗಳನ್ನು ತಿದ್ದಿ ಕೆಥೋಲಿಕ್ ಧರ್ಮಕ್ಕೊಂದು ಹೊಸ ಜೀವ (ಲೈಫ್) ನೀಡುವುದು. ಆದುದರಿಂದಲೇ ರೋಮನ್ ಕೆಥೋಲಿಕ್‌ನ ಧರ್ಮಗುರುಗಳು ನ್ಯೂಲೈಫ್ ಸಂಘಟನೆಯನ್ನು ನಿಷೇಧಿಸುವುದನ್ನು ವಿರೋಧಿಸುವುದು ಕಂಡುಬರುತ್ತಿಲ್ಲ.

ನ್ಯೂಲೈಫ್ ಸಂಘಟನೆ ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ಸಕ್ರಿಯವಾಗಿದೆ. ಆದರೆ ರಾಜ್ಯದ ಬಹುತೇಕ ಕಡೆಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಸಿದ್ದೇವೆಂದು ಭಜರಂಗದಳದವರು ಹೇಳಿಕೊಳ್ಳುವುದು, ಅವರ ದಾಳಿ ನಂತರ ನ್ಯೂಲೈಫ್ ಸಂಘಟನೆಯನ್ನು ನಿಷೇಧಿಸಬೇಕೆಂದು ಸರಕಾರಕ್ಕೆ ಜ್ಞಾನೋದಯವಾಗುವುದು ಇತ್ಯಾದಿಗಳು ಬಹುಸಂಖ್ಯಾತರ ಹೆಸರಲ್ಲಿ ಏನು ಮಾಡಿದರೂ ನಡೆಯುತ್ತದೆ ಎನ್ನುವ ಧೋರಣೆಯನ್ನು ತೋರಿಸುತ್ತದೆ.

ಇದೇ ಸಮಯದಲ್ಲಿ ಪರಿಗಣಿಸಬೇಕಾದ ಮತ್ತೊಂದು ಪ್ರಾಮುಖ್ಯ ವಿಷಯವೆಂದರೆ, ಕೋಮುವಾದದ ದೂರಗಾಮಿ ಪರಿಣಾಮಗಳು. ಕೋಮುಗಲಭೆಗಳಂತಹ ಹಿಂಸಾತ್ಮಕ ಘಟನೆಗಳು ಹಾದುಹೋಗುವ ಸಂಗತಿಗಳು; ಶಾಶ್ವತವಲ್ಲ. ಆದರೆ ವಿರೋಧಿ ಕೋಮುಗಳನ್ನು ಸೃಷ್ಟಿಸಲು ಮತ್ತು ಅವುಗಳು ಹಿಂಸಾತ್ಮಕವಾಗಿ ವ್ಯವಹರಿಸಲು ಜನರ ಮನಸ್ಸನ್ನು ಹದಗೊಳಿಸಲು ಸೃಷ್ಟಿಸುವ ಚಿಂತನೆಗಳ ಮತ್ತು ಆಚರಣೆಗಳ ಪ್ರಭಾವ ಒಂದು ಗಳಿಗೆ ಬಂದುಹೋಗುವ ಸಂಗತಿಗಳಲ್ಲ. ಅದು ಜನಸಾಮಾನ್ಯರ ಬದುಕನ್ನು ನಿರಂತರವಾಗಿ ಕಾಡುವ ಸಂಗತಿಗಳಾಗುತ್ತವೆ.

ಈ ಬಗೆಯ ಕೋಮುವಾದ ಹಾಗೂ ಕೋಮುಗಲಭೆಗಳು ಜನರ ಮನಸ್ಸುಗಳನ್ನು ಒಡೆಯುವ ಕೆಲಸಗಳನ್ನು ಮಾಡುತ್ತಿವೆ. ಇವುಗಳಿಂದಾಗಿ ಎಲ್ಲಾ ಸಮುದಾಯದ ತಳಸ್ತರದ ಜನರು ತಮ್ಮದೇ ಬೇರುಗಳ ಬಗ್ಗೆ ಒಂದು ಬಗೆಯ ಕೀಳರಿಮೆಯನ್ನು ರೂಢಿಸಿಕೊಂಡು ಇಬ್ಬಂದಿತನದಿಂದ ಬದುಕಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ.

ಇದಕ್ಕಿಂತಲೂ ಹೆಚ್ಚಾಗಿ ಮೇಲ್ವರ್ಗಗಳ ಅಧಿಕಾರದ ಹೋರಾಟಗಳಲ್ಲಿ ಎಲ್ಲ ಸಮುದಾಯದ ಜನರೂ ಗನ್‌ಪೌಡರ್ ತರಹ ಬಳಕೆಯಾಗುತ್ತಾರೆ. ಇದರಿಂದಾಗಿ ಈ ಜನರು ಅನುಭವಿಸಬೇಕಾದ ಇಬ್ಬಂದಿತನ ಮತ್ತು ಕಾಯಂ ಆಗಿ ಮೇಲ್ವರ್ಗ ಸೃಷ್ಟಿಸಿದ ಟ್ರ್ಯಾಪ್ ಒಳಗೆ ಬಂಧಿಯಾಗಿರುವುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಇದಕ್ಕೆ ಬಹುಮುಖ್ಯ ಕಾರಣ ಆರ್ಥಿಕ ಏಣಿಶ್ರೇಣಿಗಳನ್ನು ಅಲ್ಲಗಳೆದು ಸಾಂಪ್ರದಾಯಿಕ ಗುರುತನ್ನು (ಧರ್ಮವನ್ನು) ರಾಜಕೀಯ ಉದ್ದೇಶಕ್ಕಾಗಿ ಬಳಸುವುದು. ಇದರಿಂದಾಗಿ ವರ್ಗ ಮತ್ತು ಅದು ಸಾಧ್ಯವಾಗಿಸುವ ಅಧಿಕಾರದ ಪ್ರಶ್ನೆಗಳು ಮೂಲೆಗುಂಪಾಗಿ-ಸಾಂಪ್ರದಾಯಿಕ ಗುರುತಿನ (ಜಾತಿ/ಧರ್ಮ ಇತ್ಯಾದಿಗಳ) ಭಿನ್ನತೆಗಳು ಜನಸಾಮಾನ್ಯರ ಪ್ರಜ್ಞೆಯ ಭಾಗವಾಗುತ್ತವೆ.

ಮೇಲ್ನೋಟಕ್ಕೆ ನಾವೆಲ್ಲ ಒಂದೇ ಎನ್ನುವ ಸಂದರ್ಭದಲ್ಲಿಯೇ ಆಳದಲ್ಲಿ ಜಾತಿ/ಧರ್ಮ ಮತ್ತು ಪ್ರತಿಜಾತಿ/ಧರ್ಮದೊಳಗಿನ ವರ್ಗಗಳ ನಡುವಿನ ಗೆರೆಗಳು ಇನ್ನೂ ಬಲಿಷ್ಠಗೊಳ್ಳುತ್ತಿವೆ. ಎಲ್ಲ ಬಗೆಯ (ಸಾಮಾಜಿಕ, ಆರ್ಥಿಕ, ರಾಜಕೀಯ) ನಾಯಕತ್ವಗಳು ಆಯಾಯ ಸಮುದಾಯದ ಮೇಲ್ವರ್ಗಗಳ ಹಿಡಿತದಲ್ಲಿವೆ. ರಾಜಕೀಯ ಕ್ಷೇತ್ರದಲ್ಲಿ ಎಲ್ಲ ಪಕ್ಷಗಳು, ಎಲ್ಲ ಜಾತಿಗಳನ್ನು ಒಳಗೊಂಡಂತೆ ಕಂಡರೂ ಆಳದಲ್ಲಿ ಸಾಂಪ್ರದಾಯಿಕ ಯಜಮಾನಿಕ ಸಮುದಾಯಗಳು ಈ ಎಲ್ಲ ಪಕ್ಷಗಳ ಮೇಲಿನ ತಮ್ಮ ಬಿಗಿಪಟ್ಟನ್ನು ಇನ್ನೂ ಸಡಿಲಿಸಿಲ್ಲ. ಅಷ್ಟು ಮಾತ್ರವಲ್ಲ, ಪ್ರತೀ ಸಮುದಾಯದಿಂದಲೂ ಆಯಾಯ ಸಮುದಾಯದ ಅನುಕೂಲಸ್ಥರು ಮಾತ್ರ ಮುಖ್ಯವಾಹಿನಿಯ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲು ಪಡೆಯುತ್ತಿದ್ದಾರೆ. ಅಂದರೆ ಎಂಎಲ್‌ಎ/ಎಂಪಿಯಾಗಲು ಸಾಧ್ಯವಾಗಿವೆ. ಯಾವುವೇ ಸಮುದಾಯದ (ಯಜಮಾನಿಕ ಸಮುದಾಯಗಳನ್ನು ಸೇರಿಸಿಕೊಂಡು) ಬಡವರು ಎಂಎಲ್‌ಎ/ಎಂಪಿಯಾಗುವ ಕನಸು ಕಾಣಲು ಸಾಧ್ಯವೇ ಇಲ್ಲ. ಹೀಗಾ ಜಾತಿ/ಧರ್ಮದ ಹೆಸರಲ್ಲಿ ನಡೆಯುವ ಕೋಮುವಾದ ವಾಸ್ತವವಾಗಿ ನಮ್ಮ ಸಮಾಜದ ಮೇಲ್ವರ್ಗಗಳು ತಮ್ಮ ರಾಜಕೀಯ ಆಸಕ್ತಿಗಳನ್ನು ಮುಂದುವರೆಸಲು ನಡೆಸುತ್ತಿರುವ ತಂತ್ರಗಾರಿಕೆ. ಆದ್ದರಿಂದಲೇ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಪಕ್ಷಗಳು ಬದಲಾದರೂ ಅನುಕೂಲಸ್ಥರ ಪರ ಮತ್ತು ಬಡವರ ವಿರುದ್ಧ ಇರುವ ಆರ್ಥಿಕ ನೀತಿಗಳು ಬದಲಾಗುವುದಿಲ್ಲ.

ಬಹುತೇಕರ ಸಾಮಾನ್ಯ ಸಮಸ್ಯೆಗಳಾದ ನಿರುದ್ಯೋಗ, ಕುಡಿಯುವ ನೀರು, ವಸತಿ ಇತ್ಯಾದಿ ಮೂಲಭೂತ ಸವಲತ್ತುಗಳ ಕೊರತೆ, ಆರೋಗ್ಯ, ಶಿಕ್ಷಣ ಇತ್ಯಾದಿಗಳನ್ನು ಖಾಸಗೀಕರಣಗೊಂಡು ಅವರುಗಳು ಮಾಡುವ ಹಗಲುದರೋಡೆ ಇತ್ಯಾದಿ ದಿನನಿತ್ಯದ ಸಮಸ್ಯೆಗಳ ವಿರುದ್ಧ ಹೋರಾಟಗಳ ಹಿಂದೆ ಜನರೇ ಇಲ್ಲ. ಮೇಲಿನ ದಿನನಿತ್ಯದ ಸಮಸ್ಯೆಗಳ ವಿರುದ್ಧ ಬಳಸಬೇಕಾದ ಸಿಟ್ಟು, ಅಸಹನೆ, ಆಕ್ರೋಶ, ಆವೇಶ, ಉದ್ವೇಗ ಇತ್ಯಾದಿಗಳನ್ನು ಜನಸಾಮಾನ್ಯರು ಕೋಮುಗಲಭೆಗಳಲ್ಲಿ ವ್ಯರ್ಥ ವ್ಯಯ ಮಾಡುತ್ತಿದ್ದಾರೆ. ಕ್ರಾಂತಿಯ ಕನಸು ಕಾಣುವ ಮತ್ತು ಸುತ್ತಮುತ್ತ ನಡೆಯುವ ಅನ್ಯಾಯಗಳ ವಿರುದ್ಧ ಸಿಡಿದೇಳುವ ಲಕ್ಷಣಗಳೆಲ್ಲ ವಿದ್ಯಾರ್ಥಿ ಜೀವನದಲ್ಲಿ ಕಂಡಷ್ಟು ನಂತರ ಇರುವುದಿಲ್ಲ. ಆದರೆ ಕೋಮುಗಲಭೆಯ ಹೆಸರಲ್ಲಿ ನಡೆಯುವ ಮಾರಣಹೋಮದ ಬಗ್ಗೆ ರಾಜ್ಯದ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟಿಸಿದ್ದು ಅಪರೂಪ. ಪ್ರತಿಭಟಿಸುವ ಬದಲು, ಈ ಬಗೆಯ (ಹಿಂದೂ/ಮುಸ್ಲಿಂ/ಕ್ರಿಶ್ಚಿಯನ್) ಧ್ರುವೀಕರಣವನ್ನು ಅಂತಿಮ ಸತ್ಯವೆಂದು ಬಗೆದು ಅವುಗಳೊಂದಿಗೆ ತಮ್ಮ ಶಕ್ತಿಯನುಸಾರ ಗುರುತಿಸಿಕೊಳ್ಳುವುದು ತಮ್ಮ ಜೀವನದ ಪರಮ ಸಾಧನೆ ಎಂದು ತಿಳಿದುಕೊಂಡು ವ್ಯವಹರಿಸುವ ವಿದ್ಯಾರ್ಥಿಗಳು ಮತ್ತು ಅವರಿಗೆ ಪಾಠ ಮಾಡುವ ಮೇಷ್ಟ್ರುಗಳನ್ನು ಕಾಣಬಹುದು.

ಇದರಿಂದಾಗಿ ಸಮಾನತೆ; ಸ್ವಾತಂತ್ರ್ಯ ಸ್ವಾಯತ್ತತೆಗಳ ನೆಲೆಯಲ್ಲಿ ಕಟ್ಟಿಕೊಳ್ಳಬಹುದಾದ ಸಮಾಜವನ್ನೇ ಕೋಮುವಾದ ನಾಶ ಮಾಡುತ್ತಿದೆ. ಮೇಲ್ವರ್ಗಗಳ ರಾಜಕೀಯ ಹಾಗೂ ಆರ್ಥಿಕ ಆಸಕ್ತಿಗಳನ್ನು ಕೋಮುವಾದ ರಕ್ಷಿಸುತ್ತದೆ ಎನ್ನುವ ಕಾರಣಕ್ಕಾಗಿ ಕೋಮುವಾದಿಗಳನ್ನು ರಕ್ಷಿಸಲಾಗುತ್ತಿದೆ. ಕೋಮುವಾದದಿಂದ ಸಾವುನೋವು ಅನುಭವಿಸಿದವರು, ಆಸ್ತಿ ಪಾಸ್ತಿ ಕಳೆದುಕೊಂಡವರು ಸರಕಾರ ಮತ್ತು ಅದರ ಏಜೆಂಟರಿಂದ ನ್ಯಾಯ ಪಡೆಯುತ್ತಿಲ್ಲ; ಕೆಲವು ಬಾರಿ ಕೋರ್ಟ್‌ಗಳಿಂದಲೂ ಅವರಿಗೆ ನ್ಯಾಯ ದೊರಕುತ್ತಿಲ್ಲ. ನ್ಯಾಯ ವಂಚನೆಯ ಜತೆಗೆ ದಿನನಿತ್ಯದ ಬದುಕಿನಲ್ಲಿ ಅವರು ಅನುಭವಿಸಬೇಕಾದ ಅಭದ್ರತೆ, ಅಪಮಾನಗಳನ್ನು ಯಾರಲ್ಲಿ ಹೇಳಿಕೊಳ್ಳುವುದು. ಅಲ್ಪಸಂಖ್ಯಾತರ ಸ್ಥಾನದಲ್ಲಿ ನಿಂತು ಆಲೋಚಿಸಿದರೆ ಮಾತ್ರ ಅವರ ಸಂಕಷ್ಟಗಳು ಅರ್ಥವಾಗಬಹುದು. ಹಿರಿಯರು, ಸಮಾನತೆ, ಸ್ವಾತಂತ್ರ್ಯಗಳ ಬಗ್ಗೆ ವಿಶೇಷ ತಲೆಕೆಡಿಸಿಕೊಳ್ಳದವರು ತಮ್ಮ ಮೇಲೆ ನಡೆಯುತ್ತಿರುವ ಅನ್ಯಾಯ ಅಪಮಾನಗಳನ್ನು ಇಷ್ಟರವರೆಗೂ ನುಂಗುತ್ತಾ ಬಂದಿದ್ದಾರೆ. ಸಮಾನತೆ, ಸ್ವಾತಂತ್ರ್ಯಗಳ ಕನಿಷ್ಠ ಕಲ್ಪನೆ ಇರುವ ಯುವಕರು ಈ ಬಗೆಯ ಅಪಮಾನಗಳನ್ನು ಸಹಿಸಲು ಸಾಧ್ಯವಿಲ್ಲ. ಕೋಮುವಾದದ ಹೆಸರಲ್ಲಿ ನಡೆಯುವ ಅಪಮಾನಗಳನ್ನು ಮತ್ತು ದಿನನಿತ್ಯ ತಮ್ಮ ಸ್ವಾಭಿಮಾನದ ಮೇಲಾಗುವ ದಾಳಿಯನ್ನು ಸಹಿಸಿಕೊಂಡು ನೂರು ವರ್ಷ ಬಾಳುವುದಕ್ಕಿಂತ ತಮ್ಮನ್ನು ಈ ಸ್ಥಿತಿಗೆ ತಂದವರನ್ನು ಬಲಿಕೊಟ್ಟು ಸಾಯುವುದೇ ಲೇಸೆಂದು ತಿಳಿಯುವುದು ತಪ್ಪೇ?

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಯೋತ್ಪಾದನೆಯ ಈ ಪ್ರಮಾಣದ ಬೆಳವಣಿಗೆಗೆ ಕೋಮುವಾದ ಕೂಡ ಒಂದು ಕಾರಣ. ಅದುಬಿಟ್ಟು ಇನ್ನೂ ಕೂಡ ಭಯೋತ್ಪಾದನೆಯನ್ನು ನೆರೆರಾಷ್ಟ್ರಗಳ ಕುತಂತ್ರವೆಂದು ಬಗೆಯುವುದು ನಮ್ಮನ್ನು ನಾವೇ ಮೋಸ ಮಾಡಿಕೊಂಡಂತೆ. ಆದುದರಿಂದ ನಮ್ಮ ಆಂತರಿಕ ಭದ್ರತೆಯ ದೃಷ್ಟಿಯಿಂದ ಕೋಮುವಾದವನ್ನು ಭಯೋತ್ಪಾದನೆಯಷ್ಟೇ ಆತಂಕಕಾರಿ ಎಂದು ಪರಿಗಣಿಸುವುದು ಅನಿವಾರ್ಯ. ಕೋಮುವಾದವನ್ನು ಹತೋಟಿಯಲ್ಲಿಡುವುದರಿಂದ ಕೇವಲ ನಮ್ಮ ಸಮಾಜದ ಅಲ್ಪಸಂಖ್ಯಾತರು ಮಾತ್ರ ನೆಮ್ಮದಿಯ ನಿಟ್ಟುಸಿರು ಬಿಡುವುದಲ್ಲ; ಎಲ್ಲ ಸಮುದಾಯದ ತಳಸ್ತರದ ಜನರಿಗೆ ನೆಮ್ಮದಿಯ ಬದುಕು ಸಾಧ್ಯ. ಕೋಮುವಾದದಿಂದಾಗಿ ಎಲ್ಲ ಸಮುದಾಯಗಳ ತಳಸ್ತರದ ಜನರ ರಾಜಕೀಯ ಶಕ್ತಿ ಆಯಾಯ ಸಮುದಾಯಗಳ ಮೇಲ್ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಲು ವ್ಯಯವಾಗುತ್ತಿದೆ. ಕೋಮು [illegible] ಕಪಿಮುಷ್ಟಿಯಿಂದ ಬಿಡುಗಡೆಗೊಂಡರೆ ಜನಸಾಮಾನ್ಯರ ರಾಜಕೀಯ ಶಕ್ತಿ ತಳಸ್ತರದ ಜನರ ಆಸಕ್ತಿಗಳನ್ನು ಕಾಪಾಡಲು ವಿನಿಯೋಗವಾಗಬಹುದು.

■ [illegible]

ಯಲ್ಲಾ ನ್ಯಟ್ಟಗಿದ್ರೆ ಹುಟ್ಟಿದೂರ ಯಾವನು ಬುಟ್ಟೋದನಯ್ಯಾ?

"ಅಂತೂ ಚಂದ್ರನತ್ತಕೆ ಒಂದು ಗ್ರಹ ಕಳಿಸಿಕೊಟ್ರು ಕಣಮಾವ" ಎಂದು ಉಗ್ರಿ ಉಪಗ್ರಹ ಉಡಾವಣೆಯಲ್ಲಿ ಭಾಗಿಯಾಗಿದ್ದ ಅರೆಬರೆ ವಿಜ್ಞಾನಿಯಷ್ಟು ಖುಷಿಯಿಂದ ಹೇಳಿದ. ಇದರ ತಲಬುಡ ತಿಳಿಯದ ಕಾಳಮಾವ,

"ಏನು ಕಳಿಸಿಕೊಟ್ರುಲಾ?" ಎಂದ.

"ಚಂದ್ರ ಯಂಗವ್ನನೆ, ಏನು ಮಾಡ್ತ ಅವ್ನನೆ ಅಂತ ತಿಳಕಂಡು ನಮಿಗೆ ತಿಳಸ್ಲಿ ಅಂತ ಒಂದು ಗ್ರಹ ಕಳಿಸಿಕೊಟ್ರು ಕಣಮಾವ."

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅದ್ಯಂಗೆ ತಿಳುಸ್ತದ?"

"ಚಂದ್ರ ಬೆಳ್ಳಿ ಬಟ್ಟಂಗೆ, ಹಿಂಗೆ ಅಂತರಿಕ್ಷದಲ್ಲವ್ನನೆ. ಅವ್ನ ಸುತ್ತ ಈ ಗ್ರಹ ಹೋಗಿ ತಿರುಗ್ತಾ ಪೋಟಾ ತಗುದು ಕಳುಸ್ತದೆ. ಆ ಪೋಟಾ ನೋಡಿ ಇವುರು ಓಹೋ ಇಂಗವ್ನನೆ, ಅವ್ನನಿಂಗಿದ್ರೆ ನಾವ್ಯಂಗೆ ಮಾಡಬವುದು, ಯಕ್ಕಡೆಯಾಸಿ ಹೋಗಬವುದು ಅಂತ ತಯಾರಾದರಂತೆ."

"ಆಗೋದು ಸತಿ ಅಮೆರಿಕದೋರು ಹೋಗಿ ಬಂದರಂತಲ್ಲಾ?" ಎಂದು ಸೀರ ಹಗುರವಾಗಿ ಹೇಳಿದ.

"ಊ ಹೋಗಿ ಅಲ್ಲಿದ್ದು ಓಡಾಡಿ ಬಂದ್ರು, ಅಲ್ಲಿಂದ ಕಲ್ಲುಮಣ್ಣನೂ ತಂದ್ರು."

"ಕಲ್ಲುಮಣ್ಣು ಇದ್ದತಲ್ಲಿ?" ಎಂದ ಕಾಳಮಾವ.

"ಊ ಕಣ ಮಾವ. ಕಲ್ಲುಮಣ್ಣು ಬುಟ್ರೆ ಇನ್ನೇನೂ ಇಲವಂತೆ. ಗಾಳಿ ಬೆಳಕು ಮರಗಿಡ ಏನೂ ಇಲವಂತೆ."

"ಅಂತಾ ಜಾಗದಲ್ಲಿ ಚಂದ್ರ ವಬ್ಬನೆ ಇದ್ದನೇನ್ಲ?" ಎಂದಳು ಜುಮ್ಮಿ.

"ಚಂದ್ರ ಅಂದ್ರೆ ಆ ಲೋಕದಲ್ಲಿರೊ ಮನ್ಸ ಅನ್ನಕಂಡೇನೆ ನೀನು? ನೀನು ನೋಡಿರೊ ಅಷ್ಟೂ ಚಂದ್ರನೆ ಕಣೆ. ಈ ಇಡೀ ಭೂಮಿಗೆ ಭೂಮಿ ಅಂತ ಯಂಗೇಳ್ತರೊ, ಅಂಗೆ ನಿನಿಗೆ ಕಾಣೊನು ಚಂದ್ರ" ಎಂದು ಉಗ್ರಿ ಚಂದ್ರನನ್ನ ವಿವರಿಸಿಕೊಡುವುದರಲ್ಲಿ ಸುಸ್ತಾದ.

"ಎಟು ದೂರದಲ್ಲಿದ್ದನ್ಲ ಅವ್ನು?" ಎಂದ ಸೀರ.

"ಲಕ್ಷಾಂತರ ಮೈಲಿ ದೂರದಲ್ಲವ್ನನೆ ಕಣೊ. ಈಗ ಇವುರು ಬುಟ್ಟಿರೊ ಗ್ರಹ ಹೋಗಿ ತಲುಪಕ್ಕೆ ಒಂದು ವಾರಾಬೇಕಂತೆ."

"ಅದು ತಲುಪಿದ್ದು ಇವುರಿಗ್ಯಂಗೆ ಗೊತ್ತಾದತೂ?"

"ಟಿವಿಲಿ ಕಂಡತಂತೆ. ಅದೋಗಿ ಏನು ಮಾಡ್ತದೆ, ಅನ್ನದನ್ನೆಲ್ಲ ಇಲ್ಲೆ ನೋಡ್ತರೆ. ಅಷ್ಟೆ ಅಲ್ಲ ಇವುರು ಅದರ ಕೈಲಿ ಏನೇನೊ ಮಾಡುಸ್ತರೆ" ಎಂದು ಉಗ್ರಿ ಹೇಳುತ್ತಿರುವಾಗ ಒಂದು ನಿಟ್ಟುಸಿರುಬಿಟ್ಟ ಕಾಳಮಾವ,

"ಮನುಸುನಿಗೆ ಬರೊ ಕೇಡಗಾಲ ಅಂದ್ರೆ ಇದೆಯೇನೊ ಕಂಡ್ಯ" ಎಂದ.

"ಯಾಕ ಮಾವ ಅಂಗಂತೀ?"

"ಇನ್ನೇನ್ಲ ಮತ್ತೆ? ತಿಂಗಳ ಬೆಳಕ ನೀಡೋ ಚಂದ್ರಸಿಗೆ ಕೈಮುಕ್ಕಂಡು ಇರದುಬುಟ್ಟು ಅವ್ನನತ್ತಕೆ ಹೋಯ್ತಿವಿ ಅಂದ್ರೆ ಉಳದರಿವುರು?"

"ಅದು ನಿಮ್ಮ ಕಾಲ ಕಣಮಾವ. ಈ ಕಾಲದ ವಿಜ್ಞಾನಿಗಳು ನಮ್ಮ ಸುತ್ತ ಇರದೇನೇನು ಅಂತ ತಿಳಕಳಕೆ ವಂಟವ್ರರೆ. ಅದ ಬ್ಯಾಡ ಅನ್ನಕ್ಯಾದತೆ?"

"ತಿಳಕಂಡೇನು ಮಾಡಂಗಿದ್ದರೂ?"

"ಸತ್ಯ ತಿಳಕಳದು ಬ್ಯಾಡವೆ? ನಿಮ್ಮ ತಿಳವಳಿಕೆಲಿ ಚಂದ್ರ ನವಗ್ರಹದಲ್ಲೊಬ್ಬ ಪ್ರಜಾಪತಿ ಮಗ, ಇಪ್ಪತೇಳು ಜನ ಹೆಂಡತಿರಿದ್ರು, ರಾಹುಕೇತು ಅವ್ನ ನುಂಗಕ್ಯೋಯ್ತವೆ ಅಂತ ತಿಳಕಂಡಿದ್ರಿ."

"ಆ ಚಂದ್ರ ಬ್ಯಾರೆ, ಈ ಚಂದ್ರ ಬ್ಯಾರೆ ಅಲವೇನ್ಲ?" ಎಂದ ಸೀರ.

"ಊ ಕಣೊ ಉಗ್ರಿ. ಕಂಬದಳ್ಳಿ ಉಗ್ರೇಗೌಡ್ರೆ ಬ್ಯಾರೆ, ನೀನೇ ಬ್ಯಾರೆ ಅನ್ನೊ ತರ ನಮ್ಮ ಸೀರ ಚಿಗಪ್ಪನ ಲೋಕದ ಚಂದ್ರನೇ ಬ್ಯಾರೆ ನಮ್ಮ ಚಂದ್ರನೇ ಬ್ಯಾರೆ" ಎಂದುಕೊಂಡು ವಾಟಿಸ್ಸೆ ಬಂದ.

"ಅಂಗಾದ್ರೆ ಸರಿ ಕಣೊ. ಈ ಚಂದ್ರನ್ನ ಕೈಬುಟ್ಟು ಅವ್ನನ್ನ ನಮ್ಮ ಪುರೋಹಿತ್ರ ಇನ್ನು ಚೆನ್ನಾಗಿ ಬ್ಯಳುಸ್ತರೆ" ಎಂದ ಉಗ್ರಿ.

"ಚಂದ್ರನ ಸುದ್ದಿ ಯಾಕ್ ತಗಂಡು ಕುಂತಿದ್ದಿರಿ?" ಎಂದ ವಾಟಿಸ್ಸೆ.

"ಅವ್ನನತ್ತಕ್ಕೆ ಗ್ರಹ ಬುಟ್ರಲ್ಲ ಅದ ಹೇಳ್ತಾಯಿದ್ದಿನಿ."

"ಗ್ರಹ ಬುಟ್ರು ಅಂದ್ರೆ ವಿಜ್ಞಾನಿಗಳ ನಿರುದ್ಯೋಗಿಗಳಾಗಿ ಕೂರಸಕ್ಯಾದತೇನೊ ಉಗ್ರಿ? ಅವುರು ಏನ್ನಾರ ಮಾಡ್ತಿವಿ ಅಂತರೆ. ಆಗ ಸರ್ಕಾರ ದುಡ್ಡು ಕೊಡಬೇಕಾಯ್ತದೆ. ಕೊಟ್ರೆ ಇಂತವೇನ್ನಾರ ಹಳೆ ಕ್ಯಲಸವ ವಸದಾಗಿ ಮಾಡ್ತರೆ. ದೇಸದ ದುಡ್ಡು ಯಂಗೆ ಖರ್ಚಾಗಬೇಕೇಳು?"

"ಅಂಗರೀಕ್ಯಲಸಕು ದುಡ್ಡು ಖರ್ಚಾಯ್ತು ಅನ್ನು" ಎಂದ ಕಾಳಮಾವ.


"ಅಯ್ಯೋ ದ್ವಡಪ್ಪ ಸಾವುರಾರು ಕೋಟಿ ಖರ್ಚಾಯ... ಇನ್ನು ಮುಂದೆ ಯಾರೋ ಇಬ್ಬರು ಹೋಗಿ ಬರ... ಹನ್ನರಡು ಸವುರ ಕೋಟಿ ಖರ್ಚಾದತಂತೆ."


"ಹನ್ನರಡು ಸವುರ ಕೋಟಿನೆ?" ಎಂದಳು ಜುಮ್ಮಿ...

"ಊ ಕಣಕ್ಕ. ಚಂದ್ರಲೋಕಕ್ಕೆ ಹೋಗಿಬರದು ಅಂ... ಮಂಡ್ಯಕ್ಕೋಗಿ ಬರದು ಅನ್ನಕಂಡ್ಯಾ?"

"ಅಲ್ಲಾ, ದೇಶಕಟ್ಟೋ ದುಡ್ಡನ್ನೆಲ್ಲ ಈ ವಿಜ್ಞಾನಿಗ... ತೆವುಲಿಗಾಕ್ತರಲ್ಲೊ ವಾಟಿಸ್ಸೆ?" ಎಂದ ಉಗ್ರಿ.

"ಏನೂ ಮಾಡಂಗಿಲ್ಲ ಕಣೊ ಉಗ್ರಿ. ಜಪಾನ್ ದೇಶದೋರು ಹೋಗಿಬಂದ್ರು, ಚೀಣಾದೋರು ಹೋಗಿಬಂದ್ರು ಅಂತ ನಮ್ಮ ಸೈನ್‌ಟಿಸ್ಟಗಳು ಅಳ್ತಾ ಕುಂತ್ರೇ ಮನಮೋಹನ ಸಿಂಗ ಏನು ಮಾಡಕ್ಯಾಯ್ತದೇಳು?"





"ಅಲ್ಲಾ, ಆಟೊಂತರ ದುಡ್ಡಲ್ಲಿ ಏಟು ಕ್ಯರೆ ಕಟ್ಟಬವುದಿತ್ತು" ಎಂದ ಕಾಳಮಾವ.

"ಇದೇನು ದ್ವಡಪ್ಪ ದ್ಯಾವೇಗೌಡನಂಗೆ ಮಾತಾಡ್ತಿ? ಕ್ಯರೆ ಕಟ್ಟಿ ಬತ್ತ ಬ್ಯಳದು, ಅನ್ನ ಉಂಡು ಮನಿಕಳದು ಒಂದು ಜೀವನವೆ?"

"ಅದ್ಕ ಮೀರಿದ ಬದುಕು ಯಾವ್ದದೆ ತೋರ್ಲ?"

"ತೋರಕ್ಯಾಗದಿಲ್ಲ ದ್ವಡಪ್ಪ, ಆದ... ಅಷ್ಟೇ ಬದುಕಲ್ಲ, ಕ್ಯರೆ ತುಂಬ ಬತ್ತ... ಬ್ಯಳದಾಗ್ಯಲ್ಲ ನೀವು ನಾಟಕ ಕಲಿತಿದ್ರಿ."

"ಅದು ಕಲೆ ಕಂಡ್ಯ."

"ಇದು ವಿಜ್ಞಾನ ದ್ವಡಪ್ಪ"

ವಿಶ್ವಾಸಾರ್ಹತೆ ಕಳೆದುಕೊಂಡ ಪೊಲೀಸು

ವರದಕ್ಷಿಣೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಘಟಿಸುವ ಇತರ ರೂಪಗಳಲ್ಲಿರಬಹುದಾದ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ಕುರಿತಂತೆ ರಾಷ್ಟ್ರೀಯಮಟ್ಟದಲ್ಲಿ 'ಮಹಿಳಾ ನ್ಯಾಯಾಲಯ' ಆಯೋಜಿಸಲು ಉದ್ದೇಶಿಸಿದೆ. ಇದರ ಪೂರ್ವಭಾವಿ ಸಭೆ ಮಂಡ್ಯದಲ್ಲಿ ನಡೆಯಿತು. ವರದಕ್ಷಿಣೆ ಕಿರುಕುಳದಿಂದ ನೊಂದ ಸುಮಾರು ಹದಿನೇಳು ಮಂದಿ ಮಹಿಳೆಯರು ಸಭೆಯ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. ಇವರ ಎಲ್ಲರ ಮಾತಿನಲ್ಲೂ ಎದ್ದು ತೋರಿದ ಅಂಶ ಎಂದರೆ ಪೊಲೀಸರ ನಿಷ್ಕ್ರಿಯತೆ! ದೂರು ನೀಡಿದರೂ ಸ್ವೀಕರಿಸದಿರುವುದು, ಸ್ವೀಕರಿಸಿದರೂ ಕಾನೂನುರೀತಿ ಕ್ರಮ ಜರುಗಿಸದೇ ಇರುವುದು, ಜರುಗಿಸದಿದ್ದರೂ ಹಾಳಾಗಲಿ ಎಂದರೆ ಕೆಲವು ಸಂದರ್ಭಗಳಲ್ಲಿ ಆರೋಪಿಯೊಂದಿಗೇ ಕೈಜೋಡಿಸಿ ದೂರು ನೀಡಿದವರಿಗೇ ಕಿರುಕುಳ ನೀಡಿರುವುದು ಇಂತಹವುಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದಾಗ ಹಲವು ಸಭಿಕರ ಅದರಲ್ಲೂ ಹಿರಿಯ ಮಹಿಳೆಯರ ಅಶ್ರುಧಾರೆ ಹರಿಯಿತು. ಕಾರ್ಯಕ್ರಮದಲ್ಲಿ ಮಹಿಳಾ ಪೊಲೀಸರೂ ಇದ್ದರು. ಸಮವಸ್ತ್ರದಲ್ಲಿದ್ದ ಅವರು ಬಂದದ್ದು ಕರ್ತವ್ಯ ಪಾಲಿಸಲು! ಇಂತಹ ಧೂರ್ತ ನಡವಳಿಕೆಗಳನ್ನು ಪ್ರದರ್ಶಿಸಿದ ವೀರ ಮಹಿಳಾ ಪೊಲೀಸರೂ ಅಲ್ಲಿ ಇದ್ದಿರಬಹುದು! ಸಾರ್ವಜನಿಕರು ತಮ್ಮನ್ನು ನೋಡುವ ದೃಷ್ಟಿಯ ಪ್ರತ್ಯಕ್ಷ ಪರಿಚಯವೂ ಅವರಿಗೆ ಆಗಿರಬೇಕು! ಒಟ್ಟಾರೆ ಸಭೆಯಲ್ಲಿ ಮೂಡಿ ಬಂದ ಅಭಿಪ್ರಾಯ ಪೊಲೀಸರು 'ವಿಶ್ವಾಸಾರ್ಹರಲ್ಲ' ಎಂಬುದು.

ಭಯೋತ್ಪಾದನೆ ದೇಶವನ್ನು ಕಾಡುತ್ತಿರುವ ಬಹುದೊಡ್ಡ ಪಿಡುಗು ಎಂದು ಬಹಳ ಜನರ ಅಭಿಪ್ರಾಯ. ಇದಕ್ಕಿಂತ ದೊಡ್ಡ ಅಪಾಯ ಒಂದಿದೆ. ಅದೆಂದರೆ ಪೊಲೀಸರು ಜನರ ವಿಶ್ವಾಸವನ್ನು ಕಳೆದುಕೊಂಡಿರುವುದು ಎನ್ನುತ್ತಾರೆ ಉನ್ನತ ಪೊಲೀಸ್ ಅಧಿಕಾರಿ ಅರುಣ್ ಬೋತ್ರ. ಜನರ ಬೆಂಬಲ, ಸಹಕಾರ ಇಲ್ಲದೆ ಭಯೋತ್ಪಾದನೆಯನ್ನು ತಡೆಯಲು ಅಸಾಧ್ಯ ಎಂಬುದು ಅವರ ಅಭಿಪ್ರಾಯವಾಗಿದೆ. ಇದಕ್ಕೆ ಉದಾಹರಣೆಯಾಗಿ ಅವರು ಅಮೆರಿಕದ ಸ್ಥಿತಿಯನ್ನು ತಿಳಿಸುತ್ತಾರೆ. ದೇಶವನ್ನೇ ನಡುಗಿಸಿದ 9/11 ಘಟನೆಯ ನಂತರ ಅಲ್ಲಿ ದೊಡ್ಡಮಟ್ಟದ ಭಯೋತ್ಪಾದನಾ ಕೃತ್ಯಗಳು ನಡೆದಿಲ್ಲ. ಇದಕ್ಕೆ ಪ್ರಮುಖ ಕಾರಣ ಅಲ್ಲಿನ ಪೊಲೀಸಿನವರು ಚಾಣಾಕ್ಷರು, ಆಧುನಿಕ ತಂತ್ರಗಳನ್ನು, ಆಯುಧಗಳನ್ನು ಬಳಸುತ್ತಾರೆ ಎನ್ನುವುದಲ್ಲ. ಪೊಲೀಸರಿಗೂ ಸಾರ್ವಜನಿಕರಿಗೂ ಇರುವ ಮಧುರ ಬಾಂಧವ್ಯದ ಫಲ ಇದು ಎಂಬುದು ಅವರ ನಿಲುವಾಗಿದೆ. ಭಯಾನಕ ಸೆಪ್ಟೆಂಬರ್ ಘಟನೆಯ ನಂತರ ಅಲ್ಲಿ ಹಲವು ಕಠಿಣ ಕಾನೂನನ್ನು ಜಾರಿಗೆ ತಂದಿದ್ದಾರೆ. ಅವುಗಳನ್ನೆಲ್ಲ ಸಾರ್ವಜನಿಕರು ಯಾವುದೇ ಗೊಣಗಾಟ ಇಲ್ಲದೆ ಪರಿಪಾಲಿಸುತ್ತಾರೆ. ಭಾರತದಲ್ಲಿ ವಿಶ್ವಾಸಾರ್ಹತೆಯ ಕೊರತೆಯಿಂದಾಗಿ ಪೊಲೀಸರ ಪ್ರತಿಯೊಂದು ಕ್ರಮವನ್ನೂ ಸಂಶಯಿಸಲಾಗುತ್ತದೆ.



ನಮ್ಮ ರಾಜ್ಯವನ್ನೇ ಪರಿಗಣಿಸಿ. ಸರ್ಕಾರದ ಮೇಲೆ ಯಾವುದೇ ಆರೋಪ ಬರಲಿ, ಮೊದಲು ಸರ್ಕಾರದಿಂದ ಉಡಾಫೆಯ ಉತ್ತರ. ಒತ್ತಡ ಹೆಚ್ಚಿದರೆ ಪೊಲೀಸರಿಂದ ತನಿಖೆ. ಪೊಲೀಸರ ಮೇಲೆ ಆಡಳಿತ ಪಕ್ಷಕ್ಕೆ ಅತಿಯಾದ ವಿಶ್ವಾಸ. ಆದರೆ ವಿರೋಧ ಪಕ್ಷಗಳಿಗೆ ಅದು ಇಲ್ಲ, ಅವರಿಗೆ ಪೊಲೀಸ್ ತನಿಖೆಯ ಮೇಲೇ ಸಂಶಯ! ಅವರು ಕೇಳುವುದು ಸಿಬಿಐ ತನಿಖೆ. ಸರ್ಕಾರಕ್ಕೆ ಅದು ಬೇಕಿಲ್ಲ. ಪೊಲೀಸರು ಬೇಡ ತಾನೆ, ಹಾಗಾದರೆ ಸಿಓಡಿ ತನಿಖೆ ನಡುಸ್ತೀವಿ ಎನ್ನುತ್ತೆ ಸರ್ಕಾರ. ಸಿಓಡಿ ಅನ್ನುವುದು ಏನು? ಹಣ, ಶಿಫಾರಸ್ಸು ಮಾಡಿಸಲಾರದೆ ಪೊಲೀಸ್ ಇಲಾಖೆಯಲ್ಲಿ ಯಾವುದಾದರೂ ಒಳ್ಳೆಯ ಸ್ಥಳಕ್ಕಾಗಿ ಚಾತಕಪಕ್ಷಿಗಳಂತೆ ಕಾಯ್ದು ಕುಳಿತಿರುವ ಅಸಂತುಷ್ಟ ಪಡೆ! ಅದು ಇರುವುದೂ ಸರ್ಕಾರದ ಅಧೀನದಲ್ಲಿ! ವಿರೋಧ ಪಕ್ಷಗಳಿಗೆ ಅದರ ಮೇಲೇ ವಿಶ್ವಾಸ ಇಲ್ಲ.

ತಮಾಷೆ ಮಾತು ಅಂದರೆ ಅಧಿಕಾರದಲ್ಲಿದ್ದಾಗ ವಿಶ್ವಾಸದ ಗಣಿಯಂತೆ ಕಾಣುತ್ತಿದ್ದ ಪೊಲೀಸ್ ಇಲಾಖೆ ವಿರೋಧ ಪಕ್ಷಕ್ಕೆ ಬಂದು ಕುಳಿತಾಗ ವಿಶ್ವಾಸಹೀನ ಆಗುತ್ತೆ ಎಂಬುದು! ಸತ್ಯ ಸಂಗತಿ ಎಂದರೆ ಇಡೀ ಇಲಾಖೆ ಅಧಿಕಾರಸ್ಥರ ಗುಲಾಮನಾಗಿ ಗೋಸುಂಬೆಗಿಂತಲೂ ಚೆನ್ನಾಗಿ ತಮ್ಮ ಬಣ್ಣ ಬದಲಾಯಿಸಿಕೊಳ್ಳುತ್ತದೆ. ಅವರು ರಕ್ಷಿಸುವುದು ಕಾನೂನನ್ನಲ್ಲ, ಅಧಿಕಾರಸ್ಥರನ್ನ. ಈ ಪ್ರವೃತ್ತಿ ಇಡೀ ಇಲಾಖೆಯನ್ನು ಸಮಾಜದ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಇದು ನಾಚಿಕೆಗೇಡಿತನ ಸಂಗತಿ.

ಇತ್ತೀಚಿನ ಘಟನೆಗಳನ್ನೇ ನೋಡೋಣ.

ಚರ್ಚ್‌ಗಳ ಮೇಲಿನ ದಾಳಿ ಮಾಡಿದ ಅಪರಾಧದ ಮೇಲೆ ಭಜರಂಗದಳದ ಮಾಜಿ ಅಧ್ಯಕ್ಷ ಮಹೇಂದ್ರ ಕುಮಾರನನ್ನು ಬಂಧಿಸಲಾಯ್ತು. ಯಡಿಯೂರಪ್ಪ ವೀರಾವೇಶದಿಂದ ಪ್ರಾರ್ಥನಾ ಮಂದಿರದ ಮೇಲೆ ದಾಳಿ ಮಾಡಿದವರನ್ನು ಗೂಂಡಾ ಕಾಯ್ದೆಯನ್ವಯ ಬಂಧಿಸುತ್ತೇವೆ ಎಂದು ಸಾರಿದರು. ಆದರೆ ಆದದ್ದೇನು? ಗೂಂಡಾ ಕಾಯ್ದೆಯಡಿ ಬಂಧಿಸಲು ಪೊಲೀಸರು ತಂದ ನೋಟೀಸನ್ನು ತೆಗೆದುಕೊಳ್ಳಲೇ ಅವ ನಿರಾಕರಿಸಿದ! ಗೃಹಮಂತ್ರಿ ವಿ.ಎಸ್. ಆಚಾರ್ಯ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ಮಾಡಿದವರ ಮೇಲೆ ಗೂಂಡಾ ಕಾಯ್ದೆ ಅನ್ವಯಿಸುವ ಯಾವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲ ಎಂದರು! ಹಾಗಾದರೆ ಈ ಘಟನೆಯಲ್ಲಿ ಅಪರಾಧಿ ಯಾರು? ಮುಖ್ಯಮಂತ್ರಿಯೇ? ಗೃಹಮಂತ್ರಿಯೆ? ಜಿಲ್ಲಾಧಿಕಾರಿಯೇ? ಅದನ್ನು ಜಾರಿ ಮಾಡಲು ಹೋದ ಪೊಲೀಸ್ ಅಧಿಕಾರಿಯೆ? ಅಥವಾ ನೋಟೀಸ್ ಅನ್ನು ನಿರಾಕರಿಸಿದ ಆರೋಪಿಯೆ? ಕುಸಿದು ಬಿದ್ದ ಇಂತಹ ಆಡಳಿತ ಯಂತ್ರ... ಮೇಲೆ ಜನರ ವಿಶ್ವಾಸ ಹೇಗೆ ಬರಬೇಕು?

ಮುಂಬಯಿ ಹತ್ತಿ ಉರಿಯಿತು. ಇದಕ್ಕೆ ಕಿಡಿ ಹಚ್ಚಿದ... ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಮುಖ್ಯಸ್ಥ ರಾಜ್‌ಠಾಕ... ಕೇಂದ್ರದ ಒತ್ತಾಯದಿಂದ ಆತನ ಬಂಧನ ಆಯ್ತು... ನ್ಯಾಯಾಲಯ ಮೊದಲು ಜಾಮೀನು ನಿರಾಕರಿಸಿತು... ನಂತರ ನೀಡಿತು! ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿ... ಹೇಳ್ತಾರೆ– 'ಇದು ತಾತ್ಕಾಲಿಕ ಜಾಮೀನು ಅಷ್ಟೆ. ಎರಡ... ದಿವಸಗಳ ನಂತರ ಮತ್ತೆ ಬಂಧಿಸಬಹುದು!' ಇಂತಹ... ಮಾತುಗಳಲ್ಲಿ ಯಾರಿಗೆ ನಂಬಿಕೆ ಬರುತ್ತದೆ?

ಅನಾಕ್

ಎಚ್.ಎಲ್. ಕೇಶವಮೂರ್ತಿ

ಪೊಲೀಸಿನವರು ಯಾಕೆ ಇಷ್ಟು ಅಮಾನವೀಯವಾ... ವರ್ತಿಸುತ್ತಾರೆ? ಪ್ರಾಯಶಃ ಇದು ಬ್ರಿಟಿಷರ ಬಳುವ... ಇರಬೇಕು. ಕ್ರೌರ್ಯ ಹೆಚ್ಚಿದ್ದಷ್ಟು ಆಡಳಿತ ಸುಭ... ಎಂದು ಅವರು ನಂಬಿದ್ದರು. ರಾಷ್ಟ್ರೀಯ ಚಳವಳಿಯ... ಹುಟ್ಟಡಗಿಸಲು ಅವರು ಬಳಸಿದ್ದು ಇದೇ ಕ್ರೂರ ಪೊಲೀಸ... ಸ್ವಾತಂತ್ರ್ಯ ಬಂದ ನಂತರವೂ ಪೊಲೀಸರ ದುರ್ವರ್ತ... ಆಡಳಿತಗಾರರ ಮನಸ್ಸಿನಿಂದ ದೂರ ಹೋಗಲಿಲ್ಲ, ಅವ... ಪೊಲೀಸರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಬಯಸಿದರು... ದಿನಗಳೆದಂತೆ ಪೊಲೀಸರನ್ನು ತಮ್ಮ ಹಿತ... ಬಳಸಿಕೊಳ್ಳತೊಡಗಿದರು. ತಾವಿರುವುದೇ ಅಧಿಕಾರ... ರಾಜಕಾರಣಿಗಳ ರಕ್ಷಣೆಗೆ ಎಂಬ ಮನಸ್ಥಿತಿಗೆ ಕ್ರಮೇಣ... ಪೊಲೀಸರೂ ಬಂದು ತಲುಪಿದರು. ಇದು ಭಾರತೀಯ... ಪೊಲೀಸ್ ವ್ಯವಸ್ಥೆಯ ದುರಂತ.

ಈ ವಿಷ ವರ್ತುಲದಿಂದ ಪೊಲೀಸ್ ಇಲಾಖೆಯನ್ನ... ಪಾರು ಮಾಡಿ ಅದಕ್ಕೆ ಮಾನವೀಯ ಸ್ಪರ್ಶ ನೀಡಲ... ಸಾಧ್ಯವೆ?

ದೇಶದೆಲ್ಲೆಡೆ ಭಯೋತ್ಪಾದನೆ ನಿಗ್ರಹ ಕಾನೂನುಗ... ಬಗ್ಗೆ ಚರ್ಚೆ ನಡೆಯುತ್ತಿದೆ. ರಾಷ್ಟ್ರನಾಯಕರ... ಎನ್ನಿಸಿಕೊಂಡವರು ಇದನ್ನು ಕುರಿತು ಟಿವಿಗಳ...

...ಯಂಗವ್ರುನ ಅಂತ ತಿಳಿಯಕ್ಕೆ ಹನ್ನೆರಡು ಸಾವಿರ ಕೋಟಿ ಕರಚು ... ಯಾವ ಸೀಮೆ ಇಜ್ಞಾನುವುಲ? ತಿನ್ನಕ್ಕಿಟ್ಟು ತಿಗದ ಮ್ಯಾಲೊಂದು ... ಯಲ್ಲಾರಿಗೂ ಸಿಕ್ಕಿದ ಮ್ಯಾಲೆ ವಿಸ್ತಾರ ಮಾಡಿ. ಅದ್ಯಾವುದೂ ... ವೆ ಬಂದು ಜನ್ನಲ್ಲ ಬಂಬಾಯಿಕಡಿಕೆ ಒತ್ತಾಯಿದ್ದರಂತೆ. ಅವುರ ... ಮಾಡಿ ನಿಲ್ಲಕ್ಕಾಗದಿಲವೆ."

...ನಿಜವಾಗ್ಲು ನೀನು ಮನಮೋಹನ ಸಿಂಗನ ಜಾಗದಲ್ಲಿರಬೇಕಾಗಿತ್ತು ..."

...ರಂಗನ ಮುಂದೆ ಸಿಂಗನೆ, ಅವುನೆಲ್ಲಿ ನಾನೆಲ್ಲಿ?"

...ಎಜ್ಞಾಟ್ಲಿ, ಕರಟ್ ದ್ಯಾವಪ್ಪ, ನೀನೆ ರಂಗ ಅವುನೆ ಸಿಂಗ. ಇಲ್ಲಿ ...ಗೊಂಡು ಬಂಬಾಯಿಗೆ ಬಂದು ಗೂಸು ತಿನ್ನೊ ಬಿಹಾರದ ಜನಗಳ ... ಕರುಣೆ ತೋರಿದ್ದಿಯಲ್ಲಾ ರಿಯಲಿ ಗ್ರೇಟ್."

...ಬಂಬಾಯಿಗೆ ಬಂದು ಗೂಸು ತಿಂದೋರ್ಯಾರ್ಲ?" ಎಂದಳು ಜುಮ್ಮಿ.

...ನೋಡಕ್ಕ, ಬಂಬಾಯಿಲಿ ಭಾಳಠಾಕ್ರೆ ಅಂತ ವಬ್ಬವುನೆ. ಅವುನು ...ನ ವಿಷಯದಲ್ಲಿ ಭೈರಪ್ಪಂಗೊ ಅದೇ ತರ. ಬಂಬಾಯಿಗೆ ಯಾರು ... ಅವುರನ್ನೆಲ್ಲ ದ್ವೇಷ ಮಾಡ್ತನೆ."

...ಅಂಗರೆ ಬಂಬಾಯಿ ಅವುನ್‌ದಾ?"

...ಅವುನ್‌ದೂ ಅಲ್ಲ, ಅವುರಪ್ಪಂದೂ ಅಲ್ಲ. ಈಗ ಬೆಂಗಳೂರಲ್ಲಿ ...ಯಣಗೌಡ, ಇನ್ಯಾವನೊ ಇನ್ನಬ್ಬ ಈ ಊರು ನಮ್ಮದು ಅಂತ ...ದ್ದರಲ್ಲ, ಅದೇ ತರ ಅವುನು ಬಂಬಾಯಿ ನಮ್ಮದು ಅಂತ ...ಯಿರೋರತ್ರ ಹಪ್ತ ವಸೂಲಿ ಮಾಡಿಕಂಡು ಕುಬೇರಾಗ್ಯವುನೆ. ಅವುನ ಅಪ್ಪನ್ನ ಮೀರಿಸ್ಯವುನೆ. ಅವುರ ಪ್ರಕಾರ ಬಂಬಾಯಿಗೆ ಯಾರೂ ...ಗಿಲ್ಲವಂತೆ."

...ಬಂಬಾಯಿ ಸಂತಿದ್ದಂಗಪ್ಪ, ಸಂತಿಗೆ ಬರಿಬ್ಯಾಡ ಅನ್ನಕ್ಕೆ ಇವುನ್ಯಾವ ...ನಾಯ್ಕುನ್ನ?" ಎಂದ ಸೀರ.

...ಅಲ್ಲಾ, ಜನ ಬಂಬಾಯಿಗೋಯ್ತರೆ ಅಂದ್ರೆ ಯಾಕೋದರೂ? ಇದೇ ...ರೋರೆ ಸುಮಾರು ಐವತ್ತು ಜನವುರಪ್ಪ ಬಂಬಾಯಿಲಿ. ಇಲ್ಲಿ ...ಗಿದ್ರೆ ಅವುರ್ಯಾಕೋಯ್ತಿದ್ರೂ? ವಟ್ಟಿಗೆ ಬಟ್ಟೆಗೆ ಇಲ್ದೆಯಿರದ್ಕಲವೆ ...ಹೋದುದ್ದು?" ಎಂದ ಕಾಳಮಾವ.

...ನಿಜ ದ್ವಡಪ್ಪ, ಊರು ಜನ ಊರು ಬುಟ್ಟು ಸಿಟಿ ಸೇರ್ತರೆ ಅಂದ್ರೇ ...ವಿ ಪೂರ್ ಫೆಲೊಸ್. ನಮ್ಮ ಸರ್ಕಾರ, ವಿಜ್ಞಾನಿಗಳು ಮಾಡೊ ...ಷ್ ಕ್ಯಲಸಕ್ಕೆ ಹನ್ನೆರಡು ಸಾವುರ ಕೋಟಿ ಕೊಡದಕಿಂತ ಬಿಹಾರ, ... ರಾಜ್ಯಗಳಿಗೆ ಖರ್ಚು ಮಾಡಿದ್ರೆ ಅವುರ್ಯಾರೂ ಬಂಬಾಯಿಗೆ ಬರದಿಲ್ಲ, ...ನೂ ಉಗ್ರಿ?"

...ಯಲ್ಲಾ ನ್ಯಟ್ಟಗಿದ್ರೆ ಹುಟ್ಟಿದೂರ ಯಾವನು ಬುಟ್ಟೊದನಯ್ಯಾ?"

...ಅದೇಳು ಮತ್ತೆ!"

■

...ಭಿಸುತ್ತಾ 'ಬೇಕು' ಇಲ್ಲ 'ಬೇಡ' ಎಂದು ಟೀವಿಯಿಂದ ...ದಿಸುತ್ತಿರುತ್ತಾರೆ. ಈ 'ಬೇಕು', 'ಬೇಡ'ಗಳು ನಿಂತಿರುವುದು ಅವರ ...ಯ ಲೆಕ್ಕಾಚಾರದ ಮೇಲೆ. ಇಂತಹ ಕಾನೂನನ್ನು ಜಾರಿಗೊಳಿಸಬೇಕಲ್ಲ ..., ಅಂದರೆ ಪೊಲೀಸರವರನ್ನು ಯಾರೂ ಕೇಳಿದ್ದಿಲ್ಲ! ಈ ನೋವು ...ಷ್ ಬೋತ್ರಾ ಅಂತಹ ಪೊಲೀಸ್ ವರಿಷ್ಠಾಧಿಕಾರಿಗಳಿಗಿರುವಂತಿದೆ. ...ದುವರೆದು ಅವರು ಹೇಳುತ್ತಾರೆ-ಭಯೋತ್ಪಾದಕ ನಿಗ್ರಹದಲ್ಲಿ ಸತತವಾದ ... ಇಲಾಖೆಯ ಸುಧಾರಣೆಯತ್ತ ಗಮನವನ್ನು ಸೆಳೆಯುತ್ತದೆ. ಗುಣಾತ್ಮಕ ...ಲೀಸ್ ವ್ಯವಸ್ಥೆ ಇಂದಿನ ಅಗತ್ಯ. ಪೊಲೀಸ್ ಪಡೆಯನ್ನು ...ವುದರಿಂದಾಗಲಿ, ಸುಧಾರಿಸಿದ ಉಪಕರಣಗಳನ್ನು ನೀಡುವುದರಿಂದಾಗಲಿ ...ತ್ಪಾದನಾ ನಿಗ್ರಹ ಸಾಧ್ಯವಿಲ್ಲ, ರಾಜಕಾರಣಿಗಳ ಹಿಡಿತದಿಂದ ಇಲಾಖೆಯನ್ನು ... ಮಾಡಬೇಕಾಗಿದೆ. ಇಲಾಖೆಗೆ ಅಗತ್ಯವಾದ ಸಂಪನ್ಮೂಲ ಒದಗಿಸಿ ... ಅಟಾನಮಿ ನೀಡುವುದು ಇಂದಿನ ಅಗತ್ಯವಾಗಿದೆ.

...ಲ್ಲ ಇದನ್ನೆಲ್ಲ ಮಾಡಿದರೆ ರಾಜಕಾರಣಿಗಳ ದರ್ಬಾರು ನಡೆಯುವುದು ...?

ಪೆಟ್ರೋಲ್ಲೊ ಡೀಸೆಲ್ಲೋ

...ಮೆರಿಕ ಪೊಲೀಸ್ ಪಡೆ, ಭಾರತೀಯ ಪಡೆ ಈ ಇಬ್ಬರಲ್ಲಿ ಯಾವ ...ದಕ್ಷ!

...ಮೆರಿಕ ಪಡೆ!

...ದಲ್ಲ, ಸ್ವಲ್ಪ ತಾಳಿ.

...ಲ್ಲಿ ಹಾಗೇನೇ ಅಲ್ಲೂ ಪೊಲೀಸರಿಗೆ ವಾಹನಗಳಿರುತ್ತವೆ. ಈ ...ನಗಳಿಗೆ ಇಂಧನ ತುಂಬಿಸಬೇಕಲ್ಲ, ಹಾಗೆ ಮಾಡುವಾಗ ಒಂದು ...ಸ್ ಪಡೆಯಿಂದಲೇ ಸರ್ಕಾರಕ್ಕೆ 42,000 ಪೌಂಡು ನಷ್ಟ ಆಯ್ತಂತೆ.

...ಯಾಕೆ ಇಷ್ಟೊಂದು ನಷ್ಟ ಅಂದರೆ ವಾಹನಗಳು ಕೆಟ್ಟು ನಿಂತಿದ್ದಕ್ಕಂತೆ. ... ಯಾಕೆ ಹೀಗೆ ಕೋಪಿಸಿಕೊಂಡವು ಅಂದರೆ ಅಲ್ಲಿನ ಪೊಲೀಸ್ ...ದರು ತಪ್ಪು ಇಂಧನ ಬಳಸಿದ್ದರಿಂದ! ಅರ್ಥಾತ್ ಡೀಸೆಲ್ ಗಾಡಿಗಳಿಗೆ ...ಲ್ ತುಂಬಿಸುತ್ತಿದ್ದರಂತೆ, ಪೆಟ್ರೋಲ್ ಗಾಡಿಗೆ ಡೀಸೆಲ್ ತುಂಬಿಸುತ್ತಿದ್ದರಂತೆ!

...ದು ಒಂದು ಬೆಟಾಲಿಯನ್ ಕತೆಯಲ್ಲ, ಸುಮಾರು ಬೆಟಾಲಿಯನ್‌ಗಳಲ್ಲಿ ... ಕಥೆಯಂತೆ.

...ನ್ನು ತಡೆಯುವುದಕ್ಕೆ ಈಗ ಏನು ಮಾಡುತ್ತಿದ್ದಾರಂತೆ ಅಂದರೆ.... ... ತುಂಬಿಸೋ ಜಾಗದಲ್ಲಿ ಹಳದಿ ಚೀಟಿ ಇದ್ದು ಯಾವ ರೀತಿಯ ... ಬಳಸಬೇಕು ಅಂತ ಸೂಚಿಸುತ್ತಂತೆ. ಇಷ್ಟಾದರೂ ತಪ್ಪುಗಳು ನಡೆಯುತ್ತಲೇ ...ತೆ. ಅದಕ್ಕೆ ಏನು ಮಾಡಿದರಂತೆ, ಇಂಧನದ ಕ್ಯಾಪ್ ತೆಗೆಯುತ್ತಿದ್ದಂತೆ ... ಡೀಸೆಲ್ ವಾಹನ' ಅಂತ ಧ್ವನಿ ಹೊರಡುವಂತೆ ಮಾಡಲಾಗಿದೆಯಂತೆ!

...ಗೆ ಹೇಳಿ ಯಾರು ಬುದ್ಧಿವಂತರು? ■

ಶತಮಾನಗಳು ಮತ್ತು ಮಾನವ

ಮರೆಯುವ ಮುನ್ನ

ಪಿ. ಲಂಕೇಶ್ ಫೆಬ್ರವರಿ 17, 1991

ಮನುಷ್ಯ ವರ್ಷಗಳು, ಶತಮಾನಗಳು ಉರುಳಿದಂತೆ ಉತ್ತಮನಾಗುತ್ತಾನೆಯೇ? ಶಿಕ್ಷಣವಾಗಲಿ, ಕಷ್ಟಗಳಾಗಲಿ, ದುರಂತವಾಗಲಿ ಇವನಿಗೆ ಪಾಠ ಕಲಿಸುತ್ತವೆಯೇ?

ಈ ಪ್ರಶ್ನೆಗೆ ನಮ್ಮ ಎದುರಿನ ವಾಸ್ತವ 'ಇಲ್ಲ' ಎಂದು ಉತ್ತರಿಸುತ್ತದೆ. ರಷ್ಯಾದೇಶ ಸಾವಿರಾರು ವರ್ಷ ಅರಸೊತ್ತಿಗೆಯ ದಬ್ಬಾಳಿಕೆ ಅನುಭವಿಸಿತು. ಆಮೇಲೆ ಇದೇ ರಷ್ಯಾ ಎಪ್ಪತ್ತು ವರ್ಷ ಕಮ್ಯೂನಿಸ್ಟರ ಬೂಟಿನಡಿ ನರಳಿತು. ಇದ್ದಕ್ಕಿದ್ದಂತೆ ಗರ್‌ಬಚೋವ್ ಜನಕ್ಕೆ ಉಸಿರಾಡಲು ಅವಕಾಶಕೊಟ್ಟ, ಇದರಿಂದ ಕೃತಜ್ಞತೆಯಾಗಲಿ, ಸಂತೋಷವಾಗಲಿ ಮೂಡಲಿಲ್ಲ.




ರಷ್ಯಾದ ಯಹೂದ್ಯರು ತಮ್ಮ ತವರೆಂದು ಭ್ರಮಿಸುವ ಇಸ್ರೇಲ್‌ಗೆ ಲಕ್ಷ, ದಶಲಕ್ಷ ಸಂಖ್ಯೆಯಲ್ಲಿ ವಲಸೆ ಹೊರಟಿದ್ದಾರೆ; ರಷ್ಯಾದ ಇತರೇ ಜನ ಎಲ್ಲಿಗೂ ಹೋಗಲಾರದೆ ಸ್ವಾತಂತ್ರ್ಯ ನೀಡಿದವರ ಮೇಲೆ ಎಗರಿ ಬೀಳುತ್ತಿದ್ದಾರೆ.

ಇಸ್ರೇಲ್‌ಗೆ ಹೋಗುತ್ತಿರುವ ಜ್ಯೂಗಳನ್ನು ನೋಡಿ. ಈಗಾಗಲೇ ಇಸ್ರೇಲ್ ದೇಶ ನೆಲ ಸಾಕಾಗದೆ ಪರದಾಡಿದೆ; ನೆರೆಯ ಮುಸ್ಲಿಂ ರಾಷ್ಟ್ರಗಳಿಂದ (ಮುಖ್ಯವಾಗಿ ಜೋರ್ಡನ್‌ನಿಂದ) ನೆಲ ಕಿತ್ತುಕೊಂಡು, ಪ್ಯಾಲಸ್ಟೇನ್ ನಗರವನ್ನು ಆಕ್ರಮಿಸಿಕೊಂಡು ಇಡೀ ವಿಶ್ವದ ಸಿಟ್ಟು ಕೆರಳಿಸಿದೆ. ಅರಾಫತ್ ಮತ್ತು ಆತನ ಪ್ಯಾಲಸ್ಟೇನ್ ಅನುಯಾಯಿಗಳು ದಿಕ್ಕೆಟ್ಟು ಅಲೆಯುತ್ತ ಯಹೂದ್ಯರ ಮೇಲೆ ಕೆಂಡ ಕಾರುತ್ತಿದ್ದಾರೆ. ಇಷ್ಟಾದರೂ ಇಸ್ರೇಲಿನ ಯಹೂದ್ಯ ಸರ್ಕಾರ ರಷ್ಯಾದ ಜ್ಯೂಗಳನ್ನು ಆಹ್ವಾನಿಸುತ್ತದೆ; ಅವರಿಗಾಗಿ ಆಕ್ರಮಿಸಿಕೊಂಡ ಜಾಗಗಳಲ್ಲಿ ಡೇರೆ ಹಾಕಿಕೊಡುತ್ತಿದೆ. ಜಾತಿ ಪ್ರೇಮ, ಜಾತಿಗಾಗಿ ನೆಲದ ಪ್ರೇಮ ಎಂಥ ನೀಚ ಘಟ್ಟ ತಲುಪಬಹುದು!

ಒಂದು ದೊಡ್ಡ ಖಂಡದಷ್ಟು ವಿಸ್ತಾರವಾದ, ಪ್ರಕೃತಿ ಸಂಪತ್ತಿನಿಂದ ತುಂಬಿಹೋಗಿರುವ ರಷ್ಯಾ ತಮ್ಮ ತಾಯಿನೆಲವೆಂದು ಒಪ್ಪಿಕೊಳ್ಳದೆ ಮರುಭೂಮಿಯಾದ ಇಸ್ರೇಲ್‌ಗೆ ವಕ್ಕರಿಸಿ, ಜಾತಿಯ ಕಾರಣಕ್ಕಾಗಿ ವಕ್ಕರಿಸಿ ಅವಾಂತರ ಎಬ್ಬಿಸುವ ಈ ಜನ ಅಕ್ಷರಸ್ಥರಾದರೂ ವಿದ್ಯಾವಂತರಲ್ಲ, ಮುಂದುವರಿದಿದ್ದರೂ ಸುಸಂಸ್ಕೃತರಲ್ಲ, ಧರ್ಮಕ್ಕಾಗಿ ಬಡಿದಾಡಿದರೂ ಧಾರ್ಮಿಕರಲ್ಲ... ಅಂದಮೇಲೆ ಶತಮಾನಗಳು ಮನುಷ್ಯನನ್ನು ಉತ್ತಮಗೊಳಿಸುತ್ತವೆ ಎಂದು ಹೇಗೆ ಹೇಳುವುದು?

"ಇಂಪ್ರಾಪರ್!"



ಮೊನ್ನೆ ನನ್ನ 'ಟೀಕೆ-ಟಿಪ್ಪಣಿ' ಎಂಬ ಪುಸ್ತಕಕ್ಕೆ ಕೊನೇ 'ಟಚಸ್' ಕೊಡುತ್ತಿದ್ದಾಗ (ಇದು ಮತ್ತೆ ಮಾರ್ಚ್‌ನ ನನ್ನ ಹುಟ್ಟುಹಬ್ಬಕ್ಕೆ ಸರಿಯಾಗಿ ಬಂದರೆ ಬರವಣಿಗೆಯ ಹುಮ್ಮಸ್ಸು ಹೆಚ್ಚಾಗಬಹುದೆಂಬ ಸಣ್ಣ ಆಸೆ).. ದುಗುಡದಿಂದ ಕೂತೆ. ನಾನೇ ಖುದ್ದು ಪ್ರತಿಯೊಂದು ಪುಟವನ್ನೂ ನೋಡಿಕೊಳ್ಳದೇ ಇದ್ದಾಗ ಎಷ್ಟೋ ದಡಾಬಂದ್ ಆಗಿರುತ್ತದೆ. ಕೆಲವು ಪುಟಗಳಲ್ಲಿ ಇಂಕ್ ಸರಿಯಾಗಿ ಬಿದ್ದಿಲ್ಲ; ಕೆಲವು ಪುಟಗಳು ಮೊಳೆ ಇಂಕಿನಿಂದ ಮೆತ್ತಿಕೊಂಡಿವೆ; ಪ್ರತಿಯೊಂದು ಪುಟದಲ್ಲಿ ಲೇಖನಕ್ಕೆ ಸಂಬಂಧಿಸಿದ ಪುಟ್ಟ ಶೀರ್ಷಿಕೆಯನ್ನು ತಿದ್ದಿಲ್ಲ, ಅನೇಕ ಸಲ ಕಾಗದ ಕೊಂಡಿದ್ದರಿಂದ ನವರಂಗ್‌ನಿಂದ ಪುಟಗಳು ಅಸಹ್ಯ ಹುಟ್ಟಿಸುತ್ತವೆ.


ಮೇಲಿನದ್ದೆಲ್ಲ ನನ್ನ ಕಣ್ಣಿಗೆ ಮಾತ್ರ ತೀರಾ ಕೆಟ್ಟದಾಗಿ ಕಾಣಿಸುತ್ತಿರಬಹುದು. ಆದರೆ ನನ್ನ ಎರಡು, ಮೂರು ನೆಚ್ಚಿನ ಲೇಖನಗಳು ಈ ಸಂಪುಟದಲ್ಲಿ ಕಾಣಿಸುತ್ತಿಲ್ಲ, ಒಂದು ಪಕ್ಷಿಪ್ರೇಮಿ ಸಲೀಮ್ ಆಲಿ ಕುರಿತದ್ದು; ಇನ್ನೊಂದು ಒಂದು ಇಡೀ ದಿನದ ರಜಾ ವಿವರಿಸುವ ಪ್ರಬಂಧ. ಹಾಗೆಯೇ ಬೆಳಗ್ಗೆ ಐದೂವರೆಗೆ ಮೈಸೂರು ಬಿಟ್ಟು ಪ್ರಯಾಣಿಸುತ್ತಿದ್ದಾಗ ಆದ ಅನುಭವ- ಈ ನನ್ನ ಸಾಮಾನ್ಯ ವ್ಯಕ್ತಿತ್ವಕ್ಕೆ ಬೆಳಗ್ಗಿನ ಸೂರ್ಯ, ಹಸಿರು, ತಂಗಾಳಿ ಮತ್ತು ಮೌನ ನೀಡಿದ ಅಸಾಧ್ಯ ಆಧ್ಯಾತ್ಮದಂಥ ಅನುಭವ.

ನನಗೆಂದೂ ಮಹಾನ್ ವ್ಯಕ್ತಿಗಳು ಹೇಳುವ ಆಧ್ಯಾತ್ಮ ಅನುಭವವೇ ಆಗಿಲ್ಲ. ನನಗಾಗಿರುವುದೆಲ್ಲ ಈ ಸೂರ್ಯ, ಚಂದ್ರ, ನಕ್ಷತ್ರ, ಭೂಮಿಯ ಜೊತೆಗಿನ ವಿಶಿಷ್ಟ ಸಂತೋಷ ಮಾತ್ರ.

ಈ 'ಟೀಕೆ-ಟಿಪ್ಪಣಿ' ಪುಸ್ತಕವನ್ನು ಕೊನೆಗಳಿಗೆಯಲ್ಲಿ ನೇರಗೊಳಿಸಲು ಯತ್ನಿಸುತ್ತಲೇ ಕಾದಂಬರಿಯೊಂದನ್ನು ಬರೆಯಬೇಕೆಂದು ತೀರ್ಮಾನಿಸಿದೆ. ನನ್ನನ್ನು ನಾನು ಒಂದು ಕೆಲಸಕ್ಕೆ ಕಟ್ಟಿಹಾಕಿಕೊಂಡೊಡನೆ ದಿಗ್ಭ್ರಮೆ ಶುರುವಾಗುತ್ತದೆ. ಒಂದು ವಾರ ಈ ಸಂಕಟದಲ್ಲಿದ್ದು 'ಇನ್ನಷ್ಟು ವಾರ ಹೋಗಲಿ' ಎಂದು ಸುಮ್ಮನಾದೆ. ಇದ್ದಕ್ಕಿದ್ದಂತೆ ನಮ್ಮ ಅನೇಕ ಸಾಹಿತಿಗಳು ಮಾಡುವಂತೆ ಈ ಕಾದಂಬರಿಗಾಗಿ ವಿಷಯ, ಮಾಹಿತಿ ಸಂಗ್ರಹಿಸಿದರೆ ಹೇಗೆ ಎಂದು ಕೇಳಿಕೊಂಡೆ. ಸಾಮಾಜಿಕ ಕಾದಂಬರಿಯನ್ನು ಬರೆಯುವಾಗ ಕೂಡ ಅನೇಕರು ವೈದ್ಯಕೀಯ, ಸಮಾಜಶಾಸ್ತ್ರ ಇತ್ಯಾದಿಯ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾರೆ; ಟಿಪ್ಪಣಿ ಬರೆದುಕೊಳ್ಳುತ್ತಾರೆ. ಆದ್ದರಿಂದಲೇ ಅವರ ಕಾದಂಬರಿಗಳಲ್ಲಿ ಔಷಧಿ, ಇಂಜಕ್ಷನ್, ಕಾಯಿಲೆಗಳ ಹೆಸರುಗಳೆಲ್ಲ ಬರುತ್ತವೆ. ಯಂಡಮೂರಿ ಕಾದಂಬರಿಯಲ್ಲಿ ಸೀರೆಗಳ ವಿವರ, ಒಡವೆಗಳ ವಿವರ ಕೊಡುವುದು ಇದರಿಂದಾಗಿಯೇ ಎಂದು ಕೆಲವರು ಹೇಳುತ್ತಾರೆ. ನಾನು ಯಂಡಮೂರಿಯನ್ನು ಓದಿಲ್ಲ, ಓದಿದವರು ವಿಚಿತ್ರ ಟೀಕೆ, ಪ್ರಶಂಸೆ ಮಾಡುವುದನ್ನು ಗಮನಿಸಿದ್ದೇನೆ.

ನನ್ನ ಅಭ್ಯಾಸ ಈ ತರಹದ್ದಲ್ಲ, ನನಗೆ ಗೊತ್ತಿರುವ ಮಾಹಿತಿಗಳ ಮೂಲಕವೇ ಮನುಷ್ಯನ ವಿಪರ್ಯಾಸ ತೋರುವುದು ನನಗೆ ಇಷ್ಟ. ಈ ನನ್ನ ವರಸೆಗೆ ಬೆಂಬಲ ದೊರೆತಾಗ ಸಂತೋಷದಿಂದ ಕುಣಿದಾಡಿದೆ. ಒಂದು ಬೆಂಬಲ ಕ್ಯಾಮು ನೀಡಿದ್ದು; ಈತನ ಕತೆ, ಕಾದಂಬರಿಗಳಲ್ಲಿ 'ಹೋಂವರ್ಕ್' ತುಂಬಾ ಕಮ್ಮಿ. ಈತ ನನ್ನ ನೆಚ್ಚಿನ ಸಾಹಿತಿಗಳಲ್ಲಿ ಒಬ್ಬ. ಇನ್ನೊಬ್ಬ ನನ್ನ ಮೆಚ್ಚಿನ ಸಾಹಿತಿ ಇ.ಎಂ. ಫಾರ್‌ಸ್ಟರ್. ಈತನನ್ನು "ನೀವು ಮಾಹಿತಿಗಳ ಟಿಪ್ಪಣಿ ಮಾಡಿಕೊಂಡಿರುವುದಿಲ್ಲವೇ?" ಎಂದು ಒಮ್ಮೆ ಸಂದರ್ಶಕರು ಕೇಳಿದರು. "ಇಲ್ಲ, ಅದು **improper, highly improper**" (ಅದು ಕೆಟ್ಟ ಕೆಲಸ, ತೀರಾ ಕೆಟ್ಟ ಕೆಲಸ) ಅಂದ ಫಾರ್‌ಸ್ಟರ್.

ಸೋಮಾರಿತನ ಮತ್ತು ಮುಗ್ಧತೆ ನಮ್ಮನ್ನು ಹೇಗೆ ರಕ್ಷಿಸುತ್ತವೆ!



ಕವಿಗಳ ಸಂಗೀತ

ಇಲ್ಲಿ ಒಂದಿಬ್ಬರು ಕವಿಗಳ ಬಗ್ಗೆ ಮಾತಾಡಬೇಕು. ಹೀಗೆ ಬರೆದು ಯಾರನ್ನಾಗಲಿ ನಿರುತ್ಸಾಹಗೊಳಿಸುವುದಾಗಲಿ, ಯಾರ ಬಾಲ ಕತ್ತರಿಸುವುದಾಗಲಿ ಉದ್ದೇಶವಾಗಕೂಡದು. ಕವಿಗಳು ತುಂಬ ಸೂಕ್ಷ್ಮಮತಿಗಳಾದ್ದರಿಂದ, ಕೋಮಲ ಮನಸ್ಸಿನವರಾದ್ದರಿಂದ (ಅಂದರೆ, ಒಳ್ಳೆಯ ಕವಿಗಳು) ತುಂಬ ಎಚ್ಚರದಿಂದ ಮಾತಾಡುವುದು ಒಳ್ಳೆಯದು. ನಮ್ಮ ರಾಮಚಂದ್ರ ಶರ್ಮ ಒಂದು ವಿಷಯಕ್ಕೆ ಜಗಳಕ್ಕೇ ಬರುತ್ತಾರೆ; ಅವರಿಗೆ "ಕವಿ ಹಾಡಿಕೊಳ್ಳಲು ಪದ್ಯ ಬರೆದರೆ ತಪ್ಪೇನಿದೆ?" ಎಂದು ಕೇಳಿ. ಶರ್ಮ ಕೂಡಲೇ ಉರಿದು ಬಿದ್ದು, "ಸಂಗೀತ ಮತ್ತು ಸಾಹಿತ್ಯ ಬೇರೆ ಬೇರೆ... ಕಾವ್ಯ ಸಂಗೀತಕ್ಕಾಗಿ ಅಲ್ಲ, ಸಂಗೀತ ಕಾವ್ಯಕ್ಕಾಗಿ ಅಲ್ಲ" ಎಂದು ವಾದಿಸತೊಡಗುತ್ತಾರೆ. ಒಮ್ಮೆ ಭೋಪಾಲ್‌ನ ಒಂದು ಪಾರ್ಟಿಯಲ್ಲಿ ಬಂಗಾಳದ ಕವಿಯೊಬ್ಬನಿಗೆ ಹಾಗೆ ಹೇಳಿದರು. ಆತ ಜೋರಾಗಿ ನಕ್ಕು "ರವೀಂದ್ರನಾಥ್ ಠಾಕೂರರೇ ಹಾಡಲು ಪದ್ಯ ಬರೆದಿದ್ದಾರೆ. ಹಾಗೆಲ್ಲ ವಾದಿಸಬೇಡಿ" ಎಂದು ಶರ್ಮರ ಬಾಯಿ ಬಂದ್ ಮಾಡಿದ. ಆದರೆ ಶರ್ಮ ಹೇಳುವುದರಲ್ಲಿ ಸ್ವಲ್ಪ ತಿರುಳಿದೆ. ತಮಿಳುನಾಡಿನಲ್ಲಿ ಕೆಟ್ಟ ಸಿನಿಮಾ ಹಾಡುಗಳಿಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವುದನ್ನು ನೋಡಿದರೆ, ನಮ್ಮಲ್ಲಿ ಅನೇಕ ಕುಕವಿಗಳು ತಮ್ಮ ಪದ್ಯಗಳನ್ನು ಹಾಡಿಸಿ ಕ್ಯಾಸೆಟ್ ಮಾಡಿಕೊಂಡಿರುವುದನ್ನು ನೋಡಿದರೆ ಇಲ್ಲಿಯ ಮೋಸ ಅರ್ಥವಾಗುತ್ತದೆ. ಕವನದಲ್ಲಿರುವ ಧ್ವನಿ, ಸದ್ದುಗಳ ಸಾಮರಸ್ಯ ಛಂದಸ್ಸು-ಸಂಗೀತದ ಲಯಕ್ಕಿಂತ ಸ್ವಲ್ಪ ಬೇರೆ ರೀತಿಯದು. ಇದು ನಮ್ಮ ಲಕ್ಷ್ಮೀನಾರಾಯಣ ಭಟ್ಟ, ಶಿವಪ್ಪ ಮುಂತಾದವರ ಪದ್ಯಗಳನ್ನು ಓದಿದಾಗ ಗೊತ್ತಾಗುತ್ತದೆ. ತಮಿಳು ಸಿನಿಮಾ ಹಾಡೇ ವಾಸಿಯೇನೂ ಅನ್ನಿಸುತ್ತದೆ.

ಇವೆಲ್ಲ ತುಂಬಾ ವಿವಾದಕ್ಕೊಳಗಾಗಬಹುದಾದ ಮಾತುಗಳು- ಆದರೆ ಉತ್ತಮ ಕವಿಯ ಎದುರು ವಾದ, ವಿವಾದ ತಣ್ಣಗಾಗುತ್ತದೆ. ಏಟ್ಸ್, ಠಾಕೂರ್, ಬೇಂದ್ರೆ ಅಂಥ ಕವಿಗಳು. ಏಟ್ಸ್ ಬೆಳೆದದ್ದೇ ಜೋಗುಳ, ಲಾವಣಿಗಳನ್ನು ಕೇಳುತ್ತ ಅವನ್ನು ಅನುಕರಿಸುತ್ತ. ಮೊನ್ನೆ ಏಟ್ಸ್ ಆರಂಭದ ವರ್ಷಗಳ ಕವನಗಳನ್ನು ಓದಿ ಆಶ್ಚರ್ಯ ಪಟ್ಟೆ- ಆತನ ಮಾತು ಸಂಗೀತದ ವಿಚಿತ್ರ ಹೊಳಪು ಪಡೆದಿವೆ. ■

ನಾನು ಸಾಲಿ ಕಲಿತಿಲ್ಲ
ಆದರೂ ಎಣಿಸಬಲ್ಲೆ
ಅಪ್ಪನ ಎದೆಯ
ಗೂಡೊಳಗಿನ ಮೂಳೆಗಳನ್ನು

ನಾನು ಸಾಲಿ ಕಲಿತಿಲ್ಲ
ಆದರೂ ಎಣಿಸಬಲ್ಲೆ
ಅವ್ವ ಹಾಕಿದ ರೊಟ್ಟಿಯ ಚೂರುಗಳನ್ನು

ನಾನು ಸಾಲಿ ಕಲಿತಿಲ್ಲ
ಆದರೂ ತೋರಿಸಬಲ್ಲೆ
ಬಾನ ಚುಕ್ಕಿಗಳನ್ನು
ನನ್ನ ನೆರಿಕಯಿಂದ

ನಾನು ಸಾಲಿ ಕಲಿತಿಲ್ಲ
ನಾ ತೋರಿಸಬಲ್ಲೆ
ನಮ್ಮನ್ನು ಕಾಡುವ
ನಕ್ಷತ್ರಿಕರನ್ನು

ನಾನೇನೂ ಲೆಕ್ಕ ಕಲಿತಿಲ್ಲ
ಸಿಲೆಟು ಬುಕ್ಕ ಮುಟ್ಟಿಲ್ಲ
ಆದರೂ ಕಳೆಯಬಲ್ಲೆ
ನನ್ನಯ ಕನಸುಗಳನ್ನು

■ ಬಿ. ಶ್ರೀನಿವಾಸ



'ಎಲ್ಲಾನೂ ನಮ್ದೆ ಅಂತೀರಲ್ರಿ....'!

ಬಿಡಿ ಚಿತ್ರಗಳು

• ಈಶ

ಮೊನ್ನೆ ಆಫೀಸಲ್ಲಿ ಹೀಗೇ ಹರಟುತ್ತಾ ಕೂತಿದ್ದಾಗ ಶಿವಸುಂದರ್ ಒಂದು ತಮಾಷೆಯ ಪ್ರಸಂಗ ಹೇಳಿದರು.

ಕುಮಾರ್ ಸಮತಳ ಹಾಗೂ ರಾಯಚೂರು ಪೊಲೀಸರ ನಡುವಿನ ಜಗಳದಲ್ಲಿ ಬಂದ ವಿಚಾರ ಅದು. ನಮ್ಮಲ್ಲಿ 2005 ರಲ್ಲಿ 'ಜೈಲೆಂಬ ಲೋಕದಲ್ಲಿ' ಸರಣಿ ಲೇಖನ ಬರೆಯುವಷ್ಟರಲ್ಲಿ ಕುಮಾರ್ ಮೂರ್ನಾಲ್ಕು ವರ್ಷ ಜೈಲಲ್ಲಿ ಕಳೆದುಬಂದಿದ್ದರು. ಅದಕ್ಕೂ ಮುನ್ನ ರಾಯಚೂರು, ಗುಲ್ಬರ್ಗಾ ಪ್ರಾಂತ್ಯದ ಕಡುಬಡವ ರೈತರನ್ನು ಪಾಳೆಗಾರಿಕೆಯ ದಮನ, ಶೋಷಣೆಗಳೆಂಬ ಸೆರೆವಾಸದಿಂದ ಬಿಡಿಸುವ ಛಲದಿಂದ ಆಕ್ಟಿವಿಸ್ಟ್ ಆಗಿ ಆ ಪ್ರಾಂತ್ಯಗಳಲ್ಲಿ ಓಡಾಡಿಕೊಂಡಿದ್ದರು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ನೆಲೆ ನಿಂತು ಒಂದು ಚಳವಳಿ ಕಟ್ಟುವಾಗ ಭೂಮಿ, ನೀರು, ಶಾಲೆ, ರಸ್ತೆ, ಸೇತುವೆ ವಿಚಾರಗಳೆಲ್ಲಾ ಎದುರಾಗುತ್ತಿರುತ್ತವೆ. ಅದರಲ್ಲೂ ಹೈದರಾಬಾದ್ ಕರ್ನಾಟಕದ ಏರಿಯಾಗಳಲ್ಲಿ ನೀವು ಯಾವ ಹಳ್ಳಿಗೆ ಹೋದರೂ ಅಲ್ಲೊಬ್ಬ ದರ್ಪದ ಭೂಮಾಲೀಕ ಇದ್ದೇ ಇರುತ್ತಾನೆ. ಹಳ್ಳಿಗಳು ಅಕ್ಷರಶಃ ಅಂತಹವರ ಕಂಟ್ರೋಲಿನಲ್ಲಿರುತ್ತವೆ. ಅಂಥ ವಾತಾವರಣದಲ್ಲಿ ಏನೇ ವಿಚಾರಕ್ಕೆ ಒಂದು ಪ್ರತಿಭಟನೆ, ಹೋರಾಟ ಶುರುವಾದರೂ ಕೊನೆಗೆ ಅದು ಬಂದು ನಿಲ್ಲುವುದು ಯಾರನ್ನು ಯಾರು ನಿಯಂತ್ರಿಸುತ್ತಾರೆಂಬ ಮೂಲಭೂತ ಪ್ರಶ್ನೆಗೇನೆ. ಆಗೆಲ್ಲಾ ಈ ಕುಮಾರ್ ಸಮತಳ ಮುಂಚೂಣಿಯಲ್ಲಿರುತ್ತಿದ್ದರು. ಜನರನ್ನು ಗುಂಪು ಕಟ್ಟಿಕೊಂಡು ಕದನ ಕಣಕ್ಕಿಳಿದುಬಿಡುತ್ತಿದ್ದರು. ಗದ್ದರ್‌ನ 'ಈ ಊರು ಮನದಿರಾ, ವಾಡ ಮನದಿರಾ' ಎಂದು ರೋಷಾವೇಶದಲ್ಲಿ ಹರಿದು ಬರುವ ಕ್ರಾಂತಿಗೀತೆಯನ್ನು 'ಊರು ನಮ್ಮದೋ ಕೇರಿ ನಮ್ಮದೋ, ಬಂದಿ ನಮ್ಮದೋ ಬಂಡಾಯ ನಮ್ಮದೋ' ಅಂತ ಕನ್ನಡ ಹಾಡು ಮಾಡಿಕೊಂಡು ಇವರ ಹೋರಾಟಗಳು ನಡೆಯುತ್ತಿದ್ದವು. ಪೊಲೀಸರಿಗಂತೂ ಮೈಪರಚಿಕೊಳ್ಳುವಷ್ಟು ಕಿರುಕುಳ ನೀಡಿ ಸಾಕೋಸಾಕು ಅನ್ನಿಸಿಬಿಡುತ್ತಿದ್ದರು. ಹೀಗಿರುವಾಗ ಒಂದು ಸಾರಿ ಸ್ಮಶಾನ ಭೂಮಿಗಾಗಿ ಒಂದು ವಿವಾದ ಶುರುವಾಯಿತು. ನಮ್ಮ ಕುಮಾರ ಕಂಠೀರವ ತಕ್ಷಣ ಜನರನ್ನು ಸೇರಿಸಿ ಹೋರಾಟಕ್ಕೆ ಚಾಲನೆ ಕೊಟ್ಟುಬಿಟ್ಟರು. ಪೊಲೀಸರು ಬಂದು ಇವರನ್ನೆಲ್ಲಾ ಅರೆಸ್ಟು ಮಾಡಿ ಸ್ಟೇಷನ್ನಿಗೆ ಕರಕೊಂಡು ಹೋದರು.

ಇನ್ಸ್‌ಪೆಕ್ಟರನಿಗೋ ತಲೆ ಬಿಸಿ, ಹೇಳಿಕೇಳಿ ಸ್ಮಶಾನ ಭೂಮಿ ವಿಚಾರ ಅದು. ನಮ್ಮ ಕರುನಾಡು ದೇಶದ ಪರಿಸ್ಥಿತಿ ಏನೆಂದು ನಿಮಗೂ ಗೊತ್ತು. ಇಲ್ಲಿ ಜನ ಬದುಕಿರುವಷ್ಟೂ ದಿನ ನಾನು ಆ ಜಾತಿ, ನೀನು ಈ ಜಾತಿ ಅಂತ ಕಿತ್ತಾಡಿಕೊಳ್ಳುವುದಲ್ಲದೆ ಸತ್ತಮೇಲೂ ಅಕ್ಕಪಕ್ಕ ಮಲಗುವುದಿಲ್ಲ. ಇಲ್ಲಿ ಜಾತಿಗೊಂದು ಸ್ಮಶಾನ ಪದ್ಧತಿ ತಾನೆ ಇರೋದು, ಇಂತ ಸೂಕ್ಷ್ಮ ವಿಚಾರ ಈಗ ಬೆಳೆದು ಕಗ್ಗಂಟಾಗಿದೆ. ಜನ ಗಲಾಟೆ ಮಾಡುತ್ತಿದ್ದಾರೆ. ಈ ಕುಮಾರ ಬೇರೆ 'ಊರು ನಮ್ಮದೋ' ಶೈಲಿಯಲ್ಲೇ ಈಗ 'ಸ್ಮಶಾನ ನಮ್ಮದೊ....!' ಎಂದು ರಾಗವಾಗಿ ಹಾಡುತ್ತಿದ್ದಾರೆ!

ಇನ್ಸ್‌ಪೆಕ್ಟರನಿಗೆ ಯಾಕೋ ಸುಖಾಸುಮ್ಮನೆ ಕೋಪ ಬಂತು. ಇದಕ್ಕೆಲ್ಲಾ ಕುಮಾರನೇ ಕಾರಣ ಅನ್ನಿಸಿ ಸಿಟ್ಟನಿಂದ,

"ರ್ರೀ ಕುಮಾರ ಸಮತಳ ಬನ್ರಿ ಇಲ್ಲಿ" ಅಂದ.

"ಏನ್ಸಾರ್....!?"

"ಅಲ್ರೀ... ಊರಿನ ವಿಚಾರ ತಗೊಂಡು ಊರು ನಮ್ಮದು ಅಂತೀರ. ಕೇರಿಗೋಗಿ ಕೇರಿ ನಮ್ಮದು ಅಂತೀರಿ. ಯಾರ್ಯಾರ್ದೋ ಹೊಲಕ್ಕೆ ಜನ ಕರಕೊಂಡೋಗಿ ಈ ಹೊಲಾನು ನಮ್ಮದು ಅಂತೀರಾ."

"ಊ... ಹೌದು."

"ಏನ್ರೀ ಹೌದು... ಈಗ ನೋಡಿದ್ರೆ ಸ್ಮಶಾನಾನು ನಮ್ಮದೇ ಅಂತಿದ್ದೀರಲ್ರಿ, ನಾವೇನು ಮಾಡ್ಬೇಕು, ಎಲ್ಲಾನು ನಿಮ್ದೆ ಅಂದ್ರೆ ನಮ್ದು ಯಾವ್ದೂ ಇಲ್ವೆನ್ರಿ?" ಅಂದನಂತೆ.

ಪಾಪ, ಕೇಳಬೇಕಾದ ಪ್ರಶ್ನೆನೇ ಅಲ್ಲವೆ ಅದು.

****

ಚಳವಳಿಗಾರರು ಸೀರಿಯಸ್ ಆಗಿ ತಮ್ಮನ್ನು ಒಂದು ಕೆಲಸದಲ್ಲಿ ತೊಡಗಿಸಿಕೊಂಡಾಗ ಕೆಲವು ಸಾರಿ ಇದ್ದಕ್ಕಿದ್ದಂತೆ ವಿಚಿತ್ರವಾದ ಪ್ರಸಂಗಗಳೂ ನಡೆಯಲು ಸಾಧ್ಯ.

ಕರ್ನಾಟಕ ರಾಜ್ಯೋತ್ಸವ ಹತ್ತಿರಾಗುತ್ತಿರುವ ಈ ಸಮಯದಲ್ಲೇ ನನಗೆ ಕನ್ನಡ ಚಳವಳಿಗಾರರ ನೆನಪಾಗುತ್ತಿದೆ. ಈಗ್ಗೆ 10-15 ವರ್ಷಗಳ ಹಿಂದೆ ಬೆಂಗಳೂರಿನ ಕನ್ನಡ ಚಳವಳಿಗಾರರೊಡನೆ ನಮ್ಮ ಒಡನಾಟ ಜಾಸ್ತಿ ಇತ್ತು. ಬಂಜಗೆರೆ ಜಯಪ್ರಕಾಶ್, ನಾನು ಮತ್ತಿತರ ಗೆಳೆಯರು ಕರ್ನಾಟಕ ವಿಮೋಚನಾ ರಂಗ ಕಟ್ಟುತ್ತಿದ್ದ ಅವಧಿ ಅದು.

ಆಗೊಮ್ಮೆ ದಿಢೀರನೆ ಕನ್ನಡ ಕಾರ್ಯಕರ್ತರು ತಮ್ಮ ಹೆಸರಿನ ಮುಂದೆ ಇರುತ್ತಿದ್ದ ಇನಿಷಿಯಲ್‌ಗಳನ್ನು ಕನ್ನಡೀಕರಿಸುವ ಕೆಲಸ ಶುರು ಮಾಡಿಕೊಂಡರು. ಜಿ. ಮಧುಸೂದನ ಗೊ. ಮಧುಸೂದನನಾದ. ಈಗ ಉದಯ ಟಿವಿಯ ಕ್ರೈಂ ಸ್ಟೋರಿ ನಿರ್ದೇಶಕ ಆಗಿರುವ ಆರ್. ಪ್ರವೀಣ್ ರಾ. ಪ್ರವೀಣನಾದ. ನನ್ನ ಪತ್ರಕರ್ತ ಸಹೋದ್ಯೋಗಿ ಸೋಮನಾಥ್ ರಾ. ಸೋಮನಾಥ್ ಆದರು. ರಾಜ್ ಅಭಿಮಾನಿ ಸಂಘದ ಶೆ.ಭೋ. ರಾಧಾಕೃಷ್ಣ ಕನ್ನಡ ಸಾಹಿತ್ಯ ಪರಿಷತ್‌ನ ಶ್ರ.ದೆ. ಪಾರ್ಶ್ವನಾಥ್, ಕೊ.ವೆಂ. ರಾಮಕೃಷ್ಣೇಗೌಡ ಇವರೆಲ್ಲಾ ಉಚ್ಚಾರಣೆಗೆ ಏನೇ ಕಷ್ಟ ಬಂದರೂ ಎದೆಗುಂದದೆ ಕನ್ನಡ ಇನಿಷಿಯಲ್‌ಗೇ ಅಂಟಿಕೊಂಡರು.

ಈ ಗುಂಪುಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದ ಒಬ್ಬ ಗೆಳೆಯ ಮಾತ್ರ ಈ ಬಗ್ಗೆ ಎಂದೂ ಉಸಿರೆತ್ತಿರಲಿಲ್ಲ, ಹಾಗಂತ ಅವನ ಕನ್ನಡಾಭಿಮಾನವೇನೂ ಕಡಿಮೆ ಇರಲಿಲ್ಲ.

ರಾಮಾಂಜಿನಿ ಅಂತ ಅವನ ಹೆಸರು. ನಮ್ಮದೋ ಮೊದಲೇ ಕಿತಾಪತಿ ಬುದ್ಧಿ, ಸರಿ ಇದೇನಿದರ ಮರ್ಮ, ಸ್ವಲ್ಪ ಶೋಧಿಸಿಯೇ ಬಿಡೋಣವೆಂದು ಶ್ರೀರಾಮಪುರದ ಮಿಲಿಟೆಂಟ್ ಕನ್ನಡಿಗ ಬಾಲುವನ್ನು ಪತ್ತೆದಾರಿಗೆ ನಿಯೋಜಿಸಿದೆವು.

ಕೊನೆಗೆ ಬಾಲು ಕೊಟ್ಟ ವರದಿ ಕರುಣಾಜನಕವಾಗಿತ್ತು.

ಈ ರಾಮಾಂಜಿನಿ.... ಕೊರಟಗೆರೆ ತಿಮ್ಮರಾಯಪ್ಪನವರ ಮಗ ರಾಮಾಂಜಿನಿಯಾಗಿದ್ದ. ಅದು ಇಂಗ್ಲಿಷಿನಲ್ಲಾದರೆ ಕೆ.ಟಿ. ರಾಮಾಂಜಿನಿ ಆಯಿತು. ಅದೇ ಕನ್ನಡಾಭಿಮಾನ ಅಂತ ಹೊರಟರೆ...!

ಕೊ.ತಿ. ರಾಮಾಂಜಿನಿ ಆಯಿತು. ಅದಕ್ಕೇ ಏನೋ ಆ ಮುಗ್ಧ ತರುಣ ಬೇರೆಲ್ಲಾ ವಿಚಾರದಲ್ಲೂ ಉಗ್ರ ಕನ್ನಡಾಭಿಮಾನಿಯೇ ಆಗಿದ್ದರೂ ಇನಿಷಿಯಲ್ ವಿಚಾರದಲ್ಲಿ ಮಾತ್ರ ಸ್ವಲ್ಪ ಇಂಗ್ಲಿಷ್ ಪರವಾಗಿದ್ದ. ಕನ್ನಡಾಂಬೆಯ ಕರುಣೆ ಅವನ ಮೇಲಿರಲಿಲ್ಲ, ಏನು ಮಾಡುತ್ತೀರಿ!

ನಾನು ಕೆಲಕಾಲ ಕನಕಪುರದಲ್ಲಿ ವಾಸವಾಗಿದ್ದಾಗ ಕಲಾವಿದ ಗೆಳೆಯ ಎಂ.ಸಿ. ನಾಗರಾಜ ಒಂದು ಸಾರಿ ಬಿದಿರುಕೋಲಿನಂತಿದ್ದ ತರುಣನೊಬ್ಬನನ್ನು "ಇವರು ಕರಾಚಕು ಅಂತ" ಎಂದು ಪರಿಚಯಿಸಿದ್ದ.

ಇದೇನು ಮೇಡ್ ಇನ್ ಜಪಾನ್ ಹೆಸರಿನ ತರಾ ಇದೆಯಲ್ಲ ಅಂತಾ ಬೆರಗಾದ ನಾನು "ಏನ್ ಹೆಸರ್‌ರ್ರೀ ಇದೂ?" ಅಂದೆ.

ದುರದೃಷ್ಟವಶಾತ್ ಆತನೂ ಕನ್ನಡಾಭಿಮಾನಿಯಾಗಿದ್ದ. ಕನಕಪುರ ರಾಮಚಂದ್ರರಾಯರ ಮಗ ಚಂದ್ರಕುಮಾರ ತನ್ನ ಹೆಸರನ್ನು ಶಾರ್ಟ್ ಆಗಿ ಕರಾಚಕು ಮಾಡಿಕೊಂಡಿದ್ದ.

ನಾವೇನೋ ಈತನೊಬ್ಬ ಹಾಸ್ಯಾಸ್ಪದ ವ್ಯಕ್ತಿ ಅಂದುಕೊಂಡು ನಿರ್ಲಕ್ಷಿಸಿಬಿಟ್ಟೆವು. ಈಗ ನೋಡಿದರೆ ಕರಾಚಕು ಇತ್ತೀಚೆಗೆ ಕನಕಪುರದಲ್ಲೇ ಸತತ 24 ಗಂಟೆಕಾಲ ಒಂಟಿಗಾಲಿನಲ್ಲಿ ಡ್ಯಾನ್ಸ್ ಮಾಡಿ ಲಿಮ್ಕಾ ದಾಖಲೆಗೆ ಸೇರಿಹೋಗಿದ್ದಾನೆ...!

ಯಾವ ಹುತ್ತದಲ್ಲಿ ಅದಿನ್ಯಾವ ಹಾವೋ?

ಬೇಕಿದ್ದರೆ ನೀವೊಮ್ಮೆ ನಿಮ್ಮದೂ ಸೇರಿದಂತೆ ಸುತ್ತಲಿನ ಪರಿಚಿತರ ಇನಿಷಿಯಲ್‌ಗಳನ್ನು ಕನ್ನಡೀಕರಿಸುವ ಪ್ರಯತ್ನ ಮಾಡಿನೋಡಿ. ನಾನಾ ಆಭಾಸಕರ, ಅಸಯ್ಯದ, ತಿಕ್ಕಲು ಅರ್ಥ ಕೊಡುವ ಫಲಿತಾಂಶ ಬರದಿದ್ದರೆ ಕೇಳಿ.

ಎಲ್ಲರಿಗೂ ಕುವೆಂಪು, ತೀನಂಶ್ರೀ, ತರಾಸು, ಅನಕೃ ತರದ **abbreviation** ಸಿಗಲ್ಲ ಅಲ್ಲವಾ?

ನೀತಿ ಪಾಠ: ತಾಯೇ... ಭುವನೇಶ್ವರಿ ಅಂತ ವಿಪರೀತ ಮಾಡಿಕೊಂಡರೆ ಕೆಲವೊಮ್ಮೆ ಅವಳೇ ನಿಮ್ಮ ಪಾಲಿನ ಶನೇಶ್ವರಿ. ■

ಜೆನ್ ಕತೆ

ಸದಾ ಸಾವಿನ ನಂತರದ ಬದುಕಿನ ಬಗ್ಗೆ ಚಿಂತಿಸುತ್ತಿದ್ದ ಶಿಷ್ಯನಿಗೆ ಗುರುಗಳು ಹೇಳಿದರು:

"ಪರಲೋಕದ ಬಗ್ಗೆ ಒಂದು ಕ್ಷಣ ಚಿಂತಿಸುವುದೂ ವ್ಯರ್ಥ."

"ಆದರೆ ಅದರ ಬಗ್ಗೆ ಯೋಚಿಸದೇ ಇರಲು ಸಾಧ್ಯವೇ?"

"ಸಾಧ್ಯ."

"ಹೇಗೆ?"

"ಸ್ವರ್ಗದಲ್ಲಿ ಈಗಿನಿಂದಲೇ ಬದುಕುವ ಮೂಲಕ."

"ಆದರೆ ಈ ಸ್ವರ್ಗ ಎಲ್ಲಿದೆ?"

"ಈಗ ಮತ್ತು ಇಲ್ಲಿಯೇ ಇದೆ." ■



ಮತಾಂತರಕ್ಕೆ ಅಡ್ಡಿ ಯಾಕೆ?

ಸೌಹಾರ್ದತೆಯಲ್ಲಿ ಸರ್ವಧರ್ಮಗಳ ನೆಲೆಯಾದ ಭಾರತ ದೇಶದಲ್ಲಿ ಸಂವಿಧಾನಾತ್ಮಕವಾಗಿ ಧರ್ಮ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಇರುವಾಗ ಮತಾಂತರಗೊಳ್ಳುವವರನ್ನು ಅಡ್ಡಿಪಡಿಸುವುದೇಕೆ? ಒಂದು ಧರ್ಮದಲ್ಲಿರುವ ಜನರು ಅನ್ಯಧರ್ಮಕ್ಕಾಗಿ ವಲಸೆ ಹೋಗುವ (ಮತಾಂತರಗೊಳ್ಳುವ) ಕಾರಣವೇನು?

ಹಾಗೆಯೇ ಸಹಸ್ರಾರು ವರ್ಷ ಹಿಂದೂ ಧರ್ಮದಲ್ಲಿ ಅಸಮಾನತೆಯ ವರ್ಗಶ್ರೇಣಿಗಳ ಸೆರೆಯಲ್ಲಿ ಸಿಲುಕಿ ಶೋಷಣೆಗೊಳಪಟ್ಟ ಜನರಿಗೆ ಮತಾಂತರಗೊಳ್ಳುವುದು ಅವಶ್ಯವಾಗಿದೆ ಅಥವಾ ಅನಿವಾರ್ಯವಾಗಿದೆ. ಮತಾಂತರದ ವಿರುದ್ಧ ಪ್ರತಿಭಟಿಸುತ್ತಿರುವವರು ಮೊದಲು ತಮ್ಮ ಧರ್ಮದಲ್ಲಿನ ದೋಷವನ್ನು ಸರಿಪಡಿಸಿಕೊಳ್ಳಬೇಕಿದೆ.

ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯ ವಿರುದ್ಧ ಸಿಡಿದೆದ್ದ ಮಹಾತ್ಮರು ಎಷ್ಟಿಲ್ಲ? ಬುದ್ಧ, ಮಹಾವೀರ, ಬಸವಣ್ಣನಂಥವರೆಲ್ಲರೂ ಬೇರೆ ಬೇರೆ ಧರ್ಮಗಳನ್ನು ಸೃಷ್ಟಿಸಲು ಕಾರಣವೇನು ಎಂಬುದನ್ನು ಅವರೆಲ್ಲ ಅರ್ಥಮಾಡಿಕೊಳ್ಳಬೇಕು. ಸ್ವಾರ್ಥಕ್ಕಾಗಿ ಪರರ ಬದುಕನ್ನೇ ಬಲಿ ತೆಗೆದುಕೊಳ್ಳುವಂಥ ಅನೈತಿಕ, ಅಮಾನುಷ ಮತ್ತು ಅಸಮಾನತೆಗಳಿಂದ ಕೂಡಿರುವ, ಮಾನವೀಯ ಮೌಲ್ಯಗಳ ರಹಿತ ಹಿಂದೂ ಧರ್ಮದಲ್ಲಿ ಯಾರು ಇರಲು ಬಯಸುತ್ತಾರೆ?

ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುವಂತೆ ಮಾನ್ಯ ರಾಜ್ಯಪಾಲರಿಗೆ ಮನವಿ ಸಲ್ಲಿಸುವ ಸ್ವಾಮೀಜಿಗಳಿಗೆ ನನ್ನ ಸವಾಲು: ಸಮಾನತೆಯ ದೃಷ್ಟಿಯಿಂದ ಎಷ್ಟು ಜನ ಅಸ್ಪೃಶ್ಯರಿಗೆ ನಿಮ್ಮ ನಿಮ್ಮ ಮಠಗಳಲ್ಲಿ ಅಧಿಕಾರ ಕೊಟ್ಟಿದ್ದೀರಿ? ಎಷ್ಟೆಷ್ಟು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ನಿಮ್ಮ ಮಠ ನಡೆಸುವ ವಿದ್ಯಾರ್ಥಿಗಳ ವಸತಿಗೃಹಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ಅವಕಾಶ ಕೊಟ್ಟಿದ್ದಿರಿ? ಪೂಜೆ ಪುನಸ್ಕಾರಗಳಿಗೆ ಅವಕಾಶ ಕೊಟ್ಟಿದ್ದೀರಿ? ನಿಮ್ಮ ಮಠಗಳಿಗೆ ಎಷ್ಟೆಷ್ಟು ಅಸ್ಪೃಶ್ಯರನ್ನು ಸ್ವಾಮಿಗಳನ್ನಾಗಿ ಮಾಡಿದ್ದೀರಿ? ನಿಮ್ಮ ದೊಡ್ಡ ದೊಡ್ಡ ಮಠಗಳಿರುವ ಊರುಗಳಲ್ಲಿ ಎಷ್ಟರಮಟ್ಟಿಗೆ ಪರಿಪೂರ್ಣ ಸಮಾನತೆ ನೆಲೆಗೊಳಿಸಿದ್ದೀರಿ? ನಿಮ್ಮ ಊರುಗಳಲ್ಲಿನ ಅಸ್ಪೃಶ್ಯ ಪದ್ಧತಿಯನ್ನು ವಿನಾಶಗೊಳಿಸಿದಿರಿ? ಇದನ್ನೆಲ್ಲ ನೀವು ಸಾಧಿಸಿದ್ದಾದರೆ ಅದಕ್ಕೆ ಸಾಕ್ಷಿ ಒದಗಿಸುವಿರಾ?

ನೀವು ಸೌಹಾರ್ದತೆ ರಹಿತ ವರ್ಣಭೇದ ಪದ್ಧತಿಯನ್ನು ಶಾಶ್ವತವಾಗಿ ರೂಢಿಸಿಕೊಂಡವರು. ಅಸಮಾನತೆಯ, ಅಧರ್ಮದ ವರ್ಣಭೇದದ ಶ್ರೇಣಿಯ ನರಕದಲ್ಲಿ ಇತರರು ನಿಮ್ಮ ದಾಸರಾಗಿಯೇ ಇರಬೇಕೆಂದು ಬಯಸುವವರು ನೀವು. ನಿಮ್ಮ ಮನಸ್ಸಿನಲ್ಲಿಯೇ ಸಮಾನತೆಯ ಭಾವನೆಗಳಿಲ್ಲ, ಇನ್ನು ಸಮಾಜದಲ್ಲಿ ಸಮಾನತೆಯನ್ನು ನೀವು ತರುವುದಾದರೂ ಹೇಗೆ? ಮತಾಂತರದಿಂದ ಮುಂಬರುವ ದಿನಮಾನಗಳಲ್ಲಿ ದೇಶಕ್ಕೆ ಗಂಡಾಂತರವೆಂಬ ನಿಮ್ಮ ಹೇಳಿಕೆ ನೂರಕ್ಕೆ ನೂರು ಸತ್ಯ. ಆದರೆ ಅದು ದೇಶಕ್ಕಲ್ಲ, ಬದಲಾಗಿ ನಿಮಗೆ!

ಹೊಗಳಿಕೆ ತೆಗಳಿಕೆ

ಜನರು ಇತರೆ ಧರ್ಮಗಳೀಗೆ ಮತಾಂತರಗೊಳ್ಳುವುದರಿಂದ ನಿಮಗೆ ಭಯವಾಗುವುದು ಸಹಜವೇ. ಕಾರಣ ಸಹಸ್ರಾರು ವರ್ಷಗಳಿಂದ ನಿಮ್ಮ ಸೇವೆಗಾಗಿ ದಾಸರಾಗಿದ್ದವರು ಅನ್ಯ ಧರ್ಮವನ್ನು ಸೇರಿಕೊಂಡರೆ ಒಂದು ದಿನ "ನಮ್ಮ ಧರ್ಮದ ಜನ ಅಲ್ಪಸಂಖ್ಯಾತರಾಗಿ ಈ ಅಸ್ಪೃಶ್ಯರ ಹೀನಾಯಗತಿಗೆ ಮಾರ್ಪಡುವ ಗಂಡಾಂತರಕ್ಕೆ ಬಲಿಯಾಗುವುದು ಖಚಿತ" ಎಂಬ ಹೆದರಿಕೆ ನಿಮಗೆ.

ನಿಮ್ಮ ಹಿಂದೂ ಧರ್ಮದಲ್ಲಿ ಮಾನವೀಯ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಪ್ರೀತಿ, ವಾತ್ಸಲ್ಯ, ಕರುಣೆ, ಬಂಧುತ್ವ, ಮೈತ್ರಿ, ಸೌಹಾರ್ದತೆ, ಸಹಕಾರ, ಪ್ರತಿಯೊಬ್ಬ ವ್ಯಕ್ತಿಗೆ ಸ್ವತಂತ್ರವಾಗಿ ಬದುಕುವ ಹಕ್ಕು ಇಲ್ಲ. ಹಾಗಿದ್ದರೂ ಅದು ಹೇಗೆ ಒಂದು ಧರ್ಮವಾಗುತ್ತದೆ? ಕೇವಲ ಸವರ್ಣೀಯರ ಅನುಕೂಲಕ್ಕಾಗಿ ನಿರ್ಮಾಣಗೊಂಡದ್ದು ಹಿಂದೂ ಧರ್ಮ. ಕೆಳವರ್ಗದವರಿಗೆ ನರಕದ ಹೊಂಡವಾದ ನಿಮ್ಮ ಧರ್ಮ ಅನೈತಿಕ ನಿಯಮಗಳ ಆಗರ.

ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರವರು ಹಿಂದೂ ಧರ್ಮವನ್ನು ತೊರೆದು ಬೌದ್ಧ ಧರ್ಮಕ್ಕೆ ಮತಾಂತರವಾದುದು ಅದಕ್ಕಾಗಿಯೇ. ಸಂವಿಧಾನದಲ್ಲಿ ಯಾರು ಬೇಕಾದರು ತಮಗೆ ಒಳ್ಳೆಯದೆನಿಸುವಂತಹ ಧರ್ಮಕ್ಕೆ ಮತಾಂತರ ಹೊಂದುವ ಹಕ್ಕು ಅವರು ಅಳವಡಿಸಿದ್ದೂ ಇದೇ ಕಾರಣಕ್ಕೆ. ಮತಾಂತರ ಹೊಂದುವವರನ್ನು ತಡೆಗಟ್ಟುವ ಹಕ್ಕು ಯಾರಿಗೂ ಇಲ್ಲ. ಅದರಲ್ಲೂ ನಿಮ್ಮಂಥವರಿಗೆ ಇಲ್ಲವೇ ಇಲ್ಲ.


-ವಿ.ರಾ. ಚಾಂಬಾಳ,
ಗುಲ್ಬರ್ಗಾ

ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೆ ಏರುತ್ತಲೇ ಇದೆ. ಆದರೆ ಕನ್ನಡ ...ರಂಗದ ಮಾರುಕಟ್ಟೆಯಲ್ಲಿ 'ಗೋಲ್ಡನ್ ಸ್ಟಾರ್' ಗಣೇಶನ ಮೌಲ್ಯ ಚಿತ್ರದಿಂದ ಚಿತ್ರಕ್ಕೆ ಪಾತಾಳಕ್ಕೆ ...ಯುತ್ತಿದೆ.

ಈ ವಾರ ತೆರೆಕಂಡಿರುವ 'ಸಂಗಮ' ಚಿತ್ರ ಗಣೇಶ್ ವೃತ್ತಿ ಜೀವನದಲ್ಲಿ ಅಗ್ನಿಪರೀಕ್ಷೆಯೇ ...ತ್ತು. ಯಾಕೆಂದರೆ ಈತ ನಟಿಸಿರುವ ಇನ್ನೆರಡು ಚಿತ್ರಗಳಾದ 'ಅರಮನೆ' ಮತ್ತು 'ಬೊಂಬಾಟ್' ...ಕ್ಸಾಫೀಸಿನಲ್ಲಿ ಇತ್ತೀಚೆಗೆ ಮುಗ್ಗರಿಸಿದ್ದವು. ಈ ಕಾರಣಕ್ಕಾಗಿಯೇ ಗಾಂಧಿನಗರದಲ್ಲಿ 'ಸಂಗಮ' ...ದರೆ ಗಣೇಶ್ ಉಳಿದುಕೊಳ್ಳುತ್ತಾನೆ, ಆಕಸ್ಮಾತ್ ಈ ಚಿತ್ರ ಸೋತರೆ ಆತ ಮತ್ತೆ ಮೇಲಕ್ಕೇಳುವುದು ...ವೇ ಇಲ್ಲ ಎಂದು ತರ್ಕಿಸಲಾಗುತ್ತಿತ್ತು.

ಕೆಲವರ್ಷಗಳ ಹಿಂದೆ ಗಣೇಶ್ ನಟಿಸಿದ್ದ 'ಮುಂಗಾರು ಮಳೆ' ಕನ್ನಡ ಚಿತ್ರರಂಗದ ಎಪ್ಪತ್ತೈದು ...ದ ಇತಿಹಾಸದಲ್ಲಿ ಯಾರೂ ಕಂಡುಕೇಳರಿಯದಷ್ಟು ದುಡ್ಡಿನ ಮತ್ತು ದಾಖಲೆಯ ಸುರಿಮಳೆಯನ್ನೇ ...ಸಿತ್ತು. ಯಾವಾಗ ಆ ಚಿತ್ರ ನಿರ್ಮಾಪಕ ಕೃಷ್ಣಪ್ಪನವರಿಗೆ ಅರವತ್ತು ಕೋಟಿಯ ಲಾಭವನ್ನು ...ಮ ಕೊಟ್ಟಿತೋ ಆಗ ಎಲ್ಲರಿಗೂ ಗಣೇಶ್ ಚಿನ್ನದ ಮೊಟ್ಟೆಯಿಡುವ ಕೋಳಿ ತರಹ ಕಂಡಿದ್ದ. ...ಗಾಗಿ ಈತನ ಕಾಲ್‌ಶೀಟ್‌ಗಾಗಿ ನಿರ್ಮಾಪಕರು ಸಾಲುಗಟ್ಟಿ ನಿಂತರು. ಆದರೆ ಗಣೇಶ್ ನಟಿಸಿದ ...ತ್ರಗಳೆಲ್ಲವೂ 'ಮುಂಗಾರು ಮಳೆ' ಆಗಬೇಕಲ್ಲ?

ಮತ್ತೆ 'ಸಂಗಮ'ಕ್ಕೆ ಬರೋಣ. ಇದನ್ನು ನೋಡಿರುವ ಜನ "ಈ ಚಿತ್ರವೂ ಬಾಕ್ಸ್ ಆಫೀಸಿನಲ್ಲಿ ...ಟ್ಟು ಹೋಗುತ್ತದೆ, ಸೋಲಲ್ಲೂ ಹ್ಯಾಟ್ರಿಕ್ ಬಾರಿಸಿದ ಪಟ್ಟ ಗಣೇಶನಿಗೆ ಕಟ್ಟಿಟ್ಟ ಬುತ್ತಿ" ಎಂದು ...ಳುತ್ತಿದ್ದಾರೆ. ಅದಕ್ಕೆ ಕಾರಣಗಳೂ ಇವೆ. ಈ ಚಿತ್ರದ ಕತೆ ಎಷ್ಟು ವೀಕ್ ಆಗಿದೆ ಎಂದರೆ ಎರಡು ಹಾಡುಗಳ ಹೊರತಾಗಿ ಹೇಳಿಕೊಳ್ಳುವಂತಹ ಯಾವುದೇ ಸಕಾರಾತ್ಮಕ ಅಂಶಗಳು ಚಿತ್ರದಲ್ಲಿ ಇಲ್ಲವೇ ಇಲ್ಲ. ಇದರ ನಿರ್ಮಾಪಕ ಹಣವನ್ನು ಧಾರಾಳವಾಗಿ ಸುರಿದಿದ್ದರೂ ಚಿತ್ರ ಹಿಟ್ ಆಗುವುದು ಅಸಾಧ್ಯ. ಈ ಚಿತ್ರವನ್ನು ನೋಡಿದ ನಂತರ ಚಿತ್ರದ ಕತೆ ಕೇಳಿಸಿಕೊಳ್ಳುವ ಗೋಜಿಗೆ ಹೋಗದೆ ನಿರ್ಮಾಪಕ ಎಸ್.ವಿ. ಬಾಬು ಅವರ ಹಣದ ಥೈಲಿ ನೋಡಿಯೇ ಗಣೇಶ್ ತನ್ನ ಕಾಲ್‌ಶೀಟ್ ಕೊಟ್ಟಿರಬೇಕು ಎಂಬ ಅನುಮಾನ ಬರುತ್ತದೆ.



ಗಣೇಶನ ಸೋಲಿನ 'ಸಂಗಮ'

ಮೂರು ಸೋಲುಗಳ ಸರದಾರನಾಗಿರುವ ಗಣೇಶನ ಎದುರಿಗೆ ಇವತ್ತು ಇರುವ ಸಮಸ್ಯೆಗಳಿಗೆ ಸ್ವತಃ ಆತನೇ ಕಾರಣ. ನಟನೊಬ್ಬ ತಾನು ನಟಿಸಲಿರುವ ಚಿತ್ರದ ಕಥೆ ಮತ್ತು ನಿರ್ದೇಶಕನ ಆಯ್ಕೆಯಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ಈ ವಿಷಯದಲ್ಲಿ ಗಣೇಶ್ ತುಂಬಾ ವೀಕ್. ಈಗ ಸೋಲುಂಡಿರುವ ಈತನ ಮೂರು ಚಿತ್ರಗಳಲ್ಲಿ ಎರಡನ್ನು ಚೊಚ್ಚಲ ನಿರ್ದೇಶಕರು ಮಾಡಿದ್ದರೆ ಒಂದನ್ನು ಹಳೇ ನಿರ್ದೇಶಕರು ಮಾಡಿದ್ದರು. ಆದರೆ ಹಳೇ ಹುಲಿಗೆ ಈಗಿನ ಟ್ರೆಂಡ್ ಗೊತ್ತಿಲ್ಲ, ಹೊಸ ಇಲಿಗಳಿಗೆ ಸ್ಟಾರ್ ...ನ ಇಮೇಜನ್ನು ಯಶಸ್ವಿಯಾಗಿ ಉಪಯೋಗಿಸಿಕೊಳ್ಳುವ ಸಾಮರ್ಥ್ಯವಿರಲಿಲ್ಲ.

ಹೇಳಿ ಕೇಳಿ, ಗಣೇಶ್ ಅದ್ಭುತ ನಟನಲ್ಲ. ಆದರೆ ಆತನಲ್ಲಿ ಕೆಲವು ವಿಶೇಷವಾದ ಆಕರ್ಷಣೆಗಳಿವೆ. ...ದಾಹರಣೆಗೆ ಆತನ ನಗು ಮತ್ತು ಡೈಲಾಗ್ ಡೆಲಿವರಿ ಶೈಲಿ. ಗಣೇಶನಿಗೆ ಸೂಟ್ ಆಗುವುದು ...ರ್‌ಬಾಯ್ ಕತೆಗಳು. ಆದರೆ ಅದನ್ನೇ ಬಿಟ್ಟು ಈತನಿಂದ ಟೈಗರ್ ಪ್ರಭಾಕರ್ ಶೈಲಿಯಲ್ಲಿ ಹೊಡೆ ...ಡಿಸಿದರೆ ಜನ ಅದನ್ನು ಒಪ್ಪುತ್ತಾರೆಯೇ? ತಾನು ಸಕಲಕಲಾವಲ್ಲಭ ಎಂದೆನಿಸಿಕೊಳ್ಳಲು ಗಣೇಶ್ ...ರಟಿದ್ದೇ ಎಲ್ಲಾ ಅವಾಂತರಕ್ಕೆ ಕಾರಣ ಎನ್ನಬಹುದು.

'ಮುಂಗಾರು ಮಳೆ' ಬಿದ್ದಾಗ ಕನ್ನಡ ಚಿತ್ರರಂಗದ ನೆಲದಲ್ಲಿ ಹೊಸ ಬೆಳೆ ಮತ್ತು ಫಲ ಕಾಣಿಸಲಾರಂಭಿಸಿತು. ...ವಾರು ವರ್ಷಗಳಿಂದ ಬಾಕ್ಸಾಫೀಸ್ ದೊರೆ ಎನಿಸಿದ್ದ ಸಾಹಸಸಿಂಹ ವಿಷ್ಣುವರ್ಧನ್ ಕುರ್ಚಿಯೇ ...ಲ್ಲಾಡಿತ್ತು. ಶಿವಣ್ಣ ಹಾಗೂಹೀಗೂ ಕುಂಟುತ್ತಾ ಸಾಗುತ್ತಿದ್ದರು. ಉಪ್ಪಿ ಸಪ್ಪೆಯಾಗಿ ಕಂಡರು. ಮಾತ್ರವಲ್ಲ ... ಗಣೇಶ್ ನಟಿಸಿದ ಆರು ಚಿತ್ರಗಳು ಶತದಿನೋತ್ಸವ ಆಚರಿಸಿದ್ದವು. ಆದರೆ ಈಗ ಗಣೇಶ್ ...ಟಿಸಿರುವ ಚಿತ್ರ ಅರ್ಧ ಸೆಂಚುರಿ ಬಾರಿಸುವುದೇ ಕಷ್ಟವಾಗಿ ಕಾಣುತ್ತಿದೆ.

ಬೆಳಕಿನ ಹಬ್ಬದ ಈ ಶುಭ ಸಂದರ್ಭದಲ್ಲಿ ಬಿಡುಗಡೆಗೊಂಡಿರುವ 'ಸಂಗಮ' ಠುಸ್ ...ಕಿಯಾಗುತ್ತಿರುವುದು ಗಣೇಶ್‌ನ ತಾರಾಮೌಲ್ಯಕ್ಕೆ ದೊಡ್ಡ ಆಘಾತವೇ ಸರಿ. ಅನುಭವಿ ನಿರ್ದೇಶಕ ...ತ್ತು ಒಳ್ಳೆಯ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡರೆ ಗಣೇಶ್ ಮತ್ತೆ ಮೊದಲಿನಂತೆ ಚಿಗುರುವುದರಲ್ಲಿ ...ವುದೇ ಸಂಶಯವಿಲ್ಲ. ಹಣದ ಥೈಲಿಗಿಂತ ಸಿನಿಮಾದ ಕಥೆ ಮುಖ್ಯ ಎಂಬ ಸತ್ಯ ಸ್ವತಃ ಗಣೇಶನಿಗೆ ...ರ್ಥವಾದರೆ ಆತನಿಗೇ ಒಳ್ಳೆಯದು.

■ ಶೆಣೈ

ಗಣೇಶನ ಮೊದಲ ಚಿತ್ರ 'ಚೆಲ್ಲಾಟ' ದೊಡ್ಡ ಹಿಟ್ ಆಗದಿದ್ದರೂ ಅದಕ್ಕೆ ಕಡಿಮೆ ಹಣ ...ಚ್ಚವಾಗಿದ್ದರಿಂದ ಅದರ ನಿರ್ಮಾಪಕರಿಗೆ ಒಂದಿಷ್ಟು ಲಾಭ ತಂದಿತ್ತು. ಆತನ ಎರಡನೇ ಚಿತ್ರ ...ಮುಂಗಾರು ಮಳೆ' ಚಿನ್ನದ ಮೊಟ್ಟೆಯನ್ನೇ ಇಟ್ಟಿತ್ತು. ಇದಾದನಂತರ ಬಂದ 'ಹುಡುಗಾಟ' '... ...ಳೆ'ಯ ಸ್ಪರ್ಶದಿಂದಲೇ ಐದು ಕೋಟಿ ಲಾಭ ಮಾಡಿತ್ತು. ಆಮೇಲೆ 'ಕೃಷ್ಣ' ...ದು ಅದರಲ್ಲಿ ಗಣೇಶ್ ಜೊತೆ ಪೂಜಾ ಗಾಂಧಿ ಜೋಡಿಯಾಗಿದ್ದರಿಂದ ...ಮುಂಗಾರು ಮಳೆ'ಯ ಮ್ಯಾಜಿಕ್‌ಅನ್ನು ನಿರೀಕ್ಷಿಸಿ ಥಿಯೇಟರಿಗೆ ಜನ ...ಗ್ಗಿಬಿಟ್ಟರು. ಫಲಿತಾಂಶ ನಿರ್ಮಾಪಕ ರಮೇಶ್ ಯಾದವ್ ತಮ್ಮ ಜೀವನದಲ್ಲಿ ...ದಲ ಬಾರಿ ದೊಡ್ಡ ಮೊತ್ತವಾದ ಐದು ಕೋಟಿ ಲಾಭ ಗಳಿಸಿದರು. ...ಗ ರಿಮೇಕ್ ಕಿಂಗ್ ಎಸ್. ನಾರಾಯಣ್ 'ಚೆಲುವಿನ ಚಿತ್ತಾರ' ಎಂಬ ...ಮೇಕ್ ಚಿತ್ರ ಮಾಡಿ ಕನಿಷ್ಠ 10 ಕೋಟಿ ಲಾಭವನ್ನು ತಮ್ಮ ಜೇಬಿಗೆ ...ಳಿಸಿಕೊಂಡರು. ಇದಾದ ನಂತರ ಯೋಗರಾಜ ಭಟ್ ಮತ್ತೆ ಗಣೇಶ್‌ನನ್ನು ...ಟ್ಟುಕೊಂಡು 'ಗಾಳಿಪಟ' ಹಾರಿಸಿದರು. ಆ ಚಿತ್ರ ಮತ್ತೊಂದು 'ಮುಂಗಾರು ...ಳೆ' ಆಗದಿದ್ದರೂ ನಿರ್ಮಾಪಕರಿಗೆ ಎಂಟು ಕೋಟಿ ಲಾಭ ತಂದಿತು.

ಅದೇ ಕೊನೆ. ಇವುಗಳ ನಂತರ ಬಿಡುಗಡೆಯಾದ 'ಅರಮನೆ' ಮತ್ತು ...ಬೊಂಬಾಟ್' ಸೋತವು. ಇವುಗಳ ನಿರ್ಮಾಪಕರು ಚಿತ್ರಗಳನ್ನು ಮೊದಲೇ ...ರಿದ್ದರಿಂದ ಅವರಿಗೇನು ಅಷ್ಟು ನಷ್ಟವಾಗದಿದ್ದರೂ ಅವುಗಳನ್ನು ಖರೀದಿಸಿದ್ದ ...ತರಕರು ಹೇರಳವಾಗಿ ಹಣ ಕಳೆದುಕೊಂಡರು. ಇದೀಗ 'ಸಂಗಮ' ...ದೇ ಹಾದಿಯಲ್ಲಿ ಸಾಗುತ್ತಿದೆ....



ಗಣೇಶನ ಲಾಭ!



ವಿಲನ್ ಪಾತ್ರಗಳಲ್ಲಿ ಮುನ್ನುಗ್ಗುತ್ತಿರುವ

ಮುನಿ


ಪುನೀತ್ ಅಭಿನಯದ 'ರಾಜ್', ಗಣೇಶನ 'ಸರ್ಕಸ್', ಅಜಯ್‌ನ 'ಜಾಜಿ ಮಲ್ಲಿಗೆ', ಶಿವರಾಜ್‌ಕುಮಾರ್‌ರ 'ನಂದ', 'ಭಾಗ್ಯದ ಬಳೆಗಾರ'... ಹೀಗೆ ಕನ್ನಡದ ಬಹುತೇಕ ಎಲ್ಲ ನಾಯಕನಟರೆದುರು ಈಗ ಮುನಿಯೇ ವಿಲನ್!

ಈ ದೊಡ್ಡ ಕಣ್ಣುಗಳ, ನೀಳ ದೇಹದ ಮುನಿ ಅನ್ನೋ ನಟ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ?

ಐದಾರು ವರ್ಷಗಳ ಹಿಂದಷ್ಟೇ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಲ್ಯಾಬ್ ಅಟೆಂಡರ್ ಆಗಿದ್ದ ಈ ಹುಡುಗ ಇವತ್ತು ಕನ್ನಡದಲ್ಲಿ ಬರುತ್ತಿರುವ ಪ್ರತಿ ಚಿತ್ರದಲ್ಲೂ ಕಾಣಿಸಿಕೊಳ್ಳುವಷ್ಟು ಅನಿವಾರ್ಯವಾಗಿಬಿಟ್ಟಿದ್ದಾನೆ. ನಾಲ್ಕೈದು ಸಾವಿರ ಸಂಬಳಕ್ಕೆ ತಿಂಗಳಿಡೀ ಬೆವರು ಸುರಿಸುತ್ತಿದ್ದ ಈತ ಇಂದು ಲಕ್ಷಾಂತರ ರೂಪಾಯಿ ಸಂಭಾವನೆ ಪಡೆಯುವ ನಟನಾಗಿ ರೂಪುಗೊಂಡಿದ್ದಾನೆ!

ಬೆಂಗಳೂರಿನ ಶ್ರೀನಗರದಲ್ಲೇ ಹುಟ್ಟಿ ಬೆಳೆದ ಮುನಿ ಯಾನೆ ಮುನಿರಾಜುಗೆ ಮೊದಲಿನಿಂದಲೂ ಈ ನಟನೆ ಬಗ್ಗೆ ಅಪಾರ ಆಸಕ್ತಿ. ವಿಜಯಾ ಕಾಲೇಜಿನಲ್ಲಿ ಅಟೆಂಡರ್ ಆಗಿದ್ದಾಗಲೂ ಅಲ್ಲಿ ನಡೆಯುತ್ತಿದ್ದ ಡ್ರಾಮಾ ಕಾಂಪಿಟೇಷನ್ನುಗಳಿಗೆ ಸ್ಟೇಜು ಜೋಡಿಸುತ್ತಿದ್ದ ಮುನಿ 'ನಾನೂ ಅವರಂತೇ ಅಭಿನಯಿಸಬೇಕು' ಎಂದು ಹಂಬಲಿಸುತ್ತಿದ್ದರಂತೆ.

ಈತನ ಕಲಾಬಾಧೆಯನ್ನು ಗಮನಿಸಿದ, ಪಕ್ಕದ ಮನೆಯಲ್ಲೇ ವಾಸವಿರುವ ಹಿರಿಯ ನಟ ದತ್ತಣ್ಣ 'ನೋಡಯ್ಯಾ... ಸುಮ್ನೆ ಕೂತ ಜಾಗದಲ್ಲೇ ಆಸೆ ಪಡ್ತಾ ಇದ್ರೆ ಏನೂ ಸಾಧಿಸೋಕೆ ಆಗಲ್ಲ, ಹೋಗಿ ಎ.ಎಸ್. ಮೂರ್ತಿಯವರ ಅಭಿನಯ ತರಂಗಕ್ಕೆ ಸೇರು. ಏನಾದರೂ ಕಲಿತು ಉದ್ಧಾರವಾಗಬಹುದು' ಎಂದು ಸೂಚಿಸಿದರಂತೆ. ದತ್ತಣ್ಣರ ಆಣತಿಯಂತೆ ಮುನಿ ಮೂರ್ತಿಯವರ ಕಲಾಮಂದಿರವನ್ನು ಸೇರಿದ್ದೂ ಆಯಿತು.



ಆನಂತರ ಅಲ್ಲಿನ ನಾಟಕಗಳಲ್ಲಿ ಪಾಲ್ಗೊಳ್ಳುತ್ತಾ ನಟನೆ ಆರಂಭಿಸಿದ ಮುನಿ, ಗಿರೀಶ್ ಕಾರ್ನಾಡ್ ರಚಿಸಿರುವ, ಬಿ. ಬಸವಲಿಂಗಯ್ಯ ನಿರ್ದೇಶಿಸಿದ 'ಅಗ್ನಿ ಮತ್ತು ಮಳೆ' ನಾಟಕದಲ್ಲಿ ಯವತೀರ್ಥನ ಪಾತ್ರ ನಿರ್ವಹಿಸಿದರು. ಹಾಗೆಯೇ ಜಯಂತ್ ಕಾಯ್ಕಿಣಿಯವರು ಭಾವಾನುವಾದ ಮಾಡಿರುವ 'ಮೈ ಫೇರ್ ಲೇಡಿ' ಎಂಬ ಇಂಗ್ಲಿಷ್ ನಾಟಕದ ಕನ್ನಡ ರೂಪ 'ಹೂ ಹುಡುಗಿ' ನಾಟಕದಲ್ಲಿ ಹೂ ಮಾರುವ ಹುಡುಗಿಗೆ ಅಚ್ಚ ಕನ್ನಡ ಕಲಿಸುವ ಪ್ರೊಫೆಸರ್ ಪಾತ್ರ ಮಾಡಿದರು. ಈ ಎರಡು ನಾಟಕಗಳು ಮುನಿಗೆ 'ಒಬ್ಬ ಒಳ್ಳೆಯ ನಟ' ಎಂದು ಅಫಿಡವಿಟ್ಟನ್ನು ಕೊಟ್ಟವು. ಅಲ್ಲದೇ ಬೆಸ್ಟ್ ಆಕ್ಟರ್ ಅವಾರ್ಡ್ ಕೂಡ ಮುನಿಗೆ ಲಭಿಸಿತು.

ಹೀಗೆ ರಂಗ ಪ್ರಯೋಗಗಳಲ್ಲಿ ಗುರುತಿಸಿಕೊಂಡಿದ್ದ ಮುನಿಯನ್ನು ಕಿರುತೆರೆಗೆ ತಂದದ್ದು ಎಸ್. ನಾರಾಯಣ್. ತಮ್ಮ 'ಸುಮತಿ' ಧಾರಾವಾಹಿಯಲ್ಲಿ ಮುನಿಗೆ ಒಳ್ಳೆಯ ಅವಕಾಶ ನೀಡಿದರು. ನಂತರ 'ಮಹಾಯಾನ', 'ಆಸೆಗಳು', 'ಆನಂದ ಸಾಗರ'ದಿಂದ ಹಿಡಿದು ಇಂದಿಗೂ ಪ್ರಸಾರವಾಗುತ್ತಿರುವ 'ಮಾಂಗಲ್ಯ'ದಲ್ಲೂ ನಟಿಸಿರುವ ಮುನಿ ಸಹಜವಾಗಿಯೇ ಬೆಳ್ಳಿತೆರೆಗೂ ಪ್ರವೇಶ ಪಡೆದರು.

'ರಾಕ್ಷಸ' ಚಿತ್ರದಿಂದ ಆರಂಭವಾದ ಅವರ ಸಿನಿಮಾ ನಂಟು ಈಗಾಗಲೇ 'ಚೆಲ್ಲಾಟ', 'ಯಶವಂತ್', 'ಪೂಜಾರಿ', 'ಸೈನೇಡ್', 'ಮಾದೇಶ' .... ಹೀಗೆ ಮೂವತ್ತನಾಲ್ಕು ಚಿತ್ರಗಳಲ್ಲಿ ಅಭಿನಯಿಸುವಂತೆ ಮಾಡಿದೆ. ಅಷ್ಟೇ ಅಲ್ಲ ಅವರು ನಟಿಸಿರುವ ಸುಮಾರು 18 ಸಿನಿಮಾಗಳು ಬರುವ ದಿನಗಳಲ್ಲಿ ಬಿಡುಗಡೆಗೊಳ್ಳಲಿವೆ. ಈಗಲೂ ಮುನಿ ಕೈಯಲ್ಲಿ ಏನಿಲ್ಲವೆಂದರೂ ಎಂಟು-ಹತ್ತು ಸಿನಿಮಾಗಳಿವೆ. ಪುನೀತ್ ಅಭಿನಯದ 'ರಾಜ್', ಗಣೇಶನ 'ಸರ್ಕಸ್', ಅಜಯ್‌ನ 'ಜಾಜಿ ಮಲ್ಲಿಗೆ', ಶಿವರಾಜ್‌ಕುಮಾರ್ ಅವರ 'ನಂದ', 'ಭಾಗ್ಯದ ಬಳೆಗಾರ' ... ಹೀಗೆ ಕನ್ನಡದ ಬಹುತೇಕ ಎಲ್ಲ ನಾಯಕನಟರೆದುರು ಈಗ ಮುನಿಯೇ ವಿಲನ್! ಈ ಮಧ್ಯೆ ತಮಿಳಿನಲ್ಲಿ ಪ್ರಕಾಶ್ ರೈ ನಿರ್ಮಿಸಿ ನಟಿಸಿರುವ, ಹಲವಾರು ಪ್ರಶಸ್ತಿಗಳನ್ನು ಪಡೆದಿರುವ 'ಕಾಂಜೀವರಮ್' ಚಿತ್ರದಲ್ಲೂ ಅಭಿನಯಿಸಿ ಬಂದಿದ್ದಾರೆ ಮುನಿ.

ಕನ್ನಡದ ಮತ್ತೊಬ್ಬ ನಟ ಕಿಶೋರ್ ಮತ್ತು ಮುನಿ ಇಬ್ಬರೂ 'ರಾಕ್ಷಸ' ಸಿನಿಮಾದಿಂದಲೇ ಚಿತ್ರರಂಗಕ್ಕೆ ಪರಿಚಯಿಸಲ್ಪಟ್ಟವರು. ಆದರೆ ಇಂದು ಕಿಶೋರ್ ಪರಭಾಷಾ ಚಿತ್ರಗಳಲ್ಲಿ ಬ್ಯುಸಿ ಇರುವುದರಿಂದ ಕಿಶೋರ್‌ಗೆ ದಕ್ಕಬೇಕಿದ್ದ ಅವಕಾಶಗಳೆಲ್ಲಾ ಇವತ್ತು ಮುನಿ ಪಾಲಾಗುತ್ತಿವೆ.

ಶಿವರಾಜ್‌ಕುಮಾರ್ ಅಭಿನಯದ ಚಿತ್ರವೊಂದಕ್ಕೆ ವಿಲನ್ ರೋಲ್‌ಗಾಗಿ ಬಾಲಿವುಡ್‌ನ ನಾನಾ ಪಾಟೇಕರ್‌ರನ್ನು ಕರೆತರುವ ಯೋಜನೆ ನಿರ್ಮಾಪಕರಿಗಿತ್ತು. ಆದರೆ ಸ್ವತಃ ಶಿವರಾಜ್‌ಕುಮಾರ್ ಮುನಿಯನ್ನು ಕರೆದು ನಿರ್ಮಾಪಕರ ಮುಂದೆ ನಿಲ್ಲಿಸಿ "ನಾನಾ ಪಾಟೇಕರ್‌ಗಿಂತ ಈತ ಯಾವುದರಲ್ಲಿ ಕಡಿಮೆ? ನಮ್ಮ ಕನ್ನಡದಲ್ಲಿ ಇಂಥ ನಟನನ್ನು ಇಟ್ಟುಕೊಂಡು ನೀವ್ಯಾಕೆ ಭಾಷೆ ಬರದ ಬೇರ್‍ಯಾರಿಗೋ ಮಣೆ ಹಾಕ್ತೀರಿ? ನನ್ನ ಚಿತ್ರಕ್ಕೆ ಈತನನ್ನೇ ವಿಲನ್ ಮಾಡಿ" ಎಂದು ಶರಾ ಹೊರಡಿಸಿದರಂತೆ. ಈ ವಿಚಾರದಲ್ಲಿ ಬೇರೆಲ್ಲ ನಟರಂತೆ ಮುನಿ ಕೂಡ ಶಿವಣ್ಣನಿಗೆ ಕೃತಜ್ಞರಾಗಿದ್ದಾರೆ.

ಮುನಿ ಬಗ್ಗೆ ಬಹಳಷ್ಟು ಜನರಿಗೆ ಗೊತ್ತಿರದ ವಿಷಯವೊಂದಿದೆ. ಅದೇನೆಂದರೆ ಇವತ್ತಿಗೂ ಬೆಳಗ್ಗಿನ ಜಾವ ಮುನಿ ಬರ್ಮುಡಾ ಚಡ್ಡಿ ತೊಟ್ಟು ಸೈಕಲ್ ಏರಿ ಗಾಂಧಿಬಜಾರ್ ಮತ್ತು ಶ್ರೀನಗರ ಏರಿಯಾದ ಹಲವಾರು ಮನೆಗಳಿಗೆ ಹಾಲು ಹಾಕುತ್ತಾರೆ! ಚಿತ್ರರಂಗದಲ್ಲಿ ಇಷ್ಟೊಂದು ಅವಕಾಶ ಮತ್ತು ಜನಪ್ರಿಯತೆ ಪಡೆದಿದ್ದರೂ ತಮ್ಮ ಕುಲಕಸುಬಾದ ಹಾಲು ವ್ಯಾಪಾರವನ್ನು ಬಿಡಲು ಮುನಿಗೆ ಮನಸ್ಸಿಲ್ಲವಂತೆ. ಶೂಟಿಂಗ್ ಮುಗಿಸಿ ರಾತ್ರಿ ಮೂರು ಗಂಟೆಗೆ ಬಂದರೂ ಮತ್ತೆ ಬೆಳಗ್ಗಿನ ಜಾವ ನಾಲ್ಕಕ್ಕೇ ಎದ್ದು ಹಸುಗಳ ಸಗಣಿ ಬಾಚಿ, ಹಾಲು ಕರೆದು ಅದನ್ನು ಮನೆಗಳಿಗೆ ಸರಬರಾಜು ಮಾಡಿ ಆನಂತರವೇ ಚಿತ್ರೀಕರಣಕ್ಕೆ ಮುನಿ ಓಡುತ್ತಾರೆ.

ಮನೆಯಲ್ಲಿ ಒಂದು ಮಟ್ಟದ ಶ್ರೀಮಂತಿಕೆಯೂ ಮುನಿಗಿದೆ. "ಆದರೆ ನಾವು ಎಷ್ಟೇ ಬೆಳೆದರೂ ಸೋಮಾರಿತನ ಮತ್ತು ಕೀಳರಿಮೆಗೆ ಒಡ್ಡಿಕೊಳ್ಳಬಾರದು. ನಾವು ಮಾಡುವ ಎಲ್ಲ ಕೆಲಸವನ್ನೂ ಪ್ರೀತಿಯಿಂದ ಮಾಡಬೇಕು" ಎಂಬುದು ಮುನಿಯವರ ಜೀವನ ಸಿದ್ಧಾಂತ. ಮುನಿ ಓದಿದ, ಆನಂತರ ಅಟೆಂಡರ್ ಆಗಿ ಕೆಲಸಕ್ಕೆ ಸೇರಿದ್ದ ವಿಜಯ ಕಾಲೇಜಿನವರೇ ಇತ್ತೀಚೆಗೆ ಮುನಿಯನ್ನು ಒಂದು ಕಾರ್ಯಕ್ರಮಕ್ಕೆ ಕರೆದು ಅವರನ್ನು ಮುಖ್ಯ ಅತಿಥಿಯನ್ನಾಗಿ ವೇದಿಕೆಯ ಮೇಲೆ ಕೂರಿಸಿ ಸನ್ಮಾನ ಮಾಡಿದ್ದಾರೆ. ಇದಕ್ಕಿಂತಾ ದೊಡ್ಡ ಗೆಲುವುಂಟೇ?

ಕನ್ನಡದಲ್ಲಿ ಇವತ್ತು ಇಷ್ಟು ಜನಪ್ರಿಯತೆಯನ್ನು ಗಳಿಸಿಕೊಂಡಿರುವ ಮುನಿಯನ್ನು ತೆಲುಗು, ತಮಿಳು ಹಾಗೂ ಹಿಂದಿ ಚಿತ್ರರಂಗಗಳೂ ಕೈಬೀಸಿ ಕರೆಯುತ್ತಿವೆ. ಆದರೆ ಅವರನ್ನು ಕನ್ನಡದಲ್ಲೇ ಉಳಿಸಿಕೊಳ್ಳಬೇಕಿದೆ.....

■ ಅರುಣ್.ಜಿ

R B P LANKESH, Kannada Weekly Price Rs. 12/- 5-11-2008 RNI No. KARKAN2005/14648 Regd.No.KA/RNP/BGS/2036/2008-10 Posted at



ಸಾಚಾಗಳ ಸಂಕಟ!

ನಾಯಕನಟ ಜಗ್ಗೇಶ್ ರಾಜಕಾರಣಕ್ಕೆ ಧುಮುಕಿ ಶಾಸಕರಾಗಿ, ಆನಂತರ ರಾಜೀನಾಮೆ ನೀಡಿ, ಆದಾದ ಬಳಿಕ ಬಸ್ಸು ಓಡಿಸುವ ಸಂಸ್ಥೆಗೆ ಉಪಾಧ್ಯಕ್ಷರಾಗಿರುವುದು ನಿಮಗೆ ಗೊತ್ತೇ ಇದೆ. ಜಗ್ಗೇಶ್ ಅವರ ಈ ಬದ್ಧಿಯಿಂದಾಗಿ ಹೆಚ್ಚು ತೊಂದರೆ ಅನುಭವಿಸುತ್ತಿರುವುದು ಮತ್ತೊಬ್ಬ ಹಾಸ್ಯನಟ ಎಸ್.ನಾರಾಯಣ್.

ಎಸ್. ನಾರಾಯಣ್ ತಮ್ಮ ಸಂಸ್ಥೆ ನಿರ್ಮಿಸುತ್ತಿರುವ 'ಚಿಕ್ಕಪೇಟೆ ಸಾಚಾ' ಚಿತ್ರದ ನಿರ್ದೇಶನ ಜವಾಬ್ದಾರಿಯನ್ನು ಮೊದಲ ಬಾರಿಗೆ ಮಾಗಡಿ ಪಾಂಡು ಎಂಬುವವರಿಗೆ ನೀಡಿದ್ದರು. ಆದರೆ ಜಗ್ಗೇಶರನ್ನು ಶೂಟಿಂಗ್‌ಗೆ ಕರೆತರುವುದೇ ಪಾಂಡುಗೆ ದುಸ್ಸಾಹಸದ ಕೆಲಸವಾಗಿದೆಯಂತೆ. ಒಂದು ವೇಳೆ ಶೂಟಿಂಗ್‌ಗೆ ಬಂದರೂ ಜಗ್ಗೇಶ್‌ಗೆ ನಟನೆಯ ಸೂಚನೆ ಕೊಡಲು ಪಾಂಡು ಹಿಂಜರಿಯುತ್ತಿದ್ದಾರಂತೆ. ಇದನ್ನೆಲ್ಲಾ ಗಮನಿಸಿದ ಎಸ್. ನಾರಾಯಣ್ ಈ ಚಿತ್ರದ ಬಜೆಟ್ ನಿಗದಿಗಿಂತಲೂ ಹೆಚ್ಚುತ್ತಿರುವುದನ್ನು ನೋಡಿ ಅಪ್ಸೆಟ್ ಆಗಿದ್ದಾರಂತೆ. ತನ್ನ ಮಗ ನಟಿಸಿದ 'ಚೈತ್ರದ ಚಂದ್ರಮ' ಮುಗ್ಗರಿಸಿದ ಬೇಜಾರಿನಲ್ಲಿರುವಾಗಲೇ ಈ ಚಿತ್ರ ಹಳಿತಪ್ಪುತ್ತಿರುವುದು ಅವರಿಗೆ ಆತಂಕ ತಂದಿದೆ. ಕೊನೆಗೆ ನಾರಾಯಣ್ ಅವರೇ ನಿರ್ದೇಶನದ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಹೀಗಾಗಿ '.... ಸಾಚಾ' ಚಿತ್ರದ ಕೆಲಸ ಈಗ ನಿರ್ವಿಘ್ನವಾಗಿ ಮತ್ತೆ ನಡೆಯುತ್ತಿದೆ. ಪಾಂಡು ರಿಲ್ಯಾಕ್ಸ್ ಆಗಿದ್ದಾರೆ. ಜಗ್ಗೇಶ್ ಆದಷ್ಟು ಬೇಗ ಸಿನಿಮಾ ಮುಗಿಸಿಕೊಡುವ ಪೋಸು ನೀಡುತ್ತಿದ್ದಾರೆ.





ಒಂದಾದವರ 'ಮಸ್ತ್ ಮಜಾ'!

ಉತ್ತರ ಮತ್ತು ದಕ್ಷಿಣ ಧ್ರುವಗಳಂತಿದ್ದ ಉಪೇಂದ್ರ ಮತ್ತು ಸುದೀಪ್ 'ಮಸ್ತ್ ಮಜಾ ಮಾಡಿ' ಚಿತ್ರದಲ್ಲಿ ಮೊದಲ ಬಾರಿಗೆ ಮುಖಾಮುಖಿಯಾಗಿದ್ದಾರೆ.

'ಮಸ್ತ್ ಮಜಾ ಮಾಡಿ' ಚಿತ್ರದ ನಾಯಕ ನಾಯಕಿ ಸುದೀಪ್ ಮತ್ತು ಜೆನ್ನಿಫರ್ ಕೊತ್ವಾಲ್ ಆಗಿದ್ದರೂ ಉಪ್ಪಿ ಹಾಡೊಂದರಲ್ಲಿ ಮೊದಲ ಬಾರಿಗೆ ಅತಿಥಿನಟರಾಗಿ ಕಾಣಿಸಿಕೊಂಡಿದ್ದಾರೆ. ಆ ಹಾಡಿನಲ್ಲಿ ಉಪ್ಪಿ ಜೊತೆ ಕನ್ನಡದ ಹತ್ತು ಜನ ನಾಯಕಿಯರು ಕುಣಿದುಕುಪ್ಪಳಿಸಿದ್ದಾರಂತೆ. ಅಂದಹಾಗೆ, ಈ ಹಾಡೊಂದಕ್ಕೇ ಅರವತ್ತು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರಂತೆ. ಉಪ್ಪಿಗೆ 30, ಸೆಟ್ಟಿಗೆ 20 ಮತ್ತು ನಾಯಕಿಯರಿಗೆ ತಲಾ ಒಂದೊಂದು...! ಈ ಸಿಂಪಲ್ ಲೆಕ್ಕಾಚಾರ ಹಾಕಿದರೆ ಯಾಕಿಷ್ಟು ವೆಚ್ಚ ಎಂದು ಅರ್ಥವಾಗುತ್ತದೆ.

ಅನಂತು ನಿರ್ದೇಶನದ ಈ ಚಿತ್ರದ ನಿರ್ಮಾಪಕ ಸೌಂದರ್ಯ ಜಗದೀಶ್. ತಮ್ಮ ಚೊಚ್ಚಲ ನಿರ್ಮಾಣದ ಚಿತ್ರಕ್ಕೆ ಜಗದೀಶ್ ಯಥೇಚ್ಛವಾಗಿ ಹಣ ಸುರಿಯುತ್ತಿದ್ದಾರೆ. ಒಂದು ಕಾಲದಲ್ಲಿ ರಾಮು ಸಮೇತ ಅನೇಕ ನಿರ್ಮಾಪಕರಿಗೆ ಫೈನಾನ್ಸ್ ಮಾಡುತ್ತಿದ್ದ ಈ ಜಗದೀಶ್ ಈಗ ಸ್ವತಃ ತಾವೇ ನಿರ್ಮಾಣಕ್ಕೆ ಇಳಿದಿದ್ದಾರೆ.





ಸುರೇಶ್ ಸ್ಮೈಲ್ಸ್

'ಗಾಂಧಿ ಸ್ಮೈಲ್ಸ್' ಎಂಬ ಚಿತ್ರ ಈಗ ಬಿಡುಗಡೆಗೆ ತಯಾರಾಗಿದೆ. ಮೊನ್ನೆ ಈ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭವೂ ನಡೆಯಿತು. ವಿಶೇಷವೆಂದರೆ, ಕ್ಯಾಸೆಟ್‌ನ ಕವರ್ ಮೇಲೆ ಗಾಂಧಿ ತಾತ ನಗುತ್ತಿರುವ ದೊಡ್ಡ ಫೋಟೋವೊಂದನ್ನು ಬಿಟ್ಟರೆ ಬೇರೆ ಯಾವ ನಾಯಕ ನಾಯಕಿಯರ ಚಿತ್ರವೂ ಇಲ್ಲ. ಅಷ್ಟರಮಟ್ಟಿಗೆ ಗಾಂಧೀಜಿಯ ಹೆಸರಿನಲ್ಲಿ ವ್ಯಾಪಾರ ಮಾಡಲು ಹೊರಟಿರುವ ನಿರ್ಮಾಪಕ ಎನ್.ಎಂ. ಸುರೇಶ್ ಅವರ ಧೈರ್ಯವನ್ನು ಮೆಚ್ಚಲೇಬೇಕು.

ಕ್ರಿಷ್ ಜೋಷಿ ನಿರ್ದೇಶನದ ಮೊದಲ ಚಿತ್ರವಿದು. ಬಹುತೇಕ ಎಲ್ಲ ಹೊಸ ಕಲಾವಿದರನ್ನು ಹಾಕಿ ಚಿತ್ರ ಮುಗಿಸಿದ್ದಾರೆ.



'ಮೇಘವರ್ಷಿಣಿ'
ಅರ್ಚನಾ

ವಿಷ್ಣು 200ನೇ ಚಿತ್ರಕ್ಕೆ ನಾಣಿ ಔಟ್!



ವಿಷ್ಣುವರ್ಧನ್ ಅಭಿನಯದ 200ನೇ ಚಿತ್ರವನ್ನು 'ಆಪ್ತಮಿತ್ರ' ಚಿತ್ರದ ಸಹಪಾಲುದಾರ ಕೃಷ್ಣಕುಮಾರ್ ನಿರ್ಮಿಸಲಿದ್ದಾರೆ ಎಂದು ನಾವು ಬಹಳ ಹಿಂದೆಯೇ ಬರೆದಿದ್ದೆವು.

ಆದರೆ ಈಗ ಅದ್ಯಾಕೋ ಏನೋ? ದಿಢೀರನೆ ವಿಷ್ಣುರವರ [illegible] ಚಿತ್ರಕ್ಕೆ ಎಲ್ಲಿಲ್ಲದ ಡಿಮ್ಯಾಂಡ್ ಬರಲಾರಂಭಿಸಿದೆ. ರಾಕ್‌ಲೈನ್ ವೆಂಕಟ[illegible] ಮತ್ತು ಎಸ್.ನಾರಾಯಣ್ ಅಲ್ಲದೆ ಇತರೆ ನಿರ್ಮಾಪಕರು ಕ[illegible] ವಿಷ್ಣು ಕಾಲ್‌ಶೀಟ್‌ಗಾಗಿ ಪ್ರಯತ್ನಿಸಿದ್ದರು.

ಆದರೆ ಯಾವತ್ತೂ ಕೊಟ್ಟ ಮಾತಿಗೆ ತಪ್ಪದ ವಿಷ್ಣುವರ್ಧನ್ "[illegible] ಕೃಷ್ಣಕುಮಾರ್‌ರಿಗೆ ಮಾತು ಕೊಟ್ಟಾಗಿದೆ" ಎಂದು ನಯವಾಗಿ [illegible] ಆಫರ್‌ಗಳನ್ನೂ ನಿರಾಕರಿಸುತ್ತಿದ್ದಾರೆ. ಇದು ಬಹಳ ಹಿಂದಿನಿಂದ ವಿಷ್ಣು ಪಾಲಿಸಿಕೊಂಡುಬಂದಿರುವ ಒಂದು ಸಂಪ್ರದಾಯ.

ವಿಷ್ಣು ಸಂಪ್ರದಾಯಗಳಲ್ಲಿ ಇನ್ನೊಂದು ವಿಶೇಷವೆಂದರೆ, ಎಷ್ಟೋ ಪರಭಾ[illegible] ನಿರ್ಮಾಪಕರುಗಳ ಆಮಿಷಗಳನ್ನು ಅವರು ನಿರ್ದಾಕ್ಷಿಣ್ಯವಾಗಿ ತಳ್ಳಿಹಾಕಿ[illegible] ಉದಾಹರಣೆಗೆ, ವಿಷ್ಣು ಲೈಂ ಲೈಟಿನಲ್ಲಿದ್ದಾಗ ಸಂಪೂರ್ಣ ಸಂಭಾವನೆ [illegible] ಕಾಲ್‌ಶೀಟ್ ಪಡೆಯಲು ಅನೇಕ ತೆಲುಗು ನಿರ್ಮಾಪಕರು ವಿಫಲ ಪ್ರ[illegible] ನಡೆಸಿದ್ದರು.

ಹೀಗಾಗಿ ಇವತ್ತಿಗೂ ವಿಷ್ಣು ನಿರ್ಮಾಪಕರೆಂದರೆ ಕೆ. ಮಂಜು, ಎಸ್. ನಾರಾಯ[illegible] ರಾಕ್‌ಲೈನ್ ವೆಂಕಟೇಶ್, ಗೋವಿಂದು, ಸೂರಪ್ಪ ಬಾಬು, ರಹಮಾನ್.... [illegible] ಇವೇ ನಾಲ್ಕೈದು ಕನ್ನಡದ ಹೆಸರುಗಳೇ ಚಾಲ್ತಿಯಲ್ಲಿರುವುದು. ವಿಷ್ಣು[illegible] ಮತ್ತೊಂದು ಸಂಪ್ರದಾಯವೆಂದರೆ, ಅವರು ಚಿತ್ರೀಕರಣಕ್ಕೆಂದು ವಿದೇಶಕ್ಕೆ ಹೋ[illegible] ಇಲ್ಲ. ಇತ್ತೀಚೆಗೆ ಹೊಸಬರ ಚಿತ್ರಗಳ ಹಾಡುಗಳೆಲ್ಲಾ ವಿದೇಶದಲ್ಲಿ ಚಿತ್ರೀ[illegible] ಗೊಳ್ಳುತ್ತಿದ್ದರೂ ವಿಷ್ಣು ಮಾತ್ರ ಅದೇ ಮೈಸೂರು ಮತ್ತು ಚಿಕ್ಕಮಗಳೂರುಗ[illegible] ಹಾಡನ್ನು ಮಾಡಿ ಎಂದು ನಿರ್ಮಾಪಕರಿಗೆ ಹೇಳುತ್ತಾರೆ. ವಿಷ್ಣು ಪಾಲಿ[illegible] ಇನ್ನೊಂದು ಸಂಪ್ರದಾಯವೆಂದರೆ, ಸಾಯಂಕಾಲ ಆರು ಗಂಟೆಯ ನಂತರ ಅ[illegible] ಚಿತ್ರೀಕರಣದಲ್ಲಿ ಭಾಗವಹಿಸುವುದಿಲ್ಲ. ಹೀಗಾಗಿ ನಿರ್ಮಾಪಕರಿಗೂ ಒ[illegible] ರೀತಿಯಲ್ಲಿ ಡಬಲ್ ಬಾಟಾ ಕೊಡುವ ವೆಚ್ಚ ಉಳಿದಂತಾಗುತ್ತದೆ.

ಇನ್ನೂರು ಚಿತ್ರದ ಗಡಿ ತಲುಪಿದರೂ ಇಂತಹ ಕೆಲವು ನಿಯಮಗ[illegible] ಚಾಚೂತಪ್ಪದೆ ಪಾಲಿಸುವ ವಿಷ್ಣುಗೂ ಈಗಿನ ಯುವ ನಟರಿಗೂ ಎಷ್ಟು ವ್ಯತ್ಯಾಸ[illegible] ಅಲ್ಲವೇ? ಆದರೆ ವಿಷ್ಣುವಿನ 200ನೇ ಚಿತ್ರ ನಿರ್ದೇಶಿಸುವ ಅದೃಷ್ಟವಂತೂ ಸ[illegible] ಎಸ್. ನಾಣಿ ಪಾಲಿಗೆ ತಪ್ಪಿಹೋಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main,